ಸಂಪುಟ: 14 Volume | ಸಂಚಿಕೆ: 114 Issue | ಪುಟಗಳು 08 Pages | ಭಾನುವಾರ 09 ಆಗಸ್ಟ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೆಂಗಳೂರು | ಹುಬ್ಬಳ್ಳಿ | ಬೀದರ ಆವೃತ್ತಿ: ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**
ಸತ್ಯದ ಜೊತೆ ಬದುಕುವವನು ಯಾರಿಗೂ ಹೆದರಬೇಕಾಗಿಲ್ಲ.
–ಸಾಕ್ರೆಟಿಸ್

# ಮಲ್ಲಮ್ಮ ನುಡಿ

ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ



# ದಿ. ಬಸವರಾಜ ಪಾಟೀಲರ

## 10ನೇ ಪುಣ್ಯಸ್ಮರಣೆ

**ಹಾರ್ದಿಕ ನಮನಗಳು - ಭಾವಪೂರ್ಣ ಸ್ಮರಣೆ**

ಹುಮನಾಬಾದ್ ಕ್ಷೇತ್ರದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ, ಸರಳತೆ, ಸೌಜನ್ಯ ಹಾಗೂ ಜನಪರ ಕಾಳಜಿಯಿಂದ ಎಲ್ಲರ ಮನ ಗೆದ್ದ ಅಜಾತಶತ್ರು, ಹಿರಿಯ ನಾಯಕ

## ದಿ. ಬಸವರಾಜ ಪಾಟೀಲ

**ಹುಮನಾಬಾದ್**

ಅವರ 10ನೇ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರಿಗೆ ಭಕ್ತಿಪೂರ್ವಕ ನಮನಗಳು.



**ಶ್ರೀ ರಾಜಶೇಖರ ಬಿ. ಪಾಟೀಲ**
ಮಾಜಿ ಸಚಿವರು
ಹುಮನಾಬಾದ್



**ಡಾ.ಚಂದ್ರಶೇಖರ ಬಿ.ಪಾಟೀಲ**
ವಿಧಾನ ಪರಿಷತ ಸದಸ್ಯರು.
ಹುಮನಾಬಾದ್



**ಶ್ರೀ ಭೀಮರಾವ ಬಿ. ಪಾಟೀಲ**
ವಿಧಾನ ಪರಿಷತ ಸದಸ್ಯರು.
ಹುಮನಾಬಾದ್



**ಶ್ರೀ ಸೋಮಶೇಖರ ಬಿ.ಪಾಟೀಲ**
ಉದ್ಯಮಿಗಳು
ಹುಮನಾಬಾದ್



**ಶ್ರೀ ಅಭಿಷೇಕ ಆರ್. ಪಾಟೀಲ**
ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರು
ಬೀದರ

## ಕಾರ್ಯಕರ್ತರು ಮತ್ತು ಮುಖಂಡರ ಗಮನಕ್ಕೆ

### ಮಾಜಿ ಸಚಿವರಾದ ಶ್ರೀ ಬಸವರಾಜ ಪಾಟೀಲ್ ರವರ ಪುಣ್ಯಸ್ಮರಣೆ ಆಗಸ್ಟ್ 10ರಂದು

ಆಗಸ್ಟ್
10
2026

ಹುಮನಾಬಾದ್ : ನಗರದ ಶ್ರೀ ಬಸವರಾಜ ಪಾಟೀಲ್ ಕಲ್ಯಾಣ ಮಂಟಪದಲ್ಲಿ 10-08-2026ರಂದು ಬೆಳಗ್ಗೆ ಮಾಜಿ ಸಚಿವರಾದ ಶ್ರೀ ಬಸವರಾಜ ಪಾಟೀಲ್ ರವರ 10ನೇ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಪುಣ್ಯಸ್ಮರಣೆ ಕಾರ್ಯಕ್ರಮ ನಿಮಿತ್ತವಾಗಿ 09-08-2026ರಂದು ರಾತ್ರಿ 8 ಗಂಟೆಗೆ ಭಜನೆ, ದಿನಾಂಕ 10-08-2026ರಂದು ಬೆಳಗ್ಗೆ 9 ಗಂಟೆಗೆ ಸಮಾದಿಗೆ ಪೂಜಾ ಕಾರ್ಯಕ್ರಮ ಜರುಗಲಿದೆ.

**ಪುಣ್ಯಸ್ಮರಣೆ ಕಾರ್ಯಕ್ರಮ ವಿವರ**

| | | |
|---|---|---|
| 09-08-2026 ಭಾನುವಾರ | ರಾತ್ರಿ 8 ಗಂಟೆಗೆ | ಭಜನೆ |
| 10-08-2026 ಸೋಮವಾರ | ಬೆಳಗ್ಗೆ 9 ಗಂಟೆಗೆ | ಸಮಾಧಿಗೆ ಪೂಜಾ ಕಾರ್ಯಕ್ರಮ |

ಹೀಗಾಗಿ ಪಾಟೀಲ್ ಪರಿವಾರದ ಅಭಿಮಾನಿಗಳು, ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಕಾರ್ಯಕ್ರಮ ಯಶಸ್ವಿ ಮಾಡಬೇಕೆಂದು ಮನವಿ.



**ಶ್ರೀ ಹರವಿಂದರ್ ಸಿಂಗ್** ಉದ್ಯಮಿದಾರರು, ಹುಮನಾಬಾದ್

## ಕೆಮಿಕಲ್ ಕಾರ್ಖಾನೆಗಳು ಸ್ಥಳಾಂತರವಾಗದಿದ್ದರೆ ಜನರ ಬದುಕು ನರಕಯಾತನೆ!

ಹುಮನಾಬಾದ್ ಕೈಗಾರಿಕಾ ಪ್ರದೇಶದಲ್ಲಿರುವ ಕೆಮಿಕಲ್ ಕಾರ್ಖಾನೆಗಳ ಕುರಿತು ಸಾರ್ವಜನಿಕರಲ್ಲಿ ದಿನದಿಂದ ದಿನಕ್ಕೆ ಆತಂಕ ಹೆಚ್ಚುತ್ತಿದೆ. ಕೈಗಾರಿಕೆಗಳು ಅಭಿವೃದ್ಧಿಗೆ ಅಗತ್ಯವಾದರೂ, ಜನರ ಆರೋಗ್ಯ, ಪರಿಸರ ಮತ್ತು ಜಲಮೂಲಗಳಿಗೆ ಅಪಾಯ ಉಂಟುಮಾಡುವ ರೀತಿಯಲ್ಲಿ ಅವು ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಅಭಿವೃದ್ಧಿಗೆ ಅರ್ಥವೇನು ಎಂಬ ಪ್ರಶ್ನೆ ಇಂದು ಎದುರಾಗಿದೆ.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಕೆಮಿಕಲ್ ಕಾರ್ಖಾನೆಗಳಿಂದ ಹೊರಬರುವ ತ್ಯಾಜ್ಯ, ಹೊಗೆ ಹಾಗೂ ರಾಸಾಯನಿಕ ಮಿಶ್ರಿತ ನೀರು ಪರಿಸರಕ್ಕೆ ಸೇರುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ವಿಶೇಷವಾಗಿ ಮಾಣಿಕನಗರದ ಗುರುಗಂಗಾ ನದಿ ಸೇರಿದಂತೆ ಜಲಮೂಲಗಳ ಮೇಲೆ ಇದರ ಪರಿಣಾಮ ಬೀರುತ್ತಿದೆ ಎಂಬ ಸಾರ್ವಜನಿಕ ಆತಂಕವನ್ನು ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು.

ನದಿ ಎಂದರೆ ಕೇವಲ ನೀರಿನ ಹರಿವು ಅಲ್ಲ; ಅದು ಜನಜೀವನದ ಆಧಾರ. ಕುಡಿಯುವ ನೀರು, ಕೃಷಿ, ಜಾನುವಾರು ಹಾಗೂ ಪರಿಸರ ವ್ಯವಸ್ಥೆಯೊಂದಿಗೆ ನದಿ ನೇರವಾಗಿ ಸಂಬಂಧ ಹೊಂದಿದೆ. ಇಂತಹ ಜಲಮೂಲಗಳಿಗೆ ರಾಸಾಯನಿಕ ತ್ಯಾಜ್ಯ ಸೇರುತ್ತಿದ್ದರೆ ಅದರ ಪರಿಣಾಮ ಇಂದು ಮಾತ್ರವಲ್ಲ, ಮುಂದಿನ ಹಲವು ವರ್ಷಗಳವರೆಗೆ ಜನರನ್ನು ಕಾಡುವ ಸಾಧ್ಯತೆಯಿದೆ.

ಕೆಮಿಕಲ್ ಕಾರ್ಖಾನೆಗಳ ವಿರುದ್ಧ ದೂರುಗಳು ಕೇಳಿಬಂದಾಗ ಕೇವಲ ಅಧಿಕಾರಿಗಳ ಪರಿಶೀಲನೆ ನಡೆಸಿ ಕಡತ ಮುಚ್ಚುವ ಕ್ರಮದಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಸ್ವತಂತ್ರ ಹಾಗೂ ವೈಜ್ಞಾನಿಕ ಪರಿಸರ ತಪಾಸಣೆ ನಡೆಸಬೇಕು. ನೀರು, ಮಣ್ಣು ಮತ್ತು ಗಾಳಿಯ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷಿಸಬೇಕು. ನಿಯಮ ಉಲ್ಲಂಘನೆ ಕಂಡುಬಂದರೆ ಯಾವುದೇ ಪ್ರಭಾವ, ಒತ್ತಡ ಅಥವಾ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ನೀಡದೆ ಕಠಿಣ ಕ್ರಮ ಕೈಗೊಳ್ಳಬೇಕು.

ಜನರ ಆರೋಗ್ಯಕ್ಕಿಂತ ಯಾವುದೇ ಕೈಗಾರಿಕೆಯ ಲಾಭ ದೊಡ್ಡದಲ್ಲ. ಕಾರ್ಖಾನೆಗಳನ್ನು ನಡೆಸುವುದರಿಂದ ಉದ್ಯೋಗ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ಅನುಕೂಲವಾಗಬಹುದು. ಆದರೆ ಅದಕ್ಕಾಗಿ ಜನರ ಆರೋಗ್ಯ ಮತ್ತು ಪರಿಸರವನ್ನು ಬಲಿಕೊಡಲು ಸಾಧ್ಯವಿಲ್ಲ. ಹುಮನಾಬಾದ್ ಜನರ ಬದುಕು ನರಕಯಾತನೆಯಾಗುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಜನವಸತಿ ಪ್ರದೇಶಗಳು ಹಾಗೂ ಜಲಮೂಲಗಳಿಗೆ ಅಪಾಯ ಉಂಟುಮಾಡುವ ಕಾರ್ಖಾನೆಗಳ ಕುರಿತು ಸಮಗ್ರ ತನಿಖೆ ನಡೆಸಿ, ಅಗತ್ಯವಿದ್ದಲ್ಲಿ ಅವುಗಳನ್ನು ಸೂಕ್ತ ಕೈಗಾರಿಕಾ ವಲಯಕ್ಕೆ ಸ್ಥಳಾಂತರಿಸುವ ಕುರಿತು ಸರ್ಕಾರ ನಿರ್ಧಾರ ಕೈಗೊಳ್ಳಬೇಕು.

ಇದು ಯಾವುದೇ ವ್ಯಕ್ತಿ ಅಥವಾ ಕೈಗಾರಿಕೆಯನ್ನು ವಿರೋಧಿಸುವ ಹೋರಾಟವಲ್ಲ. ಇದು ಜನರ ಜೀವ, ಆರೋಗ್ಯ ಮತ್ತು ಪರಿಸರವನ್ನು ರಕ್ಷಿಸುವ ಹೋರಾಟ. ಕೈಗಾರಿಕೆಗಳೂ ಇರಲಿ, ಉದ್ಯೋಗವೂ ಸೃಷ್ಟಿಯಾಗಲಿ; ಆದರೆ ಜನರ ಬದುಕು ಸುರಕ್ಷಿತವಾಗಿರಬೇಕು.

ಸರ್ಕಾರವು ಇನ್ನೂ ವಿಳಂಬ ಮಾಡಿದರೆ ಪರಿಸ್ಥಿತಿ ಕೈಮೀರಿದ ನಂತರ ಕ್ರಮ ಕೈಗೊಳ್ಳುವಂತಾಗಬಹುದು. ಆದ್ದರಿಂದ "ಮೊದಲು ಜನರ ಆರೋಗ್ಯ ನಂತರ ಕೈಗಾರಿಕೆ" ಎಂಬ ನೀತಿಯೊಂದಿಗೆ ಹುಮನಾಬಾದ್ ಕೆಮಿಕಲ್ ಕಾರ್ಖಾನೆಗಳ ಕುರಿತು ಶಾಶ್ವತ ಪರಿಹಾರ ಕಂಡುಕೊಳ್ಳುವ ಸಮಯ ಬಂದಿದೆ.

## ಸರ್ವತೋಮುಖ ಬೆಳವಣಿಗೆಗೆ ಸಾಂಸ್ಕೃತಿಕ ಚಟುವಟಿಕೆಗಳು ಸಹಕಾರಿ




**ಬಾಗಲಕೋಟೆ:** ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣದ ಜೊತೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಸಹಕಾರಿಯಾಗುತ್ತವೆ ಎಂದು ಕೆರೂರಿನ ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಎಸ್.ಎಸ್.ಸಾರಂಗಮಠ ಹೇಳಿದರು.

ತಾಲ್ಲೂಕಿನ ಬೇವೂರಿನ ಆದರ್ಶ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ನಡೆದ ಪ್ರಸಕ್ತ ಸಾಲಿನ ಕ್ರೀಡೆ, ಸಾಂಸ್ಕೃತಿಕ, ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿಯಾದರೆ, ಎನ್. ಸಿಸಿ ಮತ್ತು ಎನ್.ಎಸ್.ಎಸ್. ಜೀವನದಲ್ಲಿ ಶಿಸ್ತು, ಸಮಯಪ್ರಜ್ಞೆ, ಸಮಾಜಸೇವೆ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುತ್ತವೆ ಎಂದು ಸಾರಂಗಮಠ ಹೇಳಿದರು. ಪ್ರಾಚಾರ್ಯ ಜೆ.ಕೆ.ಮಲ್ಲಾಪೂರ ಮಾತನಾಡಿ, ವಿದ್ಯಾರ್ಥಿಗಳು ಸಕಾರಾತ್ಮಕ ಮನೋಭಾವ ಬೆಳೆಸಿಕೊಂಡು, ಗುರುವಿನ ಮಾರ್ಗದರ್ಶನ ಪಡೆದು ನಿರಂತರ ಪರಿಶ್ರಮ, ಪ್ರಯತ್ನದಿಂದ ಸಾಧಕರಾಗಿ ತಂದೆ ತಾಯಿ, ಕಲಿಸಿದ ಗುರುಗಳು, ಕಲಿತ ಶಾಲೆಯ ಋಣ ತೀರಿಸಬೇಕು ಎಂದರು.

ಕಳೆದ ಸಾಲಿನಲ್ಲಿ ಪಿಯುಸಿ ಹಾಗೂ ಎಸ್. ಎಸ್.ಎಲ್.ಸಿ ಯಲ್ಲಿ ಹೆಚ್ಚು ಅಂಕ ಪಡೆದ ಕಾಲೇಜಿನ ಶೃತಿ ಕಾವಳ್ಳಿ, ಅನುರಾಧಾ ಚಲವಾದಿ, ಸೌಂದರ್ಯ ಮಾದರ, ದಿವ್ಯಾ ಪಂತರ, ಸಂಜನಾ ಕಾವಳ್ಳಿ ಹಾಗೂ ಸೌಭಾಗ್ಯ ತಳವಾರ ಅವರನ್ನು ಸನ್ಮಾನಿಸಿ ಪುರಸ್ಕಾರ ನೀಡಲಾಯಿತು. ಆದರ್ಶ ವಿದ್ಯಾವರ್ಧಕ ಸಂಸ್ಥೆಯ ಸದಸ್ಯ ವಿ.ಪಿ.ತುರಡಗಿ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಹಿರಿಯ ಶಿಕ್ಷಕ ವೈ.ಜಿ.ಲಮಾಣಿ, ಎಸ್.ಎಸ್. ಜಿಗಳೂರ, ವೇದಿಕೆಯಲ್ಲಿದ್ದರು.

ಎಸ್.ಎನ್.ಬಾರ್ಕಿ ಸ್ವಾಗತಿಸಿದರು. ಯೋಗೇಶ ಲಮಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್.ಕೆ.ಮಾಡೊಳ್ಳಿ ನಿರೂಪಿಸಿದರು. ಅಮರಜ್ಯೋತಿ ಮಾಗನೂರ ವಂದಿಸಿದರು.

# ಹಳ್ಳಿಖೇಡದಲ್ಲಿ ನಶಾಮುಕ್ತಿ ಪ್ರತಿಜ್ಞಾ ಅಭಿಯಾನಕ್ಕೆ ಚಾಲನೆ





• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ನಶಾಮುಕ್ತ ಭಾರತ ನಿರ್ಮಾಣದ ಸಂಕಲ್ಪದೊಂದಿಗೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನದ ಮೆಡಿಕಲ್ ವಿಭಾಗದ ವತಿಯಿಂದ ಹಮ್ಮಿಕೊಂಡಿರುವ '10 ಕೋಟಿ ನಶಾಮುಕ್ತಿ ಪ್ರತಿಜ್ಞಾ ಮಹಾ ಅಭಿಯಾನ'ಕ್ಕೆ ಹುಮನಾಬಾದ ತಾಲೂಕಿನ ಹಳ್ಳಿಖೇಡ(ಬಿ) ಪಟ್ಟಣದ ರಾಜಯೋಗ ಕೇಂದ್ರದ ಸಫಲತಾ ಭವನದಲ್ಲಿ ಚಾಲನೆ ನೀಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸರಸ್ವತಿ ಪ್ರೌಢಶಾಲೆಯ ಅಧ್ಯಕ್ಷ ದೇವರಾಜ್ ಹೋಡಮನಿ, ವ್ಯಸನವು ಕೇವಲ ವ್ಯಕ್ತಿಯ ಆರೋಗ್ಯದ ಮೇಲೆ ಮಾತ್ರವಲ್ಲದೆ ಕುಟುಂಬದ ನೆಮ್ಮದಿ, ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಗೌರವದ ಮೇಲೂ ಗಂಭೀರ ಪರಿಣಾಮ ಬೀರುತ್ತದೆ. ವಿಶೇಷವಾಗಿ ಯುವಜನತೆ ಮಾದಕ ವ್ಯಸನಗಳಿಗೆ ಒಳಗಾಗದಂತೆ ಪೋಷಕರು, ಶಿಕ್ಷಕರು ಹಾಗೂ ಸಮಾಜದ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ರಾಜಯೋಗ ಕೇಂದ್ರದ ಸಂಚಾಲಕಿ ಬಿ.ಕೆ.ಸುಮನ್ ಬಹೇನಜಿ ಮಾತನಾಡಿ, ದಾದಿ ಪ್ರಕಾಶಮಣಿ ಜೀ ಅವರ ಪವಿತ್ರ ಸ್ಮರಣೆಯಲ್ಲಿ ನಡೆಯುತ್ತಿರುವ ರಾಷ್ಟ್ರವ್ಯಾಪಿ ಅಭಿಯಾನವು ಆ. 6ರಿಂದ 20ರವರೆಗೆ ನಡೆಯಲಿದ್ದು, ದೇಶಾದ್ಯಂತ 10 ಕೋಟಿ ಜನರಿಂದ ನಶಾಮುಕ್ತ ಜೀವನದ ಪ್ರತಿಜ್ಞೆ ಸ್ವೀಕರಿಸುವ ಗುರಿ ಹೊಂದಿದೆ. 'ವಿಕಸಿತ ಭಾರತದತ್ತ ಒಂದು ಸಬಲವಾದ ಹೆಜ್ಜೆ' ಎಂಬ ಆಶಯದೊಂದಿಗೆ ನಡೆಯುತ್ತಿರುವ ಈ ಅಭಿಯಾನದ ಮೂಲಕ ಮದ್ಯಪಾನ, ಧೂಮಪಾನ, ತಂಬಾಕು, ಗುಟ್ಕಾ ಸೇರಿದಂತೆ ವಿವಿಧ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ಆರೋಗ್ಯ, ಕುಟುಂಬ ಹಾಗೂ ಸಾಮಾಜಿಕ ದುಷ್ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ನಶಾಮುಕ್ತ ಜೀವನವು ಒಂದು ದಿನದ ಸಂಕಲ್ಪವಾಗಿರದೆ ಜೀವನಪರ್ಯಂತ ಅನುಸರಿಸಬೇಕಾದ ಮೌಲ್ಯವಾಗಿದೆ. ರಾಜಯೋಗ ಮತ್ತು ಆಧ್ಯಾತ್ಮಿಕ ಜಾಗೃತಿಯ ಮೂಲಕ ಆತ್ಮಬಲವನ್ನು ಹೆಚ್ಚಿಸಿಕೊಂಡು ವ್ಯಸನಗಳಿಂದ ದೂರವಿರಲು ಸಾಧ್ಯ. ಪ್ರತಿಯೊಬ್ಬರೂ ಮೊದಲು ತಾವು ನಶಾಮುಕ್ತರಾಗುವುದರ ಜೊತೆಗೆ ಕನಿಷ್ಠ 50 ಮಂದಿಯನ್ನು ನಶಾಮುಕ್ತಿ ಪ್ರತಿಜ್ಞೆ ಸ್ವೀಕರಿಸಲು ಪ್ರೇರೇಪಿಸಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಖಟಕ್ ಚಿಂಚೋಳಿ ನಿವೃತ್ತ ಪಿಎಸ್ಐ ಘನಶ್ಯಾಮ್ ಶರ್ಮಾ ಹಾಗೂ ನಿವೃತ್ತ ಶಿಕ್ಷಕ ಜಗನಾಥ್ ಬಂಡೆ ಮಾತನಾಡಿ, ಮಾದಕ ವಸ್ತುಗಳ ಸೇವನೆಯಿಂದ ಯುವಜನರ ಭವಿಷ್ಯ ಹಾಳಾಗುವುದಲ್ಲದೆ ಕುಟುಂಬ ಮತ್ತು ಸಮಾಜದ ಮೇಲೂ ದುಷ್ಪರಿಣಾಮ ಬೀರುತ್ತದೆ. ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಜನಜಾಗೃತಿ ಹಾಗೂ ಸಾಮೂಹಿಕ ಪ್ರಯತ್ನ ಅಗತ್ಯ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಯುವಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಜ್ಞೆ ಸ್ವೀಕರಿಸಿ ಅಭಿಯಾನವನ್ನು ಯಶಸ್ವಿಗೊಳಿಸಿದ್ದರು.

ಕಾರ್ಯಕ್ರಮದಲ್ಲಿ ಬ್ರಹ್ಮಾಕುಮಾರೀಸ್ ಕೇಂದ್ರದ ಸದಸ್ಯರು, ವಿವಿಧ ಕ್ಷೇತ್ರಗಳ ಗಣ್ಯರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಕೊನೆಯಲ್ಲಿ ಬಿ.ಕೆ. ರಂಗಮ್ಮ ಅವರು ಗಣ್ಯರಿಗೆ ಸ್ವಾಗತ ಕೋರಿದ್ದರು.

## ಮಕ್ಕಳ ಭವಿಷ್ಯಕ್ಕೆ ಪ್ರಾಥಮಿಕ ಶಿಕ್ಷಣ ಭದ್ರ ಬುನಾದಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ಪ್ರಾಥಮಿಕ ಹಂತದ ಶಿಕ್ಷಣ ಮಕ್ಕಳ ಭವಿಷ್ಯ ರೂಪುಗೊಳ್ಳಲು ಭದ್ರ ಬುನಾದಿಯಾಗಿದೆ ಎಂದು ಶಾಸಕ ಉಮೇಶ ಮೇಟಿ ಹೇಳಿದರು.

ತಾಲ್ಲೂಕಿನ ತಳಗಿಹಾಳ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರಂಭಿಸಲಾಗಿರುವ ಎಲ್ ಕೆಜಿ ಹಾಗೂ ಯುಕೆಜಿ ತರಗತಿಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಆರಂಭವಾಗಿರುವ ಈ ವ್ಯವಸ್ಥೆಯಿಂದಾಗಿ ಗ್ರಾಮೀಣ ಮಕ್ಕಳಿಗೂ ಗುಣಮಟ್ಟದ ಶಿಕ್ಷಣಕ್ಕೆ ಅವಕಾಶ ದೊರೆಯಲಿದೆ ಎಂದರು.

ಪ್ರಾಥಮಿಕ ಶಿಕ್ಷಣ ಮಕ್ಕಳ ಭವಿಷ್ಯ ರೂಪಿಸುವ ತಳಪಾಯವಾಗಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ಜೊತೆಗೆ ಒಳ್ಳೆಯ ಸಂಸ್ಕಾರ ನೀಡಿ ಅವರನ್ನು ಸಮಾಜದ ಆಸ್ತಿಯಾಗಿ ಬೆಳೆಸಬೇಕು ಎಂದ ಶಾಸಕ ಮೇಟಿ, ಸರ್ಕಾರ ಗ್ರಾಮೀಣ ಪ್ರದೇಶದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಒದಗಿಸಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡುತ್ತಿದೆ ಎಂದು ಹೇಳಿದರು.

ಕ್ಷೇತ್ರದ ಸರ್ಕಾರಿ ಶಾಲೆಗಳ ಸುಧಾರಣೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ನೀಡಲಾಗುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮುತುವರ್ಜಿವಹಿಸಲಾಗುವುದು ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಈರಯ್ಯ ಹಿರೇಮಠ, ಸದಸ್ಯರು, ಶಾಲೆಯ ಮುಖ್ಯ ಶಿಕ್ಷಕರು, ಜಿಪಂ ಮಾಜಿ ಅಧ್ಯಕ್ಷ ಬಸಂತಪ್ಪ ಮೇಟಿ, ಆರ್ .ಎ.ಪಟ್ಟಣದ, ಮುತ್ತಪ್ಪ ಹುಗ್ಗಿ, ಲಕ್ಷ್ಮಣ ದಡ್ಡಿ, ವೈ.ವೈ.ತಿಮ್ಮಾಪುರ, ಶ್ರೀಕರ ದೇಸಾಯಿ, ಪರಶುರಾಮ ಜೋಗಿ, ಬೀರನ್ನವರ ಮತ್ತಿತರರು ಇದ್ದರು.

## 10-11ರಂದು ಸಣ್ಣಗೌಡಸಾನಿ ನಾಟಕ ಪ್ರದರ್ಶನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ರಂಗಾಯಣ ಕಲಬುರಗಿ ಸಹಯೋಗದಲ್ಲಿ ನಾಡೋಜ ಡಾ. ಶಾಂತರಸ ಅವರ ಪ್ರಸಿದ್ಧ ಕಾದಂಬರಿ ಆಧಾರಿತ 'ಸಣ್ಣಗೌಡಸಾನಿ' ನಾಟಕದ ಪ್ರದರ್ಶನವು ರಂಗಾಯಣದ ರೆಪರ್ಟರಿ ಕಲಾವಿದರಿಂದ ಇದೇ ಆಗಸ್ಟ್ 10 ಹಾಗೂ 11ರಂದು ಸಾಯಂಕಾಲ 6 ಗಂಟೆಗೆ ಡಾ. ಎಸ್.ಎಮ್. ಪಂಡಿತ ರಂಗಮಂದಿರದಲ್ಲಿ ಪ್ರದರ್ಶಿಸಲಾಗುವುದು ಎಂದು ರಂಗಾಯಣ ನಿರ್ದೇಶಕರಾದ ಡಾ. ಸುಜಾತ ಜಂಗಮಶೆಟ್ಟಿ ಅವರು ತಿಳಿಸಿದರು.

ನಗರದ ರಂಗಾಯಣದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಮಾಹಿತಿ ಆಯೋಗದ ಅಧ್ಯಕ್ಷರಾದ ಬಿ.ವೆಂಕಟಸಿಂಗ್ ಅವರು ನಾಟಕ ಪ್ರದರ್ಶನ ಉದ್ಘಾಟಿಸುವರು, ಡಾ. ಸುಜಾತಾ ಜಂಗಮಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದ್ಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಬಾಗಲಕೋಟೆ ರಂಗಸಮಾಜದ ಸದಸ್ಯರು ಮಹಾಂತೇಶ.ಎಂ. ಗಜೇಂದ್ರಗಡ, ಕನ್ನಡ ಪ್ರಭ ವರದಿಗಾರ ಶೇಷಮೂರ್ತಿ ಅವಧಾನಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಸಣ್ಣಗೌಡಸಾನಿ ನಾಟಕದ ರಂಗಗೀತೆಗಳು ಮತ್ತು ಶಾಂತರಸರ ಗಜಲ್‌ಗಳ ಗಾಯನ ಧಾರವಾಡದ ರಾಘವ ಕಮ್ಮಾರ ಮತ್ತು ತಂಡ, ರಂಗಸಜ್ಜಿಗೆ ಹಾಗೂ ರಂಗ ಪರಿಕರ ರಾಜಕುಮಾರ್ ಎಸ್. ಕೆ, ಬೆಳಕು,ಸಹ ನಿರ್ದೇಶನ ಶ್ರೀನಿವಾಸ ದೋರನಹಳ್ಳಿ ನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಸಣ್ಣಗೌಡಸಾನಿ ನಾಟಕದ ರಂಗಪಠ್ಯ ವಿನ್ಯಾಸ ಹಾಗೂ ನಿರ್ದೇಶಕ ಪ್ರವೀಣರೆಡ್ಡಿ ಗುಂಜನಹಳ್ಳಿ ಉಪಸ್ಥಿತರಿರುವರು. ಪತ್ರಿಕಾಗೋಷ್ಠಿಯ ನಂತರ ನಾಟಕದ ಪೋಸ್ಟರ್ ಅನ್ನು ಬಿಡುಗಡೆ ಮಾಡಿ "ಸಣ್ಣಗೌಡಸಾನಿ" ನಾಟಕ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ರಂಗಾಯಣದ ಆಡಳಿತ ಅಧಿಕಾರಿ ಸಿದ್ಧರಾಮ್ ಸಿಂದೆ, ಮಹಾಂತೇಶ ನವಲಕಲ್, ಪ್ರವೀಣರೆಡ್ಡಿ ಗುಂಜನಹಳ್ಳಿ, ರಾಘವ ಕಮ್ಮಾರ,ಅಮರನಾಥ ಇರ್ಕಲ್, ರಂಗಾಯಣದ ಸಿಬ್ಬಂದಿ ಮತ್ತು ಕಲಾವಿದರಿದ್ದರು.

# ಶೇ60 ರಷ್ಟು ಮಳೆ ಕೊರತೆ, ಮುಂಗಾರು ವಿಫಲ..!

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ**



ಜಿಲ್ಲೆಯ ವಿವಿಧ ತಾಲೂಕುಗಳು ಸೇರಿ ಪ್ರಸಕ್ತ ಮುಂಗಾರಿನಲ್ಲಿ ಶೇ 60 ರಷ್ಟು ಮಳೆಯ ಕೊರತೆ-ಯಾಗಿದ್ದು ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆಯಲ್ಲಿ ಸಚಿವರಾದ ಬಿ. ಜೆಡ್ ಜಮೀರ್ ಅಹ್ಮದ್ ಖಾನ್ ಅವರು ಶುಕ್ರವಾರ ವಿಜಯನಗರ ಜಿಲ್ಲೆಯ ಬರಪೀಡಿತ ಭಾಗಗಳಿಗೆ ಭೇಟಿ ನೀಡಿ ಬೆಳೆ ಹಾನಿ ಮತ್ತು ರೈತರ ಸಮಸ್ಯೆಗಳನ್ನು ಖುದ್ದಾಗಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಅವರು,ಕೃಷಿ ಮತ್ತು ಕಂದಾಯ ಇಲಾಖೆ ಅಧಿಕಾರಿಗಳಿಂದ ಜಂಟಿ ಸಮೀಕ್ಷೆ ನಡೆಸಿ, ಸಂಪೂರ್ಣ ವರದಿಯನ್ನು ಶೀಘ್ರದಲ್ಲೇ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು. ಮುಂಗಾರು ಕೈಕೊಟ್ಟಿದೆ. ಕೆಲವು ರೈತರು ಬೆಳೆ ವಿಮೆ ಕಟ್ಟಿದ್ದಾರೆ,ಕೆಲ ರೈತರು ಬೆಳೆ ವಿಮೆ ಕಟ್ಟಿರುವುದಿಲ್ಲ. ಇನ್ನು ಕೆಲ ರೈತರು ಬಿತ್ತನೆ ಮಾಡದ ಹಿನ್ನೆಲೆಯಲ್ಲಿ ವಿಮೆಯನ್ನು ಪಾವತಿಸಲು ಸಾಧ್ಯವಾಗಿಲ್ಲ. ಬಹುತೇಕ ರೈತರು ಬೆಳೆ ವಿಮೆ ಪಾವತಿಸಿಲ್ಲ. ಆದಾಗ್ಯೂ,ವಿಮೆ ಮಾಡಿಸಿದ ಮತ್ತು ವಿಮೆ ಮಾಡಿಸದ ಇಬ್ಬರೂ ರೈತರ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಳೆದ ವರ್ಷದ ವಿಮಾ ಪರಿಹಾರವಾಗಿ ರೂ.109.54 ಕೋಟಿ ಪೈಕಿ ಈಗಾಗಲೇ ರೂ.66.397 ಕೋಟಿ ಬಿಡುಗಡೆಯಾಗಿದ್ದು, ಬಾಕಿ 42.139 ಕೋಟಿ ರೂಪಾಯಿ ಬರಬೇಕಾಗಿದೆ ಎಂದರು.

ಪ್ರಸ್ತುತ ತುಂಗಭದ್ರಾ ಜಲಾಶಯದಲ್ಲಿ 69 ಟಿಎಂ ಸಿ ನೀರು ಸಂಗ್ರಹವಿದ್ದು, ಕುಡಿಯುವ ನೀರಿಗೆ ಯಾವುದೇ ಅಭಾವ ಎದುರಾಗುವುದಿಲ್ಲ.ಬರ ಪರಿಶೀಲನಾ ವರದಿಯನ್ನು ಶೀಘ್ರವಾಗಿ ಸಲ್ಲಿಸಿ, ಸಂಕಷ್ಟದಲ್ಲಿರುವ ರೈತರಿಗೆ ತಕ್ಷಣವೇ ಸರ್ಕಾರದಿಂದ ಸೂಕ್ತ ನಷ್ಟ ಪರಿಹಾರ ಒದಗಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.ಈ ಕುರಿತು ಆಗಸ್ಟ್ 15ರ ಒಳಗಾಗಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂಬ ಭರವಸೆ ವ್ಯಕ್ತಪಡಿಸಿದರು.

ಮುಂಗಾರು ಹಂಗಾಮಿನಲ್ಲಿ ಜೂನ್‌ದಿಂದ ಇಲ್ಲಿಯವರೆಗೆ 188.7 ಮಿ.ಮೀ ಮಳೆಯಾಗಬೇಕಿದ್ದು ಆದರೆ 76 ಮಿ.ಮೀ ಮಳೆಯಾಗಿ ವಾಡಿಕೆಗಿಂತ ಶೇ.60 ರಷ್ಟು ಕೊರತೆಯಾಗಿದೆ. ಮತ್ತು 1,93,670 ಹೆಕ್ಟೇರ್ ಬಿತ್ತನೆ ಮಾಡಿದ ಪ್ರದೇಶದಲ್ಲಿ ನೀರಾವರಿ 46,958 ಹೆ, 1,46,712 ಹೆ ಖುಷ್ಕಿ ಪ್ರದೇಶ ಸೇರಿ ಶೇ.65 ರಷ್ಟು ಬಿತ್ತನೆ ಮಾಡಲಾಗಿದೆ.ಮಳೆ ಆಧಾರಿತ ಬೆಳೆಗಳಾದ ಮೆಕ್ಕೆಜೋಳ,ಹೈಬ್ರೀಡ್ ಜೋಳ,ಸೂರ್ಯಕಾಂತಿ, ಈರುಳ್ಳಿ,ಸಜ್ಜೆ ಹಾಗೂ ಇನ್ನಿತರೆ ಬೆಳೆಗಳು ಸೇರಿ 1,46,712 ಹೆಕ್ಟೇರ್ ಬೆಳೆಗಳಲ್ಲಿ 1,25,717 ಹೆಕ್ಟೇರ್ ಪ್ರದೇಶದಲ್ಲಿನ ಬೆಳೆಗಳು ತೇವಾಂಶದ ಕೊರತೆಯಿಂದ ಬಾಡಿ, ಬೆಳೆ ಕುಂಠಿತವಾಗಿದ್ದು ಇಳುವರಿಯ ಮೇಲೆ ಸಂಪೂರ್ಣ ಪರಿಣಾಮ ಬೀರಿದೆ.

# ಜನವಾಡದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ
## ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**




ರೈತರು, ಕಾರ್ಮಿಕರು, ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಗ್ರಾಮೀಣ ಭಾಗದ ಸಾರ್ವಜನಿಕರ ವಿವಿಧ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಬಿಜೆಪಿ ಮುಖಂಡರಾದ ಈಶ್ವರಸಿಂಗ ಠಾಕೂರ ಅವರ ನೇತೃತ್ವದಲ್ಲಿ ಶುಕ್ರವಾರ ಜನವಾಡದಿಂದ ಬೀದರ್ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಹಾಗೂ ಶಾಂತಿಯುತ ಪ್ರತಿಭಟನೆ ನಡೆಯಿತು.

ಜನವಾಡದಲ್ಲಿ ಬೆಳಿಗ್ಗೆ ಆರಂಭವಾದ ಪಾದಯಾತ್ರೆ ಮರಖಲ, ಚಿಕ್ಕಪೇಟೆ ಹಾಗೂ ರಿಂಗ್‌ರಸ್ತೆ ಮಾರ್ಗವಾಗಿ ಬೀದರ್ ಜಿಲ್ಲಾಧಿಕಾರಿ ಕಚೇರಿಗೆ ತಲುಪಿತು. ಪಾದಯಾತ್ರೆಯಲ್ಲಿ ಜನವಾಡ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು, ಕಾರ್ಮಿಕರು, ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ಭಾಗವಹಿಸಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಪ್ರತಿಭಟನಾಕಾರರು ತಮ್ಮ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು. ಸಾರ್ವಜನಿಕರ ಸಮಸ್ಯೆಗಳನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಿ ಸಂಬಂಧಪಟ್ಟ ಇಲಾಖೆಗಳ ಮೂಲಕ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಜಿಲ್ಲೆಯ ರೈತರು ಕೃಷಿ ಸಾಲದ ಹೊರೆಯಿಂದ ಸಂಕಷ್ಟ ಎದುರಿಸುತ್ತಿದ್ದು, ಅವರ ಕೃಷಿ ಸಾಲವನ್ನು ಮನ್ನಾ ಮಾಡುವ ಕುರಿತು ರಾಜ್ಯ ಸರ್ಕಾರಕ್ಕೆ ಜಿಲ್ಲಾಡಳಿತದಿಂದ ಸೂಕ್ತ ಶಿಫಾರಸು ಮಾಡಬೇಕು, ಅದೇ ರೀತಿ ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ಮಾಸಾಶನ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಬಾಕಿ ಹಣವನ್ನು ಅರ್ಹ ಫಲಾನುಭವಿಗಳಿಗೆ ಕೂಡಲೇ ಬಿಡುಗಡೆ ಮಾಡಬೇಕು, ವಿವಿಧ ಸರ್ಕಾರಿ ಯೋಜನೆಗಳ ಫಲಾನುಭವಿಗಳಿಗೆ ಅನ್ವಯವಾಗುವ ವಾರ್ಷಿಕ ರೂ.32,000 ಆದಾಯ ಮಿತಿಯನ್ನು ರದ್ದುಪಡಿಸುವಂತೆ ಸರ್ಕಾರಕ್ಕೆ ಶಿಫಾರಸು ಸಲ್ಲಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಜೀರ್ಣಗೊಂಡಿರುವ ವಿದ್ಯುತ್ ಕಂಬಗಳು ಹಾಗೂ ವಿದ್ಯುತ್ ತಂತಿಗಳಿಂದ ಸಾರ್ವಜನಿಕರು ಮತ್ತು ರೈತರ ಸುರಕ್ಷತೆಗೆ ಅಪಾಯ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ಹಳೆಯ ಕಂಬ ಮತ್ತು ತಂತಿಗಳನ್ನು ತಕ್ಷಣ ಬದಲಾಯಿಸಿ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ವಿದ್ಯುತ್ ಇಲಾಖೆಗೆ ಸೂಚಿಸಬೇಕು.

ತಹಸೀಲ್ದಾರ್ ಕಚೇರಿಗಳಲ್ಲಿ ಕರಾರು ಪೋಡಿ, ನಮೂನೆ-10, ಹದ್ದಬಸ್ತ್ ಸೇರಿದಂತೆ ವಿವಿಧ ಕಂದಾಯ ಸಂಬಂಧಿತ ಅರ್ಜಿಗಳು ವಿಳಂಬವಾಗುತ್ತಿವೆ ಎಂದು ಆರೋಪಿಸಿದ ಇಂತಹ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ಜನವಾಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ಕಳ್ಳತನ ಪ್ರಕರಣಗಳ ಆರೋಪಿಗಳನ್ನು ಶೀಘ್ರವಾಗಿ ಬಂಧಿಸಿ, ಪ್ರಕರಣಗಳ ತನಿಖೆಯನ್ನು ಪರಿಣಾಮಕಾರಿಯಾಗಿ ನಡೆಸಬೇಕು. ಸ್ಥಗಿತಗೊಂಡಿರುವ ಜನವಾಡ ನದಿ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಪುನರಾರಂಭಿಸಿ, ಜನವಾಡ ಹಾಗೂ ಮಾಳೇಗಾಂವ ಹೋಬಳಿಯ ಎಲ್ಲಾ ಗ್ರಾಮಗಳಿಗೆ ನಿರಂತರ ಹಾಗೂ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು, ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವ ಹಿನ್ನೆಲೆಯಲ್ಲಿ ಯೋಜನೆಯನ್ನು ವಿಳಂಬವಿಲ್ಲದೆ ಪುನರಾರಂಭಿಸಿ ಶಾಶ್ವತ ಪರಿಹಾರ ಕಲ್ಪಿಸಬೇಕು,

ಜನವಾಡದಿಂದ ಅಲಿಯಾಬಾದ್ (ಜೆ) ಗ್ರಾಮದವರೆಗೆ ರಸ್ತೆ ನಿರ್ಮಾಣ ಮಾಡಬೇಕು ಎಂಬುದು ಮತ್ತೊಂದು ಪ್ರಮುಖ ಬೇಡಿಕೆಯಾಗಿದೆ. ರಸ್ತೆ ಅಭಿವೃದ್ಧಿಯಾಗುವುದರಿಂದ ಗ್ರಾಮಸ್ಥರು, ರೈತರು ಹಾಗೂ ವಿದ್ಯಾರ್ಥಿಗಳ ಸಂಚಾರಕ್ಕೆ ಅನುಕೂಲವಾಗಲಿದೆ ಅದೇ ರೀತಿ ಚಿಮಕೋಡ-ಅಲ್ಲಾಪುರ ಹಾಗೂ ಚಿಮಕೋಡ-ನೇಮತಾಬಾದ್ ಸಂಪರ್ಕ ಸೇತುವೆಗಳ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು ಸೇತುವೆಗಳ ಕಾಮಗಾರಿ ಪೂರ್ಣಗೊಳ್ಳುವವರೆಗೆ ಸಾರ್ವಜನಿಕರು ಹಾಗೂ ರೈತರಿಗೆ ಸಂಚಾರಕ್ಕೆ ಅನುಕೂಲವಾಗುವಂತೆ ತಾತ್ಕಾಲಿಕ ರಸ್ತೆ ನಿರ್ಮಿಸಬೇಕು.

ಈ ಎಲ್ಲ ಬೇಡಿಕೆಗಳನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪರಿಶೀಲಿಸಿ, ಸಾಧ್ಯವಾದಷ್ಟು ಶೀಘ್ರವಾಗಿ ಪರಿಹರಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

"ಸಾರ್ವಜನಿಕರ ಸಮಸ್ಯೆಗಳಿಗೆ ಕೇವಲ ತಾತ್ಕಾಲಿಕ ಪರಿಹಾರ ನೀಡದೆ, ಶಾಶ್ವತ ಪರಿಹಾರ ಕಲ್ಪಿಸಲು ಜಿಲ್ಲಾಡಳಿತ ಮುಂದಾಗಬೇಕು" ಎಂದು ಬಿಜೆಪಿ ಬೀದರ್ ಗ್ರಾಮಾಂತರ ಮಂಡಲ ಅಧ್ಯಕ್ಷ ದೀಪಕ ಬಂಡೇಪ್ಪಾ ಗಾದಗೆ ಅಲಿಯಂಬರ್ ಅವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟಿಲ್, ಪಿರಪ್ಪ ಯರ್ನಳ್ಳಿ, ರಾಜೇಂದ್ರ ಪೂಜಾರಿ, ಶಶಿಧರ್ ಹೊಸಳ್ಳಿ, ಲುಂಬಿಣಿ ಗೌತಂ, ರಾಜಕುಮಾರ್ ಪಾಟಿಲ್, ಬಾಬುರಾವ್ ಮಲ್ಕಾಪೂರ್, ಲಕ್ಷ್ಮಣ್ ರಾಠೋಡ, ಗುರುನಾಥ್ ಜ್ಯಾಂತಿಕರ್, ನಾಗೇಂದ್ರ ಪಾಟಿಲ್, ನಿಜಲಿಂಗ ಪಾಟಿಲ್, ವಿಜಯಕುಮಾರ ಗಾದಗಿ, ಭೀಮಣ್ಣ ಚಿಕಪೇಟ, ಪ್ರಕಾಶ್ ಕೋಳಿ, ವಿಜಯಕುಮಾರ್ ಅಣಕಲೆ, ಸಂತೋಷ್ ಬಿರಾದರ್, ಶಂಕರ್ ಹಲ್ಗೆ, ಗೀತಾ ಠಾಕೂರ, ಸುರಜಸಿಂಗ ಠಾಕೂರ, ಅಶೋಕ ಪಾಟೀಲ್, ಮಲ್ಲಿಕಾರ್ಜುನ ಕಾರಬಾರಿ, ಭದ್ರೇಶ ಬಸಂತಪೂರ, ಸಂತೋಷ ಕಾಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.




ಬಸವಕಲ್ಯಾಣ :– ತಾಲೂಕಿನ ಸಸ್ತಾಪೂರ ಗ್ರಾಮದ ಸರಸ್ವತಿ ಮಂದಿರದಲ್ಲಿ ಹಾರಕೂಡ ಶ್ರೀಗಳ 1024ನೇ ತುಲಾಭಾರ ನಿಮಿತ್ಯ ಜರುಗಿದ ಧರ್ಮಸಭೆಯನ್ನು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬಸವರಾಜ ಆರ್. ಸ್ವಾಮಿ, ಲಿಂಗರಾಜ ಪಾಟೀಲ, ರಾಚಯ್ಯ ಸ್ವಾಮಿ ನೀಲಹಳ್ಳಿ, ಶಿವಕುಮಾರ ಘಾಳೆ, ಶಿವಕುಮಾರ ಮೊಳಕೆರೆ. ರಾಜಶ್ರೀ ಸ್ವಾಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಪಿ.ಎಂ.ಹೈಸ್ಕೂಲಿನಲ್ಲಿ ಕಾವ್ಯಗಾಯನ ಸ್ಪರ್ಧೆ : ಮೇಧಶ್ರೀ, ರಾಹುಲ್ ಪ್ರಥಮ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಪಟ್ಟಣದ ಪಿ.ಎಂ.ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳ ಗಾಯನ ಪ್ರತಿಭೆಯನ್ನು ಗುರುತಿಸಲು ಕಾವ್ಯ ಗಾಯನ ಸ್ಪರ್ಧೆಯನ್ನು ಶನಿವಾರ ರೈತ ಭವನದಲ್ಲಿ ಏರ್ಪಡಿಸಲಾಗಿತ್ತು. ಮುಖ್ಯಾಧ್ಯಾಪಕ ಚಂದ್ರಶೇಖರ ಕಡೇಮನಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಗಾಯನ ಮಾಡುವ ಸಂದರ್ಭದಲ್ಲಿ ರಾಗ, ತಾಳ, ಲಯದ ಕುರಿತು ಅರಿತುಕೊಂಡಿರಬೇಕು. ಉತ್ತಮ ಗಾಯನ ಮೂಲಕ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದರು. ಸಂಘಟಕ, ಕನ್ನಡ ಭಾಷಾ ಶಿಕ್ಷಕ ಜಿ.ಆರ್.ತಾಂಡೇಲ ಪ್ರಾಸ್ತಾವಿಕವಾಗಿ ಮಾತನಾಡಿ, ನಾವು ಮೊದಲು ಕನ್ನಡ ಮಾತೃಭಾಷೆಯನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು. ಹಾಡಿನಲ್ಲಿ ಸ್ಪಷ್ಟತೆ ಮತ್ತು ಧ್ವನಿ ಪೂರ್ಣತೆ ಒಳಗೊಂಡಿದಾಗ ಮಾತ್ರ ಉತ್ತಮ ಗಾಯನ ಹೊರಬರಲು ಸಾಧ್ಯ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಾರ್ಯೋನ್ಮುಖರಾಗಬೇಕು ಎಂದರು. ಶಿಕ್ಷಕರಾದ ಜಿ.ಎಸ್. ನಾಯ್ಕ, ನಯನಾ ನಾಯಕ, ರೇಷ್ಮಾ ಮಾನಕಾಮೆ,



ಮಾರುತಿ ನಾಯ್ಕ ಉಪಸ್ಥಿತರಿದ್ದರು. ಕಾವ್ಯಗಾಯನದ ಹುಡುಗಿಯರ ವಿಭಾಗದಲ್ಲಿ ಮೇಧಶ್ರೀ ಜಿ. ತಾಂಡೇಲ ಪ್ರಥಮ, ಅಭಿನಯ ನಾಯ್ಕ ದ್ವಿತೀಯ, ಅಪೂರ್ವ ಗಾಂವಕರ ತೃತೀಯ ಸ್ಥಾನ ಪಡೆದುಕೊಂಡರು. ಹುಡುಗರ ವಿಭಾಗದಲ್ಲಿ ರಾಹುಲ್ ಬಿ ದೊಡ್ಮನೆ ಪ್ರಥಮ, ವಿಜೇತ ನಾಯ್ಕ ದ್ವಿತೀಯ, ಸಂಭ್ರಮ ನಾಯ್ಕ ತೃತೀಯ ಸ್ಥಾನ ಪಡೆದುಕೊಂಡರು. ಶಿಕ್ಷಕರಾದ ಮಗುದುಮ್ ಅಲಗೋಡಿ, ರಾಜೇಶ ನಾಯಕ, ಶ್ರುತಿ ನಾಯ್ಕ ಸಹಕರಿಸಿದರು.

## ಭಾಲ್ಕಿ: ತಾ.ಪಂ. ನೂತನ ಇಒ ಆಗಿ ಬೀರೆಂದ್ರಸಿಂಗ್ ಠಾಕೂರ್ ಅಧಿಕಾರ ಸ್ವೀಕಾರ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಇಲ್ಲಿನ ತಾಲ್ಲೂಕು ಪಂಚಾಯಿತಿಯ ನೂತನ ಕಾರ್ಯನಿರ್ವಾಹಕ ಅಧಿಕಾರಿ (ಇಒ) ಬೀರೆಂದ್ರಸಿಂಗ್ ಠಾಕೂರ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು. ಪ್ರಭಾರಿ ಇಒ ಸೂರ್ಯಕಾಂತ ಬಿರಾದಾರ ಅವರು ಬೀರೆಂದ್ರಸಿಂಗ್ ಠಾಕೂರ್ ಅವರಿಗೆ ಅಧಿಕಾರ ಹಸ್ತಾಂತರಿಸಿ ಸನ್ಮಾನಿಸಿ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಈ ಮುಂಚೆ ಬೀರೆಂದ್ರಸಿಂಗ್ ಠಾಕೂರ್ ಅವರು ಬೀದರ ಜಿಲ್ಲಾ ಪಂಚಾಯಿತಿಯಲ್ಲಿ ಸಹಾಯಕ ಕಾರ್ಯದರ್ಶಿ (ಅಭಿವೃದ್ಧಿ)ಗಳಾಗಿ, ಔರಾದ್ ಹಾಗೂ ಬಸವಕಲ್ಯಾಣ ತಾಲ್ಲೂಕು ಪಂಚಾಯಿತಿಯಲ್ಲಿ ಇಒ ಆಗಿ ಸೇವೆ ಸಲ್ಲಿಸಿದ್ದಾರೆ. ತಾ.ಪಂ. ವ್ಯವಸ್ಥಾಪಕ ವಿನೋದ್ ರೆಡ್ಡಿ ಅಧಿಕಾರ ಹಸ್ತಾಂತರದ ಪ್ರಕ್ರಿಯೆ ಪೂರ್ಣಗೊಳಿಸಿದರು. ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಬಾಲಾಜಿ ಕೋಟೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಪ್ರವೀಣಕುಮಾರ, ಆನಂದ ಬೇಲೂರೆ, ಬಾಲಾಜಿ, ಅಮೋಲ್, ಶ್ರೀಕಾಂತ, ವಿಶ್ವದೀಪ ಸೇರಿದಂತೆ ಇತರರು ಇದ್ದರು.

## ಪತ್ರಕರ್ತರು ನಿಷ್ಪಕ್ಷವರದಿ ಸಲ್ಲಿಸಿ: ಪ್ರೊ. ನಾಗರಾಜ ಹಳ್ಳಿಯವರ

ಕಲಘಟಗಿ : ಸಮಾಜದ ಅಂಕುಡೊಂಕು ತಿದ್ದುವಲ್ಲಿ ಪತ್ರಕರ್ತರ ಪಾತ್ರ ಅತ್ಯಮೂಲ್ಯವಾಗಿದ್ದು ಕಾರ್ಯಾಂಗ ಶಾಸಕಾಂಗ ನ್ಯಾಯಾಂಗ ಇದನ್ನು ಮೀರಿ ಪತ್ರಿಕಾರಂಗ ಕೆಲಸ ಮಾಡುತ್ತಿದ್ದು ಪತ್ರಕರ್ತರು ಸಾದ್ಯವಾದಷ್ಟು ನಿಶ್ಪಕ್ಷವಾದ ವರದಿಯನ್ನು ಸಮಾಜಕ್ಕೆ ನೀಡಬೇಕು ಎಂದು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಸಮೂಹ ಸಂವಹನ ಮತ್ತು ಪತ್ರಿಕೊದ್ಯಮ ವಿಭಾಗದ ನಿವೃತ್ತ ಪ್ರಾದ್ಯಪಕರಾದ ಪ್ರೋ ನಾಗರಾಜ ಹಳ್ಳಿಯವರ ಹೇಳಿದರು.ಅವರು ಪಟ್ಟಣದ ಜಿ.ಇ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾ ಘಟಕದ ವತಿಯಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿ ಕರ್ನಾಟಕದಲ್ಲಿ ಮೊದಲು ಪತ್ರಿಕಾ ಪ್ರಕಟನೆಗೊಂಡಿದ್ದು ಮಂಗಳೂರನಲ್ಲಿ ನಂತರ ಅನೇಕ ಪತ್ರಿಕೆಗಳು ಬೆಳಕಿಗೆ ಬಂದು ದೇಶದ ಮಹಾನ ನಾಯಕರಾದ ಮಹಾತ್ಮಾ ಗಾಂಧಿ,ಜವಹರಲಾಲ ನೆಹರು ಕೂಡ ಪತ್ರಿಕೊದ್ಯಮದಲ್ಲಿ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದಾರೆ ಎಂದರು.ಕಾರ್ಯಕ್ರಮದ



ಉದ್ಘಾಟಕರಾಗಿ ಆಗಮಿಸಿದ ತಾಲೂಕಾ ತಹಶೀಲ್ದಾರ ಬಸವರಾಜ ಹೊಂಕಣ್ಣವರ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಪತ್ರಕರ್ತರು ಸಮಾಜದಲ್ಲಿಹಗಲು ರಾತ್ರಿ ಎನ್ನದೆ ತಮ್ಮ ಅಮೂಲ್ಯ ಕೊಡುಗೆ ಕೊಡುತ್ತಿರುವುದರಿಂದ ಸಮಾಜ ಸುವ್ಯವಸ್ಥಿತವಾಗಿದೆ ಎಂದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಡಾ ಬಂಡು ಕುಲಕರ್ಣಿ ಮಾತನಾಡಿ ನಮ್ಮ ಸಂಘದ ವತಿಯಿಂದ ತಾಲೂಕಿನ ಪ್ರತಿಯೊಬ್ಬರ ಪತ್ರಕರ್ತರ ರಕ್ಷಣೆಗೆ ಕಟುಬದ್ದವಾಗಿ ನಿಂತಿದ್ದು ಪತ್ರಕರ್ತರು ನಿರ್ಭಿತಿಯಿಂದ ವರಲ್ಲಿಸಬಹುದು ಎಂದರು.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಧರ್ಶಿ ಗುರುನಾಥ ಬಾಂಡಗೆ ,ತಾಲೂಕಾ ಕಾ.ನಿ.ಪ ಅಧ್ಯಕ್ಷ ಪ್ರಕಾಶ ಲಮಾಣಿ ಮಾತನಾಡಿದರು.

## ಮನೋರಮಾ ನಾಯ್ಕರಿಗೆ ಮುಖ್ಯಾಧ್ಯಾಪಕಿಯಾಗಿ ಬಡ್ತಿ : ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆಗೋಕರ್ಣ

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಬೇಲೆಹಿತ್ತಲನಲ್ಲಿ ಸುಮಾರು ಹದಿನೆಂಟು ವರ್ಷಗಳ ಕಾಲ ಸೇವೆ ಸಲ್ಲಿಸಿ, ಈಗ ತೊರ್ಕೆ ಹಿರಿಯ ಪ್ರಾಥಮಿಕ ಶಾಲೆಗೆ ಮುಖ್ಯಾಧ್ಯಾಪಕಿಯಾಗಿ ಮನೋರಮಾ ವಿ. ನಾಯ್ಕ ಬಡ್ತಿ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಬೇಲೆಹಿತ್ತಲಿನ ಶಾಲೆಯಲ್ಲಿ ಶಿಕ್ಷಕರು, ಗ್ರಾಮಸ್ಥರು, ವಿದ್ಯಾರ್ಥಿಗಳು, ಎಸ್‌ಡಿಎಂಸಿಯವರು ಬೀಳ್ಕೊಡುಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಸಿಆರ್‌ಪಿ ವಿನಾಯಕ ನಾಯ್ಕ ಮಾತನಾಡಿ, ಮನೋರಮಾ ನಾಯ್ಕ ಅವರು ಉತ್ತಮ ಶಿಕ್ಷಕಿಯಾಗಿ ಇಲಾಖೆಯಲ್ಲಿ ಗುರುತಿಸಿಕೊಂಡಿದ್ದಾರೆ. ಕ್ರಿಯಾಶೀಲರಾಗಿ ಇವರು ಈಗ ಬಡ್ತಿಯನ್ನು ಪಡೆದು ತೊರ್ಕೆ ಶಾಲೆಗೆ ನಿಯೋಜನೆಗೊಂಡಿರುವುದು ಹೆಮ್ಮೆಯ ಸಂಗತಿ ಎಂದರು. ಗ್ರಾ.ಪಂ. ಮಾಜಿ ಸದಸ್ಯ ಲಕ್ಷ್ಮೀಶ ಗೌಡ, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ನಾಗರಾಜ ಗೌಡ ಮಾತನಾಡಿದರು. ಸನ್ಮಾನ ಸ್ವೀಕರಿಸಿದ ಮನೋರಮ ನಾಯ್ಕ ಮಾತನಾಡಿ, ಕಳೆದ 18 ವರ್ಷಗಳಿಂದ ಈ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದು, ನನಗೆ ಅತೀವ ಸಂತಸವಿದೆ. ಜನರು ಕೂಡ ಅಷ್ಟೇ ಸ್ಪಂದಿಸಿದ್ದಾರೆ. ಇಲ್ಲಿಯ ನೆನಪು ಚಿರಕಾಲ ಇರಲಿದೆ ಎಂದರು. ಮುಖ್ಯಾಧ್ಯಾಪಕಿ ಮಾಸ್ತಿ ಗೌಡ ಸ್ವಾಗತಿಸಿದರು. ಶಿಕ್ಷಕಿ ನಾಗವೇಣಿ ನಾಯಕ ನಿರೂಪಿಸಿದರು.

## ವಲಯ ಮಟ್ಟದ ಕ್ರೀಡಾಕೂಟ: ಕೆಪಿಎಸ್‌ಸಿ ಕ್ರೀಡಾಪಟುಗಳ ಸಾಧನೆ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ತಾಲೂಕ ಮಂಗಳೂರಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಲಯ ಮಟ್ಟದ ಕ್ರೀಡಾಕೂಟಗಳು ನೆರವೇರಿದವು. ಕೆಪಿಎಸ್ ಮಂಗಳೂರಿನ ಬಾಲಕರು ಕಬಡ್ಡಿಯಲ್ಲಿ ಹಾಗೂ ಬಾಲಕಿಯರು ವಾಲಿಬಾಲ್ ನಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟದ ಕ್ರೀಡಾಕೂಟಗಳಿಗೆ 2 ನೇ ಬಾರಿಗೆ ಆಯ್ಕೆಯಾಗಿದ್ದಾರೆ.

ಸರಪಳಿ ಗುಂಡು ಎಸೆತದಲ್ಲಿ ಹನುಮೇಶ್ ಬೆವಿನಗಿಡದ್ (ಪ್ರಥಮ) ಇದೇ ಶಾಲೆಯ ವಿದ್ಯಾರ್ಥಿಗಳಾದ ತರುಣ್, ಶ್ರೀದೇವಿ,ಸಂಜನಾ, ಪ್ರಜ್ವಲ್ ಕಟ್ಟಿಮನಿ,ನವೀನ್ ಕುಮಾರ್, ಶಶಿಕಲಾ ಇತರೆ ಕ್ರೀಡೆಗಳಿಗೆ ತಾಲೂಕ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಉತ್ತಮ ಸಾಧನೆ ತೋರಿ ತಾಲೂಕ ಮಟ್ಟಕ್ಕೆ ಆಯ್ಕೆಯಾದ ಎಲ್ಲರಿಗೂ ಎಸ್ ಡಿ ಎಂ ಸಿ ಉಪಾಧ್ಯಕ್ಷ ಅನಿಲ್ ಕುಮಾರ್ ಎಂ ಕಲ್ಭಾವಿ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ



ಬನಿಗೋಳ್,ಪ್ರಂಶುಪಾಲ ಗೋಪಾಲಯ್ಯ ಟಿ,ಉಪಪ್ರಾಂಶುಪಾಲ ಹನಮಂತಪ್ಪ ಆವಾರದ ಮನಿ, ತಾಲೂಕ ದೈಹಿಕ ಪರಿವಿಕ್ಷಕ ಶರಣಪ್ಪ ವೀರಾಪೂರ ಮುಖ್ಯೋಪಾಧ್ಯಾಯರಾದ ಶಕುಂತಲಾ ಮಾಲಿಪಾಟೀಲ್, ಸ್ಥಾಯಿ ಸಮಿತಿ ಅಧ್ಯಕ್ಷರು, ನಾಮನಿರ್ದೇಶನ ಸದಸ್ಯರು, ಉಳಿದ ಸದಸ್ಯರು, , ಶಾಲೆಯ ದೈಹಿಕ ಶಿಕ್ಷಕಿ ಲಕ್ಷ್ಮೀದೇವಿ, ಕ್ರೀಡೆಯಲ್ಲಿ ಪಾಲ್ಗೊಂಡ ಸೋಮಪ್ಪ ನಾಯಕ್, ರವಿ ಡಿ ಮಳಗಿ, ಮಹಾವೀರ ಕಲ್ಭಾವಿ, ಆನಂದ ಚಿನ್ನೂರ್, ಬಾಬುಸಾಬ ಗುಡಿಹಿಂದಲ್, ಇತರ ಶಿಕ್ಷಕರು, ಕ್ರೀಡಾಪ್ರೇಮಿಗಳು, ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

## ನೂತನ ಶಾಲಾ ಕಟ್ಟಡ ಉದ್ಘಾಟಿಸಿದ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು

• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು

ಪಟ್ಟಣದ ಇಟಗಿ ರಸ್ತೆಯಲ್ಲಿ ಇರುವ ತಾತ ಎಜುಕೇಶನ್ ಟ್ರಸ್ಟ್(ರಿ) ಬನ್ನಿಗೋಳ. ವಿಜ್ಡಮ್ ವಿಂಗ್ಸ್ ಸಿ. ಬಿ.ಎಸ್. ಇ . ಶಾಲೆಯ ನೂತನ ಕಟ್ಟಡವನ್ನು ಶ್ರೀ ಮ.ನಿ.ಪ್ರ. ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಶುಕ್ರವಾರ ಉದ್ಘಾಟಿಸಿ ಮಾತನಾಡಿ ನಾವು ಈ ಭೂಮಿ ಮೇಲೆ ಸಂಪತ್ತು ಗಳಿಸಿದರೇ ನಮ್ಮ ಅಣ್ಣ ತಮ್ಮ ಅಕ್ಕ ತಂಗಿಯರು ಪಾಲುಕೇಳಿ ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಭೂಮಿಯ ಮೇಲಿರುವ ಧ್ಯಾನ ಹಾಗೂ ಜ್ಞಾನದ ಸಂಪತ್ತು ಯಾರಿಂದಲೂ ಕದಿಯಲು ಸಾಧ್ಯವಿಲ್ಲ ಅದು ನೀವು ಗಳಿಸಬೇಕಾದ ನಿಜವಾದ ಸಂಪತ್ತು ಅದ್ದರಿಂದ ಮಕ್ಕಳು ನಿಮ್ಮಿಂದ ಯಾರು ಕದಿಯಲಾರದ ಜ್ಞಾನದ ಸಂಪತ್ತುನ್ನು ನಿರಂತರ ಪ್ರಯತ್ನ ಮತ್ತು ಪರಿಶ್ರಮದಿಂದ ಗಳಿಸಬೇಕು ಎಂದು ಆರ್ಶೀವಚನ ನೀಡಿದರು. ಜೀವನವನ್ನು ಜಗತ್ತು ನಮಗೆ ಕಲಿಸುತ್ತದೆ. ಮಕ್ಕಳಿಗೆ ಜೀವನ ಕಷ್ಟ ಮತ್ತು ನೋವಿನ ಜೊತೆ ಈಜುವುದನ್ನು ಕಲಿಸಬೇಕು. ಬದುಕಿನ ಅರಿವಿನ ಜ್ಞಾನ ಅವರಿಗೆ ಆಗಬೇಕು. ಪರಿಸರದ ಸವಿಯನ್ನ ಸವಿದು ಮಕ್ಕಳು ಅನುಭವಿಸಿ, ಮಕ್ಕಳಿಗೆ ಬದುಕಿನ ವಿವಿಧ ಆಯಾಮಗಳಲ್ಲಿ ಕಲಿಕೆಯನ್ನು ರೂಢಿಸಿಕೊಳ್ಳುವಂತೆ ಶಿಕ್ಷಕರು ಪೋಷಕರು ಮಾಡಬೇಕು ಎಂದು ಶ್ರೀಗಳು ಹೇಳಿದರು.ಕಡಲಬಾಳು ಶ್ರೀ ಮ.ನಿ.ಪ್ರ. ಮರಿಶಾಂತವೀರ ಮಹಾಸ್ವಾಮಿಗಳು ಮಾತನಾಡಿ ನಮ್ಮೊಳಗೆ ಧೃಡವಾದ ಸಂಕಲ್ಪ ಇದ್ದರೆ ಪ್ರಕೃತಿಯೇ ನಮಗೆ ಸಹಕಾರ ನೀಡುತ್ತದೆ. ಮಕ್ಕಳ ಕಲಿಕೆ ಸೂಕ್ತವಾಗುವಂತೆ ಗಾಳಿ,ಬೆಳಕು, ಉತ್ತಮ ಶಿಕ್ಷಣ ಕಲಿಕೆಗೆ ಸಹಾಯ ಮಾಡುತ್ತದೆ ಎಂದು ಕಾರ್ಯಕ್ರಮದ ಸಾನಿಧ್ಯ ವಹಿಸಿ ಆರ್ಶೀವಚನ ನೀಡಿದರು.



ವಿಜ್ಡಮ್ ವಿಂಗ್ಸ್ ಸಿ.ಬಿ.ಎಸ್.ಇ. ಶಾಲಾ ಸಂಸ್ಥಾಪಕರಾದ ಹಸೇನ್ ಸಾಹೇಬ್ ಮಾತನಾಡಿ ಬನ್ನಿಗೋಳ ಗ್ರಾಮದ ತಾತ ಎಜುಕೇಷನ್ ಟ್ರಸ್ಟ್ ಸಹಕಾರ ಹಾಗೂ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಆರ್ಶೀವಾದ ಕೊಟ್ಟೂರು ಪಟ್ಟಣದ ಪಾಲಕ ಪೋಷಕರ ಸಹಕಾರದಿಂದ ನೂತನ ಕಟ್ಟಡವನ್ನು ಅತ್ಯಂತ ಕಡಿಮೆ ಸಮಯದಲ್ಲಿ ನಿರ್ಮಾಣ ಮಾಡಲು ಸಾಧ್ಯವಾಗಿದೆ. ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳಿಂದಲೇ ಕಟ್ಟಡ ಉದ್ಘಾಟಿಸಬೇಕೆಂಬುದು ನಮ್ಮೆಲ್ಲೆರ ಹಂಬಲವಾಗಿತ್ತು ಇಂದು ನಮ್ಮೆಲ್ಲರ ಬಯಕೆ ಆಶಯಗೊಂಡಿದೆ ಎಂದು ಪ್ರಾಸ್ತಾವಿಕ ನುಡಿಯಲ್ಲಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ಶಾಲೆ ಆರಂಭದಿಂದಲೇ ಹೆಚ್ಚು ಅಂಕಪಡೆದು ಶಾಲೆ ಹಾಗೂ ಊರಿನ ಮತ್ತು ತಂದೆ ತಾಯಿಗೆ ಕೀರ್ತಿ ತಂದ ಮಕ್ಕಳಿಗೆ ಸನ್ಮಾನಿಸಲಾಯಿತು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬಿ.ಮೈಲೇಶ್. ಶಾಲಾ ಆಡಳಿತ ಮಂಡಳಿ ಗೌರವಾಧ್ಯಕ್ಷರಾದ ಸಣ್ಣ ವೀರಣ್ಣ ಹಾಗೂ ಅಧ್ಯಕ್ಷರು ಮತ್ತು ಸದಸ್ಯರು,, ಶಿಕ್ಷಕರು, ಪೋಷಕರು ಶಾಲಾ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.

## ಜಿ.ಸಿ. ಕಾಲೇಜಿನಲ್ಲಿ ವಿವಿಧ ವಿದ್ಯಾರ್ಥಿ ಪ್ರತಿನಿಧಿಗಳ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ






ಪಟ್ಟಣದ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಪ್ರತಿನಿಧಿಗಳ ಚುನಾವಣೆಯಲ್ಲಿ ಯುನಿಯನ್ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ಬಿ. ಎಸ್ಸಿ. ಫೈನಲ್ ತರಗತಿ ವಿದ್ಯಾರ್ಥಿನಿ ಭಾರ್ಗವಿ ಆನಂದು ಸಿಂಧೆ, ಜಿಮುಖಾನಾ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ಅಮಿಶಾ ಅವಿನಾಶ ಚೌಧರಿ ಆಯ್ಕೆಯಾದರು.

ವಿವಿಧ ಸಮಿತಿಗಳ ಪ್ರತಿನಿಧಿಗಳಾಗಿ ಮೇಘನಾ ಗೌಡ, ಕೀರ್ತಿ ಗೌಡ, ದೀಕ್ಷಾ ಹರಿಕಾಂತ, ಜಾಹ್ನವಿ ಮೋರೆ, ಸುಲೋಚನಾ ಗೌಡ, ಭಗತ ನಾಯಕ, ತಿಲಕ ಗೌಡ, ಸಂಪ್ರತಾ ಗೌಡ, ಸೋನಾಲಿ ಜೋಗಳೇಕರ, ಛಾಯಾ ಕಾನಡೆ, ರೇಷ್ಮಾ ಗೌಡ, ಅಭಿಷೇಕ ಎಸ್. ಆಗೇರ, ಮೇಘಾ ಗೌಡ, ವೈಭವ ನಾಯಕ, ಅಶ್ವಿನಿ ನಾಯಕ ಆಯ್ಕೆಯಾಗಿದ್ದಾರೆ ಎಂದು ಪ್ರಾಚಾರ್ಯ ಸಿದ್ದಲಿಂಗಸ್ವಾಮಿ ವಸ್ತ್ರದ ತಿಳಿಸಿದ್ದಾರೆ. ಚುನಾವಣೆ ಅಧಿಕಾರಿಗಳಾಗಿ ಗ್ರಂಥಪಾಲಕ ನಂಜುಂಡಯ್ಯ, ದೈಹಿಕ ಶಿಕ್ಷಣ ನಿರ್ದೇಶಕ ಅಶ್ವಿನ್, ಉಪನ್ಯಾಸಕ ನಾಗರಾಜ ದಿವಗೀಕರ ಕಾರ್ಯನಿರ್ವಹಿಸಿದರು.

## ವಿಳಂಬವಾಗಿ ಅಗಸ್ಟ್‌ನಲ್ಲಿಯೂ ನಡೆಯುತ್ತಿರುವ ನಾಟಿಕಾರ್ಯ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಸುಂಕಸಾಳ ಗ್ರಾ.ಪಂ.ವ್ಯಾಪ್ತಿಯ ಸೂರ್ಯ ಕಲ್ಯಾಣಿ ಗುಡ್ಡದ ತಬ್ಬಲಿನಲ್ಲಿ ಈಗ ಭತ್ತದ ನಾಟಿ ಕಾರ್ಯ ನಡೆಯುತ್ತಿದೆ. ಪ್ರತಿವರ್ಷ ಜೂನ್ ಕೊನೆ ವಾರ ಅಥವಾ ಜುಲೈ ಮೊದಲ ವಾರದಲ್ಲಿ ನಾಟಿ ಕಾರ್ಯ ನಡೆಯುತ್ತಿದ್ದವು. ಆದರೆ ಈ ಬಾರಿ ಅಗಸ್ಟ್‌ನಲ್ಲಿ ನಾಟಿ ಕಾರ್ಯ ಮಾಡುತ್ತಿದ್ದಾರೆ. ಹಾಗೇ ಈ ಭಾಗದಲ್ಲಿ ಈಗ ಅಪರೂಪದ ಬಿಳಿ ಕಲ್ಲೆಡಿ ಕೂಡ



ಕಾಣಿಸಿಕೊಳ್ಳುತ್ತಿವೆ.

ಮಳೆ ಬಿಸಿಲಿನಾಟದ ನಡುವೆ ತಡವಾಗಿ ನಾಟಿ ಕಾರ್ಯ ಮಾಡುತ್ತಿದ್ದು, ಇನ್ನು ಕಟಾವಿಗೆ ಬರುವ ಸಂದರ್ಭದಲ್ಲಿ ಮತ್ಯಾವ ಸಮಸ್ಯೆ ಕಾಡಲಿದೆಯೋ ಎಂಬ ಚಿಂತೆ ಕೂಡ ರೈತರಲ್ಲಿ ಮನೆ ಮಾಡಿದೆ. ಒಟ್ಟಿನಲ್ಲಿ ಈ ವರ್ಷ ಕಳೆದ ವರ್ಷಕ್ಕಿಂತ ಕಡಿಮೆ ಹೆಕ್ಟರ್ ಪ್ರದೇಶದಲ್ಲಿ ನಾಟಿ ಕಾರ್ಯ ಮಾಡುತ್ತಿದ್ದು, ಅಲ್ಲಲ್ಲಿ ಬಂಜರು ಬಿದ್ದ ಕೃಷಿ ಭೂಮಿ ಕಂಡುಬರುತ್ತಿದೆ.

# ಜಿಲ್ಲಾ ವಕೀಲರ ಸಂಘಕ್ಕೆ ಹಿರಿಯ ವಕೀಲ ಸಿ.ಎಸ್. ಮಾಲಿ ಪಾಟೀಲ ಅಧ್ಯಕ್ಷರಾಗಿ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಜಿಲ್ಲಾ ವಕೀಲರ ಸಂಘದ 2026–27 ಸಾಲಿಗಾಗಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಹಿರಿಯ ವಕೀಲ ಸಿ.ಎಸ್. ಮಾಲಿ ಪಾಟೀಲ ಅವರು ತಮ್ಮ ಪ್ರತಿಸ್ಪರ್ಧಿಗಿಂತ 30 ಮತಗಳು ಹೆಚ್ಚಿಗೆ ಪಡೆದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಮುಖ್ಯ ಚುನಾವಣಾ ಅಧಿಕಾರಿ ನಾಗಭೂಷಣ ಬಿ.ಆಡಕಿ ತಿಳಿಸಿದ್ದಾರೆ.ಇಲ್ಲಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶುಕ್ರವಾರ ಬೆಳಗ್ಗೆಯಿಂದ ಸಂಜೆವರೆಗೆ ನಡೆದ ಮತದಾನ ನಡೆದು, ನಂತರ ತಡರಾತ್ರಿಯವರೆಗೂ ಮತ ಎಣಿಕೆಯಲ್ಲಿ ಮಾಲಿಪಾಟೀಲ ಅವರು 170 ಮತಗಳನ್ನು ಪಡೆದು ವಿಜೇತರಾದರೇ, ಅವರ ಪ್ರತಿ ಸ್ಪರ್ಧಿ ಶಾಂತಪ್ಪ ಎಸ್. ಖಾನಳ್ಳಿ ಅವರು 140 ಮತಗಳು ಪಡೆದು ಪರಾಭವಗೊಂಡರು.191 ಮತಗಳನ್ನು ಪಡೆದ ದೇವೇಂದ್ರಪ್ಪ ಎಚ್.ಯರಗೋಳ ಉಪಾಧ್ಯಕ್ಷರಾಗಿ ಆಯ್ಕೆಯಾದರೇ, ಇದೇ ಸ್ಥಾನಕ್ಕೆ ಸ್ಪರ್ಧಿಸಿದ್ದ ಶಶಿಧರ ಎಸ್.ಕಮತಗಿ 118 ಮತಗಳನ್ನು ಗಳಿಸಿದ್ದು, 73 ಮತಗಳಿಂದ ಪರಾಭವಗೊಂಡರು.156 ಮತಗಳನ್ನು ಪಡೆದು ಪ್ರಧಾನ ಕಾರ್ಯದರ್ಶಿಯಾಗಿ ಗೋವಿಂದಬಿ.ಜಾಧವ್ ಆಯ್ಕೆಯಾದರೇ ಇವರ ಪ್ರತಿಸ್ಪರ್ಧಿಗಳಾದ

ಯಂಕಟರೆಡ್ಡಿ 140 ಮತಗಳನ್ನು ಪಡೆದು ಎರಡನೇ ಸ್ಥಾನ ಮತ್ತು ಭೀಮಾಶಂಕರ 12 ಮತಗಳನ್ನು ಪಡೆದು ಮೂರನೇ ಸ್ಥಾನ ಪಡೆದರು ಎಂದು ಅವರು ತಿಳಿಸಿದ್ದಾರೆ.ಅವಿರೋಧ ಆಯ್ಕೆ: ಮಹಿಳಾ ಉಪಾಧ್ಯಕ್ಷೆ ಸ್ಥಾನಕ್ಕೆ ನಾಗರತ್ನ ಎಂ. ಅನಪುರ, ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ದೇಶಮುಖ ಪ್ರಶಾಂತ,ಖಜಾಂಚಿ ಸ್ಥಾನಕ್ಕೆ ವಿನೋದಕುಮಾರ ಜೈನ್ ಹಾಗೂ ಮಹಿಳಾ ಖಜಾಂಚಿ ಸ್ಥಾನಕ್ಕೆ ಶ್ಯಾಮಾಲಾ ವಾರದ ಅವರು ಸಹ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಆಡಕಿ ಮಾಹಿತಿ ನೀಡಿದ್ದಾರೆ.ಸಂಘದ ಚುನಾವಣೆ ಸುಸೂತ್ರವಾಗಿ ನಡೆದಿದ್ದು, ಸಂಘದ 337 ಸದಸ್ಯರ ಪೈಕಿ 314 ಸದಸ್ಯರು ತಮ್ಮ ಮತ ಚಲಾಯಿಸಿದ್ದಾರೆ.ಸಹಾಯಕ ಚುನಾವಣಾ ಅಧಿಕಾರಿಗಳಾಗಿ ವಿಜಯಾನಂದ ಎಸ್.ಯರಗೋಳ ಹಾಗೂ ಶಿವರಾಮರೆಡ್ಡಿ ವಿ. ಪಾಟೀಲ ನಿಯೋಜನೆಗೊಂಡಿದ್ದರು. ನಂತರ ವಿಜೇತರು,ವಕೀಲರು,ಅಭಿಮಾನಿಗಳು ವಿಜೋತ್ಸವ ಆಚರಿಸಿದರು.

# ಆ.8 ರ ಸಂಜೆ 4 ರವರೆಗಿನ ಪ್ರಗತಿ ವರದಿ ಬಿಡುಗಡೆ

ಯಾದಗಿರಿ, ಆ.08: ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯು ಬಿರುಸಿನಿಂದ ಸಾಗುತ್ತಿದ್ದು, ಜೂನ್ 30 ರಿಂದ ಆರಂಭವಾಗಿರುವ ಈ ಪ್ರಕ್ರಿಯೆಯು ಆಗಸ್ಟ್.8 ರವರೆಗೆ ನಡೆಯಲಿದ್ದು, ಬಿ.ಎಲ್.ಓ ಗಳು ಮನೆ–ಮನೆಗೆ ಭೇಟಿ ನೀಡಿ ಎಣಿಕೆ ನಮೂನೆ (ಎನುಮರೇಷನ್ ಫಾರಂ–ಇಎಫ್) ವಿತರಿಸುವ ಹಾಗೂ ಡಿಜಿಟೈಸೇಶನ್ ಮಾಡುವ ಕಾರ್ಯದಲ್ಲಿ ನಿರತರಾಗಿದ್ದಾರೆ.

**CHANGE OF NAME**
I, AKASH BASNALE
S/O PRAKASH R/o AT GOKUL
POST KITTA TQ. BASAVAKALYAN
DIST- BIDAR. KARNATAKA
I have changed my name from
AKASH S/O PRAKASH
(Old Name) To
AKASH BASNALE S/O PRAKASH
(New Name)
Vide affidavit sworn before
Notary Ashok Guttedar
at Basavakalayan on 08-08-2026

# 102 ವರ್ಷದ ಹೀರದ ಸೂಗಮ್ಮ ಶಾಲೆಯ ಶತಮಾನೋತ್ಸವ ಸಂಭ್ರಮ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಇತಿಹಾಸ ಮತ್ತು ಪರಂಪರೆ ಹೊಂದಿರುವ 102 ವರ್ಷದ ಹೀರದ ಸೂಗಮ್ಮ ಶಾಲೆಯ ಶತಮಾನೋತ್ಸವ ಸಂಭ್ರಮಕ್ಕೆ ಶನಿವಾರ ಅದ್ಧೂರಿ ಚಾಲನೆ ದೊರೆಯಿತು. ನಗರದ ಹೊಸ ಬಸ್ ನಿಲ್ದಾಣದ ಎದುರಿನ ಶಾಲಾ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರದ ಗಣ್ಯರು, ಜನಪ್ರತಿನಿಧಿಗಳು, ಹಳೆಯ ವಿದ್ಯಾರ್ಥಿಗಳು, ದಾನಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಶಾಸಕ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ನಾಗೇಂದ್ರ, ಲೋಕಸಭಾ ಸದಸ್ಯ ಇ. ತುಕಾರಾಂ, ಎಂ.ಬಿ. ಪಾಟೀಲ್, ಅಲ್ಲಂ ವೀರಭದ್ರಪ್ಪ, ಮುಂಡ್ರಿಗಿ ನಾಗರಾಜ್, ಸೌಕಾರ್ ಸತೀಶ್ ಬಾಬು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು, ಶತಮಾನೋತ್ಸವ ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ಗಣ್ಯರು ಶಾಲೆಯ ಶೈಕ್ಷಣಿಕ ಸೇವೆ ಹಾಗೂ ಶತಮಾನಕ್ಕೂ ಅಧಿಕ ಕಾಲದ ಸುದೀರ್ಘ ಪರಂಪರೆಯನ್ನು ಸ್ಮರಿಸಿ, ಸಂಸ್ಥೆಯ ಮುಂದಿನ ಶೈಕ್ಷಣಿಕ ಬೆಳವಣಿಗೆಗೆ ಶುಭ ಹಾರೈಸಿದರು.

ಶತಮಾನಕ್ಕೂ ಅಧಿಕ ಕಾಲ ಬಳ್ಳಾರಿ ನಗರದಲ್ಲಿ ಶಿಕ್ಷಣದ ಬೆಳಕು ಹಂಚುತ್ತಿರುವ ಹೀರದ ಸೂಗಮ್ಮ ಶಾಲೆಯ ಶತಮಾನೋತ್ಸವ ಕಾರ್ಯಕ್ರಮವು ವಿವಿಧ ಸಾಂಸ್ಕೃತಿಕ ಹಾಗೂ ವಿಶೇಷ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಗಿ ನಡೆಯಿತು. ಶಾಲೆಯ ಹಳೆಯ ವಿದ್ಯಾರ್ಥಿಗಳು ಹಲವು ವರ್ಷಗಳ ಬಳಿಕ ಒಂದೆಡೆ ಸೇರಿ ತಮ್ಮ ಶಾಲಾ ದಿನಗಳ ನೆನಪುಗಳನ್ನು ಮೆಲುಕು ಹಾಕಿದ್ದು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು, ಹೀರದ ಸೂಗಮ್ಮ ಶಾಲೆಯು ಕೇವಲ ಶಿಕ್ಷಣ ನೀಡುವ ಸಂಸ್ಥೆಯಾಗಿರದೆ, ವಿದ್ಯಾರ್ಥಿಗಳಲ್ಲಿ ಸಂಸ್ಕಾರ, ಶಿಸ್ತು, ಸಾಮಾಜಿಕ ಜವಾಬ್ದಾರಿ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವ ಮಹತ್ವದ ಶಿಕ್ಷಣ ಸಂಸ್ಥೆಯಾಗಿ ಗುರುತಿಸಿಕೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

1916ರಲ್ಲಿ ಹಾನಗಲ್ ಕುಮಾರ ಶಿವಯೋಗಿಗಳು ಹಾಗೂ ಉಜ್ಜಯಿನಿ ಪೀಠದ ಸಿದ್ದಲಿಂಗ ಶಿವಾಚಾರ್ಯ ಜಗದ್ಗುರುಗಳ ಮಾರ್ಗದರ್ಶನದಲ್ಲಿ ವೀರಶೈವ ವಿದ್ಯಾವರ್ಧಕ ಸಂಘ ಸ್ಥಾಪನೆಯಾಗಿ ಶಿಕ್ಷಣ ಹಾಗೂ ಸಾಮಾಜಿಕ ಜಾಗೃತಿಯ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿದೆ. ಇದರ ಶೈಕ್ಷಣಿಕ ಪರಂಪರೆಯ ಪ್ರಮುಖ ಸಂಸ್ಥೆಗಳಲ್ಲಿ ಹೀರದ ಸೂಗಮ್ಮ ಶಾಲೆಯೂ ಒಂದಾಗಿದೆ ಎಂದು ಗಣ್ಯರು ಸ್ಮರಿಸಿದರು.

1924ರ ಏಪ್ರಿಲ್ 4ರಂದು ಗಣೇಶಗುಡಿ ಬೀದಿಯಲ್ಲಿನ ಚೌಕಿಯಲ್ಲಿ ಸಂಸ್ಕೃತ ಪಾಠಶಾಲೆಯಾಗಿ ಆರಂಭಗೊಂಡಿದ್ದ ಶಾಲೆ, ಬಳಿಕ ಹಿರಿಯ ಪ್ರಾಥಮಿಕ ಶಾಲೆಯಾಗಿ ಅಭಿವೃದ್ಧಿ ಹೊಂದಿತು. 1995ರಲ್ಲಿ ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡ ಶಾಲೆಯಲ್ಲಿ ಪ್ರಸ್ತುತ ಕನ್ನಡ ಹಾಗೂ ಆಂಗ್ಲ ಮಾಧ್ಯಮಗಳಲ್ಲಿ 824ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 29 ಮಂದಿ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ.

ಶಾಲೆಯು ಶಿಕ್ಷಣದ ಜತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಗಮನಾರ್ಹ ಸಾಧನೆ ಮಾಡಿದೆ. ಶಾಲೆಯ ಹಳೆಯ ವಿದ್ಯಾರ್ಥಿಗಳು ವೈದ್ಯಕೀಯ, ನ್ಯಾಯಾಂಗ, ಶಿಕ್ಷಣ, ಮಾಧ್ಯಮ, ಆಡಳಿತ ಹಾಗೂ ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿರುವುದನ್ನು ಕಾರ್ಯಕ್ರಮದಲ್ಲಿ ಸ್ಮರಿಸಲಾಯಿತು.

ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ, ಗಣ್ಯರ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ವಿವಿಧ ವಿಶೇಷ ಕಾರ್ಯಕ್ರಮಗಳು ಜರುಗಿದವು. ಹಳೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ಅನುಭವಗಳನ್ನು ಹಂಚಿಕೊಂಡು, ಶಾಲೆಯೊಂದಿಗಿನ ತಮ್ಮ ಅವಿನಾಭಾವ ಸಂಬಂಧವನ್ನು ಮೆಲುಕು ಹಾಕಿದರು.

ಶಾಲಾ ಆಡಳಿತ ಮಂಡಳಿ, ಶಿಕ್ಷಕರು, ಸಿಬ್ಬಂದಿ, ಹಳೆಯ ವಿದ್ಯಾರ್ಥಿಗಳು, ದಾನಿಗಳು ಹಾಗೂ ವಿದ್ಯಾರ್ಥಿಗಳ ಸಹಕಾರದಿಂದ ನಡೆದ ಶತಮಾನೋತ್ಸವ ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. 102 ವರ್ಷಗಳ ಶೈಕ್ಷಣಿಕ ಪರಂಪರೆಯನ್ನು ಸ್ಮರಿಸುವುದರೊಂದಿಗೆ ಮುಂದಿನ ಪೀಳಿಗೆಗೆ ಉತ್ತಮ ಶಿಕ್ಷಣ ಮತ್ತು ಮೌಲ್ಯಗಳನ್ನು ನೀಡುವ ಸಂಕಲ್ಪದೊಂದಿಗೆ ನಡೆದ ಕಾರ್ಯಕ್ರಮವು ಬಳ್ಳಾರಿ ನಗರದ ಶಿಕ್ಷಣ ಇತಿಹಾಸದಲ್ಲಿ ಮಹತ್ವದ ಕ್ಷಣವಾಗಿ ಮೂಡಿಬಂದಿತು.

# ಯುವಜನರಲ್ಲಿ ನಾಯಕತ್ವ ಗುಣ ಬೆಳೆಸಲು ತರಬೇತಿ ಅಗತ್ಯ: ಶರಣಬಸವ ಪೊಲೀಸ್ ಬಿರಾದಾರ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

: ಇಂದಿನ ಯುವಜನರು ತಮ್ಮಲ್ಲಿರುವ ಸಾಮರ್ಥ್ಯವನ್ನು ಅರಿತು ಆತ್ಮವಿಶ್ವಾಸ, ನಾಯಕತ್ವಗುಣ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಿಕೊಂಡಾಗ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಶರಣಬಸವ ಪೊಲೀಸ್ ಬೀರದಾರ್ ಹೇಳಿದರು.

ತಾಲ್ಲೂಕಿನ ಸೈದಾಪುರದ ಯುನೈಟೆಡ್ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್ (ಐಎಸ್ಐ), ಬೆಂಗಳೂರು ಹಾಗೂ ಸರ್ವೋದಯ ಟ್ರಸ್ಟ್ ಕನ್ನೆ ಕೋಳೂರು, ಕನಸು ಟ್ರಸ್ಟ್ ಹುಲ್ಕಲ್ (ಜೆ) ಹಾಗೂ ಸುಮಿತ್ ಸಂಸ್ಥೆ ರಸ್ತಾಪುರ ಸಹಯೋಗದಲ್ಲಿ ಆಯೋಜಿಸಿರುವ 'ಗ್ರಾಮೀಣ ಯುವಜನರಿಗಾಗಿ ಮೂರು ದಿನಗಳ ಸಾಮರ್ಥ್ಯ ವರ್ಧನಾ ತರಬೇತಿ– 'ನಾವು ಮತ್ತು ಸಮಾಜ, ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಯುವಕರು ಜೀವನದಲ್ಲಿ ಸ್ಪಷ್ಟ ಗುರಿ ಹೊಂದಬೇಕು. ಎದುರಾಗುವ ಸವಾಲುಗಳಿಗೆ ಎದೆಗುಂದದೆ ಆತ್ಮವಿಶ್ವಾಸದಿಂದ ಮುನ್ನಡೆಯಬೇಕು. ಶಿಕ್ಷಣದೊಂದಿಗೆ ಉತ್ತಮ ವ್ಯಕ್ತಿತ್ವ, ಶಿಸ್ತು, ಸಾಮಾಜಿಕ ಕಾಳಜಿ ಹಾಗೂ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಾಗ ಬದುಕಿನಲ್ಲಿ ಯಶಸ್ಸು ಸಾಧಿಸಲು ಸಾಧ್ಯ' ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾತ್ಮಕ ಮಾತುಗಳನ್ನಾಡಿದರು.

ಐಎಸ್ಐ ರಾಜ್ಯ ಸಂಯೋಜಕ ಹಾಗೂ ವಕೀಲ ವಸಂತ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ,



ಗ್ರಾಮೀಣ ಯುವಜನರಲ್ಲಿ ಸ್ವ–ಅರಿವು, ವ್ಯಕ್ತಿತ್ವ ವಿಕಾಸ, ನಾಯಕತ್ವ ಸಾಮರ್ಥ್ಯ ಹಾಗೂ ಸಮಾಜದ ಬಗೆಗಿನ ಜವಾಬ್ದಾರಿಯನ್ನು ಬೆಳೆಸುವುದು ಮೂರು ದಿನಗಳ ತರಬೇತಿಯ ಪ್ರಮುಖ ಆಶಯವಾಗಿದೆ. ಯುವಕರು ತಮ್ಮನ್ನು ತಾವು ಅರಿತುಕೊಳ್ಳುವುದರ ಜೊತೆಗೆ ಸಮಾಜದ ವಾಸ್ತವಗಳನ್ನು ಅರ್ಥೈಸಿಕೊಂಡು ಸಕಾರಾತ್ಮಕ ಬದಲಾವಣೆಯ ಭಾಗವಾಗಬೇಕು ಎಂದರು.

ಶಿಬಿರದಲ್ಲಿ ಯುವಜನರಿಗೆ ವ್ಯಕ್ತಿತ್ವ ವಿಕಾಸ, ಸ್ವ–ಅರಿವು ಮತ್ತು ಸಮಾಜ, ನಾಯಕತ್ವ ಕೌಶಲ್ಯ, ಸಂವಹನ ಸಾಮರ್ಥ್ಯ, ಸಂವಿಧಾನ ಮೌಲ್ಯಗಳು ಹಾಗೂ ಸಾಮಾಜಿಕ ಜವಾಬ್ದಾರಿ ಸೇರಿದಂತೆ ವಿವಿಧ ವಿಷಯಗಳ ಕುರಿತು ತರಬೇತಿ ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿ ಡಾ. ಶ್ರೀನಿವಾಸ , ಸೇವಾ ಮನೋಭಾವದ ಎಸ್.ಬಿ.ಐ. ಬ್ಯಾಂಕ್ ಸಿಬ್ಬಂದಿ ರವಿಚಂದ್ರ, ಕನಸು ಟ್ರಸ್ಟ್‌ನ ಕಾರ್ಯದರ್ಶಿ ಸಂಗೀತ ಹುಲ್ಕಲ್, ಸರ್ವೋದಯ ಟ್ರಸ್ಟ್ ನ ಸದಸ್ಯ ಮೋಹನ ಕುಮಾರ್, ಸುಮಿತ್ ಸಂಸ್ಥೆ ಮಲ್ಲಿಕಾರ್ಜುನ ಅರಬೋಳ ಸೇರಿದಂತೆ ವಿವಿಧ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ದೇವಿಂದ್ರ ಹುಲ್ಕಲ್ (ಜೆ) ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

# ಬಣಜಿಗ ಸಮಾಜದ ತಾಲೂಕು ಘಟಕಕ್ಕೆ ನಾಗಣ್ಣ ಸಾಹು ದಂಡಿನ, ನೀಲಕಂಠ ಚಿಂಚೋಳಿ ಅವಿರೋಧ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಹುಣಸಗಿ ತಾಲೂಕು ಘಟಕದ ಗೌರವ ಅಧ್ಯಕ್ಷರಾಗಿ ಸಮಾಜದ ಹಿರಿಯರಾದ ನಾಗಣ್ಣ ಸಾಹು ದಂಡಿನ ಹಾಗೂ ತಾಲೂಕು ಅಧ್ಯಕ್ಷರಾಗಿ ನೀಲಕಂಠ ಚಿಂಚೋಳಿ ಅವರು ಅವಿರೋಧವಾಗಿ ಆಯ್ಕೆಯಾದರು.ಆಯ್ಕೆ ಬಳಿಕ ಮಾತನಾಡಿದ ಗೌರವ ಅಧ್ಯಕ್ಷ ನಾಗಣ್ಣ ಸಾಹು ದಂಡಿನ, ಸಮಾಜದ ಏಳಿಗೆ ಹಾಗೂ ಸಮಸ್ಯೆಗಳ ಪರಿಹಾರಕ್ಕಾಗಿ ಎಲ್ಲರನ್ನು ಒಗ್ಗೂಡಿಸಿಕೊಂಡು ಸಂಘಟನೆಯನ್ನು ಬಲಪಡಿಸಬೇಕು. ಸಮಾಜದ ಎಲ್ಲರ ಕಷ್ಟ–ಸುಖಗಳಲ್ಲಿ ಭಾಗಿಯಾಗಿ, ನೀಲಕಂಠೇಶ್ವರನ ಆಶೀರ್ವಾದದೊಂದಿಗೆ ಸಮಾಜದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸೋಣ. ಸಂಘಟನೆಯಲ್ಲಿ ಬಲವಿದೆ ಎಂದು ಹೇಳಿದರು.ತಾಲೂಕು ಅಧ್ಯಕ್ಷರಾಗಿ ಆಯ್ಕೆಯಾದ ನೀಲಕಂಠ ಚಿಂಚೋಳಿ ಮಾತನಾಡಿ, ಸಮಾಜದ ಹಿರಿಯರ ಮಾರ್ಗದರ್ಶನದಲ್ಲಿ ಯುವಶಕ್ತಿಯನ್ನು ಸಂಘಟಿಸಿ, ಶಿಕ್ಷಣ, ಉದ್ಯೋಗ ಹಾಗೂ ಆರ್ಥಿಕ ಪ್ರಗತಿಗೆ ಆದ್ಯತೆ ನೀಡಿ ಸಮಾಜದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರುಪ್ರಾಸ್ತಾವಿಕವಾಗಿ ಮಾತನಾಡಿದ ಬಸವರಾಜ ಮೇಲಿನಮನಿ ಅವರು ಬಣಜಿಗ ಸಮಾಜದ ಇತಿಹಾಸ, ಪ್ರಸ್ತುತ ಸ್ಥಿತಿ ಹಾಗೂ ಭವಿಷ್ಯದ ಬೆಳವಣಿಗೆ ಕುರಿತು ವಿವರಿಸಿದರು. ಚಂದ್ರಶೇಖರ್ ದಂಡಿನ, ಸಿದ್ರಾಮಪ್ಪ ಮುದಗಲ್, ಬಸವರಾಜ ಮರೋಳ ಹಾಗೂ ರವಿಕುಮಾರ್ ಬಂಟನೂರ ಅವರು ಸಮಾಜದ ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಯ ಅಗತ್ಯತೆ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.ಶಹಾಪುರ ತಾಲೂಕು ಬಣಜಿಗ ಸಮಾಜದ ಅಧ್ಯಕ್ಷ ಮಹೇಶ್



ಆನೆಗುಂದಿ ಅವರು ಸಮಾಜದ ಮುಖಂಡರು ಸರ್ವಾನುಮತದಿಂದ ಸೂಚಿಸಿದ ಹೆಸರುಗಳನ್ನು ಘೋಷಿಸಿ, ಆಯ್ಕೆ ಪ್ರಕ್ರಿಯೆಯನ್ನು ಅವಿರೋಧವಾಗಿ ಪೂರ್ಣಗೊಳಿಸಿದರು. ಸಮಾಜದ ಏಕತೆ, ಸಂಘಟನೆ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.ಈ ಸಂದರ್ಭದಲ್ಲಿ ಬಣಜಿಗ ಸಮಾಜದ ಪ್ರಮುಖರಾದ ರಾಚಪ್ಪ ಪಟ್ಟಣಶೆಟ್ಟಿ, ಬಸವರಾಜ ಬಳಿ, ತಿಪ್ಪಣ್ಣ ಚಂದಾ, ಮಲ್ಲಣ್ಣ ಬ್ಯಾಕೋಡ, ಆರ್.ಸಿ. ಪಾಟೀಲ, ಗುರಣ್ಣ ಚಿಂಚೋಳಿ, ಸುರಪುರ ತಾಲೂಕು ಅಧ್ಯಕ್ಷ ಸುರೇಶ ತಂಬಾಕಿ, ಪ್ರಧಾನ ಕಾರ್ಯದರ್ಶಿ ಮಹಾದೇವಪ್ಪಗೌಡ, ಶಿವನಗೌಡ ಬಿರಾದಾರ, ವಿಜಯಪುರ ಜಿಲ್ಲಾ ಬಣಜಿಗ ಸಮಾಜದ ಉಪಾಧ್ಯಕ್ಷ ಶಿವಲಿಂಗ ಪಾಲ್ಕಿ, ತಾಳಿಕೋಟಿಯ ಮಹಾಲಿಂಗೇಶ ಪಟ್ಟಣಶೆಟ್ಟಿ, ವಿರೇಶ್ ಚಿಂಚೋಳಿ, ಮಹಾದೇವ ಚಂದಾ, ಶರಣು ದಂಡಿನ, ಅನಿಲ ಬಳಿ, ನೀಲಕಂಠ ಹೊನಕಲ್, ಶರಣು ವೈಲಿ, ಬಸವರಾಜ ವೈಲಿ, ಶಿವು ಪಡಶೆಟ್ಟಿ, ಶಿವಲಿಂಗ ಪಟ್ಟಣಶೆಟ್ಟಿ, ಗುಂಡು ಅಂಗಡಿ, ರಮೇಶ್ ವಾಲಿ, ಸುಗೂರೇಶ್ ಮುದನೂರ, ಮಂಜುನಾಥ್ ಬಳಿ, ಮಂಜುನಾಥ್ ನುಲಿನ, ಶಿವು ಶೇವಟಿ, ಚನ್ನಕುಮಾರ ಬ್ಯಾಕೋಡ, ಪ್ರಭು ನುಲಿನ ಸೇರಿದಂತೆ ಸಮಾಜದ ಮುಖಂಡರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಶಿಕ್ಷಕ ಶಿವಕುಮಾರ್ ಬಂಡೋಳಿ ಸ್ವಾಗತಿಸಿ, ನಿರೂಪಿಸಿದರು. ವಿರೇಶ್ ಬ್ಯಾಕೋಡ ವಂದಿಸಿದರು.

# ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ: ಯಾದಗಿರಿ ಜಿಲ್ಲೆಯ ತಾಲೂಕುವಾರು ಪ್ರಗತಿ ವರದಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಆ 08 : ಜಿಲ್ಲೆಯಲ್ಲಿ ಮತದಾರರ ಪಟ್ಟಿಗಳ ವಿಶೇಷ ತೀವ್ರಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆ ಆರಂಭವಾಗಿದ್ದು, ಯಾದಗಿರಿ ಜಿಲ್ಲೆಯಲ್ಲಿ ಬಿಎಲ್‌ಓ ಗಳ ಮೂಲಕ ಮನೆ–ಮನೆಗೆ ಭೇಟಿ ನೀಡಿ ಎಣಿಕೆ ನಮೂನೆ (ಎನುಮರೇಷನ್ ಫಾರಂ–ಇಎಫ್) ವಿತರಿಸುವ ಕಾರ್ಯವು ಚುರುಕಿನಿಂದ ಸಾಗುತ್ತಿದೆ. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ

ಕಚೇರಿಯಿಂದ ಲಭ್ಯವಿರುವ ಅಧಿಕೃತ ಅಂಕಿ–ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಶೇ. 97.08% ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಂಡಿದೆ.ಮನೆ–ಮನೆಗೆ ಗಣತಿ ನಮೂನೆ ನೀಡುವುದು ಹಾಗೂ ಡಿಜಿಟೈಸೇಶನ್ ಕಾರ್ಯವು ಕಳೆದ ಜೂನ್ 30 ರಿಂದ ಆರಂಭವಾಗಿದ್ದು, ಆಗಸ್ಟ್.8 ರವರೆಗೆ ನಡೆಯಲಿದೆ. ಜೂನ್ 16 ರ ಅಂಕಿ–ಅಂಶಗಳ ಪ್ರಕಾರ ಜಿಲ್ಲೆಯ ಮತದಾರರ ಪಟ್ಟಿಯಲ್ಲಿ ಒಟ್ಟು 10,53,236 ಮತದಾರರು ದಾಖಲಾಗಿದ್ದಾರೆ.

ಜಿಲ್ಲೆಯ ಒಟ್ಟು 10,53,236 (100%) ಮತದಾರರಿಗೆ ಎಣಿಕೆ ನಮೂನೆಗಳನ್ನು (ಇಎಫ್) ಯಶಸ್ವಿಯಾಗಿ ವಿತರಿಸಲಾಗಿದ್ದು, ಈ ಪೈಕಿ 10,53,236 (100%) ನಮೂನೆಗಳನ್ನು ಈಗಾಗಲೇ ಡಿಜಿಟೈಸ್ ಮಾಡಲಾಗಿದೆ. ಉಳಿದಂತೆ 5,269 (0.50%) ಇಎಫ್ ಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲಾಗಿದೆ. ಮನೆ–ಮನೆ ಸಮೀಕ್ಷೆಯ ವೇಳೆ ಜಿಲ್ಲೆಯಲ್ಲಿ ಒಟ್ಟು 1,88,521 ಎಎಸ್‌ಡಿಡಿಓ ಮತದಾರರನ್ನು ಗುರುತಿಸಲಾಗಿದ್ದು, ಇದರಲ್ಲಿ ಗೈರು ಹಾಜರಾದವರು 17,382, ಶಾಶ್ವತವಾಗಿ ಸ್ಥಳಾಂತರಗೊಂಡವರು 1,16,196, ಮೃತ ಮತದಾರರು 29,024, ಈಗಾಗಲೇ ನೋಂದಾಯಿತರಾಗಿರುವವರು 22,347, ಇತರೆ 3,572 ಸೇರಿದ್ದಾರೆ.ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಡಿಜಿಟೈಸೇಶನ್ ಕಾರ್ಯ ಪ್ರಗತಿಯಲ್ಲಿರುತ್ತದೆ. ಅದರಂತೆ ಶೋರಾಪೂರ ಶೇ. 100%,

ಶಹಾಪೂರ ಶೇ. 100%, ಯಾದಗಿರಿ ಶೇ. 100%, ಗುರುಮಟಕಲ್ ಶೇ. 100%, ವಡಗೇರಾ 100%, ಹುಣಸಗಿ ಶೇ. 100%.ಜಿಲ್ಲೆಯಲ್ಲಿ ಒಟ್ಟು 1,134 ಪಾರ್ಟ್‌ಗಳಲ್ಲಿ ಈ ಮಹತ್ವದ ಪ್ರಕ್ರಿಯೆ ನಡೆಯುತ್ತಿದ್ದು, ನಿಗದಿತ ಅವಧಿಯೊಳಗೆ ಸಂಪೂರ್ಣ ಡಿಜಿಟೈಸೇಶನ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಚುನಾವಣಾ ಅಧಿಕಾರಿಗಳ ತಂಡ ಶ್ರಮಿಸುತ್ತಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಶ್ರೀ ರಾಹುಲ್ ತುಕಾರಾಮ ಪಾಂಡ್ವೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳ ಶಿಸ್ತು, ಗುರಿ ಸಾಧನೆಗೆ ನಿರಂತರ ಓದು ಅಗತ್ಯ: ಮುರುಘೇಂದ್ರ ಶಿವಯೋಗಿಗಳು

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ವಿದ್ಯಾರ್ಥಿಗಳ ನಡೆ–ನುಡಿ ಹಾಗೂ ಶಿಸ್ತು ಅವರ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳು ದಿನನಿತ್ಯ ಓದುವುದನ್ನು ಹವ್ಯಾಸವನ್ನಾಗಿ ಮಾಡಿಕೊಂಡು, ತಮ್ಮ ಗುರಿಯತ್ತ ಏಕಾಗ್ರತೆಯಿಂದ ಸಾಗಬೇಕು ಎಂದು ಶ್ರೀ ಶ್ರೀ ಪರಮಪೂಜ್ಯ ಮುರುಘೇಂದ್ರ ಶಿವಯೋಗಿಗಳು ಹೇಳಿದರು.

ಪಟ್ಟಣದ ಸಾನ್ವಿ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಟ್ರಸ್ಟ್ (ರಿ.), ಆನೆಹೊಸೂರು ವತಿಯಿಂದ ನಡೆಸಲಾಗುತ್ತಿರುವ ಡಾ. ಸುಧಾಮೂರ್ತಿ ಇನ್ಫೋ ಪದವಿ ಪೂರ್ವ ಹಾಗೂ ಮಹಿಳಾ ಪದವಿ ಪೂರ್ವ



ಕಾಲೇಜಿನಲ್ಲಿ 2026–27ನೇ ಸಾಲಿನ ಪ್ರಥಮ ವರ್ಷದ ಪದವಿ ಪೂರ್ವ ಹಾಗೂ ಮಹಿಳಾ ಪದವಿ ವಿದ್ಯಾರ್ಥಿಗಳ ಸ್ವಾಗತ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣವು ಜೀವನದಲ್ಲಿ ಎಲ್ಲ ರೀತಿಯ ಸಾಧನೆಗಳಿಗೆ ದಾರಿ ಮಾಡಿಕೊಡುತ್ತದೆ. ಡಾ. ಸುಧಾಮೂರ್ತಿ ಕಾಲೇಜು ಶಿಕ್ಷಣ ಕ್ಷೇತ್ರದಲ್ಲಿ ಉತ್ತಮವಾಗಿ ಬೆಳೆಯುತ್ತಿರುವುದು ಸಂತಸದ ವಿಚಾರವಾಗಿದ್ದು, ಇದರ ಹಿಂದೆ ಸಂಸ್ಥೆಯ ಆಡಳಿತ ಮಂಡಳಿ, ಉಪನ್ಯಾಸಕರು ಹಾಗೂ ಸಿಬ್ಬಂದಿಯ ಪರಿಶ್ರಮ ಮಹತ್ವದ್ದಾಗಿದೆ. ಲಿಂಗಸುಗೂರು ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಉನ್ನತ ಮಟ್ಟಕ್ಕೆ ಬೆಳೆಯುವ ಸಾಮರ್ಥ್ಯ ಹೊಂದಿದೆ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳು ಜೀವನದಲ್ಲಿ ಸದಾ ಜಾಗೃತರಾಗಿರಬೇಕು. ಗುರಿಯನ್ನು ಸ್ಪಷ್ಟವಾಗಿ ಇಟ್ಟುಕೊಂಡು ಅದನ್ನು ಸಾಧಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡಬೇಕು. ಬುದ್ಧಿ ಮತ್ತು ವಿವೇಕವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಪಡೆಯುವ ಮೊದಲು ಉತ್ತಮ ಮನುಷ್ಯರಾಗುವುದು ಮುಖ್ಯ ಎಂದು ಅವರು ಸಲಹೆ ನೀಡಿದರು.

# ಮಳೆಗಾಗಿ ಶ್ರೀದೊಡ್ಡಬಸವೇಶ್ವರ ದೇವಸ್ಥಾನದಲ್ಲಿ ಜಲಾಭಿಷೇಕ

• ಮಲ್ಲಮ್ಮ ನುಡಿ ವಾರ್ತೆಕುರುಗೋಡು



ಆ.8: ಪಟ್ಟಣದ ಆರಾಧ್ಯದೈವ ಶ್ರೀದೊಡ್ಡಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿಮಳೆಗಾಗಿ ಪ್ರಾರ್ಥಿಸಿ ದೇವಸ್ಥಾನದ ಆಡಳಿತಮಂಡಳಿ ಹಾಗು ದಾರ್ಮಿಕ ದತ್ತಿ ಇಲಾಖೆ ನೇತೃತ್ವದಲ್ಲಿ ಪ್ರಾರ್ಜನ್ಯಹೋಮ ಮತ್ತು ಜಲಾಭಿಷೇಕ ಕಾರ್ಯಕ್ರಮಗಳು ಸಾಂಗೋಪವಾಗಿ ಜರುಗಿದವು.

ಈ ಸಂದರ್ಭದಲ್ಲಿ ದೇವಸ್ಥಾನ ಆಡಳಿತಮಂಡಳಿಅಧ್ಯಕ್ಷಚಾನಾಳುಆನಂದ ಅವರು ಮಾತನಾಡಿ, ಪ್ರಸಕ್ತಸಾಲಿನಲ್ಲಿ ಮುಂಗಾರುಮಳೆಕೈಕೊಟ್ಟಿದೆ. ಇದರಿಂದ ಬರಗಾಲ ಆವರಿಸಿದ್ದು, ರೈತರು ಕಂಗಾಲಾಗಿದ್ದಾರೆ. ಇದರಿಂದರೈತರು ಕೆಲಸವಿಲ್ಲದೆ ಗುಳೆಹೋಗುತ್ತಿದ್ದಾರೆ. ಆದ್ದರಿಂದ ನಾಡಿನಲ್ಲಿ ಶೀಘ್ರವಾಗಿ ಮಳೆಯಾಗಲಿ ಎಂಬ ಉದ್ದೇಶದಿಂದ ಪೂಜೆ ನೆರವೇರಿಸಲಾಗಿದೆ ಎಂದು ನುಡಿದರು. ಶ್ರೀದೊಡ್ಡಬಸವೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಸಿ. ಆಂಜಿನೇಯುಲು ಮಾತನಾಡಿ, ನಾಡಿನಲ್ಲಿ ಉತ್ತಮ ಮಳೆ, ಬೆಳೆಗಾಗಿ ಮತ್ತು ನಾಡಿನ ಸುಭಿಕ್ಷೆಗಾಗಿ ಪ್ರಾರ್ಥಿಸಿ ಜಲಾಭಿಷೇಕ, ಹೋಮ ಕಾರ್ಯಕ್ರಮಗಳನ್ನುಜರುಗಿಸಲಾಗಿದೆ ಎಂದು ನುಡಿದರು. ಪ್ರಾರಂಭದಲ್ಲಿ ದೇವಸ್ಥಾನದ ಪುರೋಹಿತ ಹೆಚ್. ಎಂ. ಅಮರನಾಥಶಾಸ್ತ್ರಿ ಇವರ ಪುರೋಹಿತ್ಯದಲ್ಲಿ ದೇವಸ್ಥಾನದ ಗರ್ಭಗುಡಿಯಲ್ಲಿ ಜಲಾಭಿಷೇಕ, ಮತ್ತುರುದ್ರಾಭಿಷೇಕನಡೆಸಲಾಯಿತು. ಬುಕ್ಕಸಾಗರ ದೇವಸ್ಥಾನದ ಅರ್ಚಕ ವಿಶ್ವನಾಥ ತಂಡದವರು ಹೋಮಕಾರ್ಯನೆರವೇರಿಸಿದರು. ಈ ಸಂದರ್ಭದಲ್ಲ ದೇವಸ್ಥಾನದ ಸಮಿತಿ ಅಧ್ಯಕ್ಷ ಚಾನಾಳುಆನಂದ, ಮತ್ತು ಸಮಿತಿಯ ಎಲ್ಲಾ ಸದಸ್ಯರು, ದೇವಸ್ಥಾನದ ಸಹಾಯಕ ಮಾಂತೇಶ ಸೇರಿದಂತೆ ಊರಿನ ಭಕ್ತರಿದ್ದರು.

# ದಾಖಲೆಗಳು ತಾಳೆಯಾಗದ್ದರಿಂದ ವಸತಿ ಶಾಲೆಗೆ ಕಾಂಪೌಂಡ್ ಇಲ್ಲದೇ ಭದ್ರತೆಯಿಲ್ಲದಂತಾಗಿದೆ





• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ದಾಖಲೆಗಳು ತಾಳೆ ಇಲ್ಲದೆ ಆಕ್ಷೇಪಣೆ ಇರುವ ಪರಿಣಾಮ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕಾಂಪೌಂಡ್ ಸೌಲಭ್ಯ ಇಲ್ಲದೆ ಹಲವು ಸಮಸ್ಯೆಗಳಿಗೆ ಕಾರಣವಾಗಿರುವದನ್ನು ಕಾಣಬಹುದಾಗಿದೆ.

ತಾಲೂಕಿನ ಆನಿವಾಳು ಗ್ರಾಮದ ಬಳಿ ಇರುವ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡದಲ್ಲಿ ಬೋಧನಾ ಚಟುವಟಿಕೆ ಆರಂಭವಾಗಿ ವರ್ಷವೇ ಕಳೆದರೂ ಕಾಂಪೌಂಡ್ ಇಲ್ಲದೆ ಇರುವುದರಿಂದ ನಿತ್ಯವೂ ಜಾನುವಾರು ಮತ್ತು ವಾಹನ ಸಂಚಾರ ಸೇರಿದಂತೆ ಹಲವಾರು ರೀತಿಯಲ್ಲಿ ಆಗುತ್ತಿರುವ ತೊಂದರೆಯನ್ನು ಕೇಳುವವರಿಲ್ಲವಾಗಿದ್ದಾರೆ. ಅಲ್ಪಸಂಖ್ಯಾತರ ಇಲಾಖೆ ವ್ಯಾಪ್ತಿಗೆ ಸೇರಿದ ಈ ಶಾಲೆಯನ್ನು 6 ಎಕರೆ ವಿಸ್ತೀರ್ಣದಲ್ಲಿ ಸುಮಾರು 25 ಕೋಟಿ ರೂ ವೆಚ್ಚದಲ್ಲಿ ಅಗತ್ಯ ಸೌಲಭ್ಯಗಳು ಒಳಗೊಂಡಂತೆ ನಿರ್ಮಾಣಗೊಂಡಿರುವ ಕಟ್ಟಡದಲ್ಲಿ ಪ್ರಸ್ತುತವಾಗಿ 170 ಮಂದಿ ಬಾಲಕರು ಹಾಗೂ 85 ಮಂದಿ ಬಾಲಕಿಯರು ಸೇರಿದಂತೆ ಒಟ್ಟು 255 ಮಂದಿ ವಿದ್ಯಾರ್ಥಿಗಳು ದಾಖಲಾಗಿದ್ದು 6ನೇ ತರಗತಿಯಿಂದ ದ್ವಿತೀಯ ಪಿಯುಸಿ ವಿಜ್ಞಾನ ಮತ್ತು ವಾಣಿಜ್ಯ ವಿಷಯದ ವರಿವಿಗೆ ವ್ಯಾಸಂಗದ ಸೌಲಭ್ಯವನ್ನು ಒದಗಿಸಲಾಗಿದೆ. ತಾಲೂಕು ಮತ್ತು ಹೋಬಳಿ ಕೇಂದ್ರ ಹೊರಪಡಿಸಿ ಗ್ರಾಮೀಣ ಭಾಗದ ಹೊರವಲಯದಲ್ಲಿರುವ ಈ ವಸತಿ ಶಾಲೆಯಲ್ಲಿ ರಾಜ್ಯದ ಹಲವು ಜಿಲ್ಲೆಗಳಿಂದ ನಿಯಮದಡಿಯಲ್ಲಿ ವಿದ್ಯಾರ್ಥಿಗಳಿಗೆ ನೇಮಕಾತಿಯ ಅವಕಾಶ ದೊರಕಿಸಲಾಗಿದೆ. ಕಟ್ಟಡಕ್ಕೂ ಮುನ್ನ : ಕಳೆದ ಹತ್ತು ವರ್ಷಗಳಿಂದ ಆರಂಭಗೊಂಡಿರುವ ಈ ವಸತಿ ಶಾಲೆಯನ್ನು ಪಟ್ಟಣದಲ್ಲಿನ ಖಾಸಗಿ ಕಟ್ಟಡದಲ್ಲಿ ಸಾಗಿ ಬಂದು ಪ್ರಸ್ತುತವಾಗಿ ಸ್ವಂತ ನೂತನ ಕಟ್ಟಡದಲ್ಲಿ ಮತ್ತು ವಿಶಾಲವಾದ ಆಟದ ಮೈದಾನ ಮತ್ತು ವಿವಿಧ ಹಂತದ ಕಾಮಗಾರಿಗಳು ಇನ್ನು ಪ್ರಗತಿ ಮುಂದುವರೆದಿದೆ. ಆದರೆ ಈ ಕಟ್ಟಡಗಳ ಸುತ್ತಲಿನ ಕಾಂಪೌಂಡ್ ನಿರ್ಮಾಣಕ್ಕೆ ಸರಹದ್ದು ಸರಿಪಡಿಸದ ಪರಿಣಾಮ ಮತ್ತು ದಾಖಲಾತಿಯ ಅಸ್ಪಷ್ಟತೆ ಯಿಂದ ಕಾಂಪೌಂಡ್ ನಿರ್ಮಾಣದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿಲ್ಲ ಎಂದು ಬೆಂಗಳೂರಿನ ಹೆಬಿಡೆಂಟ್ ಸೆಂಟರ್ ಇಂಜಿನಿಯರ್ ಗಳು ಸೇರಿದಂತೆ ವಿವಿಧ ತುಂಡು ಗುತ್ತಿಗೆ ಪಡೆದಿರುವ ಕಂಪನಿಗಳ ಅಧಿಕಾರಿಗಳು ತಿಳಿಸಿದ್ದಾರೆ. ಆಕ್ಷೇಪಣೆ : ಆನಿವಾಳು ಗ್ರಾಮದ ಸ ನಂ 98 ರಲ್ಲಿನ ಪಹಣಿ ಪ್ರಕಾರ ಒಟ್ಟು 17 ಎಕರೆ 29 ಗುಂಟೆಯ ಪೈಕಿ1 ಎಕರೆ 21ಗುಂಟೆ ವಿಸ್ತೀರ್ಣ ಜಾಗವನ್ನು ಮಾತ್ರ ಈ ಶಾಲಾ ಕಟ್ಟಡ ನಿರ್ಮಾಣಕ್ಕೆ ನೀಡಲಾಗಿದ್ದು ಇನ್ನುಳಿದ 1 ಎಕರೆ 21 ವಿಸ್ತೀರ್ಣವನ್ನು ಪರಿಶಿಷ್ಟ ಜಾತಿ ಜನಾಂಗದವರ ಸ್ಮಶಾನಕ್ಕಾಗಿ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ ಎಲ್ ಎನ್ ಡಿ ಪಿಆರ್ (2)375/95–96 ರಂತೆ ಕಾಯ್ದಿರಿಸಲಾಗಿದೆ.

ಉಳಿಕೆ 16 ಎಕ್ರೆ 9 ಗುಂಟೆ ವಿಸ್ತೀರ್ಣವನ್ನು ಸರ್ಕಾರಿ ಕರಾಬು ಎಂಬುದಾಗಿ ನಾಲ್ಕು ಎಕರೆ ಒಂದು ಗುಂಟೆ ವಿಸ್ತೀರ್ಣವನ್ನು ಆಶ್ರಯ ಯೋಜನೆ ಮನೆಗಳಿಗಾಗಿ ಕಾದಿರಿಸಲಾಗಿದೆ. ಆದರೂ 1 ಎಕರೆ 25 ಗುಂಟೆ ವಿಸ್ತೀರ್ಣವನ್ನು ಡಾ. ಬಿ ಆರ್ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕಾಗಿ ಕಾಯ್ದಿರಿಸಲು ತಿಳಿಸಿದ್ದು ನೊಂದಾಯಿತದ ಪ್ರಕಾರ ಒಂದೊಂದು ತಾಳೆ ಇಲ್ಲದೆ ಇರುವುದರಿಂದ ಪಿರಿಯಾಪಟ್ಟಣ ತಾಲೂಕು ತಹಸಿಲ್ದಾರ್ ರವರು ಮರುಸ್ಥಳ ತನಿಕಾ ವರದಿ ಸಿದ್ದಪಡಿಸಿ ಪೂರ್ಣ ದಾಖಲಾತಿಗಳನ್ನು ಸಲ್ಲಿಸಬೇಕೆಂದು ಹುಣಸೂರು ಉಪ ವಿಭಾಗದ ಅಧಿಕಾರಿಗಳ ಕಚೇರಿಯ ತಹಶೀಲ್ದಾರ್ ಎಂ ಎಸ್ ಯದು ಗಿರೀಶ್ ರವರು ಯಾವ ಆದೇಶ ದಡಿಯಲ್ಲಿ ಕಾಯ್ದಿರಿಸಲಾಗಿದೆ ಎಂಬುದನ್ನು ಪಹಣಿಯಲ್ಲಿಲ್ಲ ಎಂದು ಜಿಲ್ಲಾಧಿಕಾರಿ ರವರು ಹುಣಸೂರು ಉಪಯುಗಾಧಿಕಾರಿಗಳಿಗೆ ನೀಡಿರುವ ಉಲ್ಲೇಖದ ಮೇರೆಗೆ ಕೋರಿದ್ದಾರೆ. ಆದ್ದರಿಂದ ಕಾಯ್ದಿರಿಸುವ ಬಗ್ಗೆ ಸ್ಪಷ್ಟ ವರದಿಯೊಂದಿಗೆ ಕಚೇರಿಗೆ ಹಾಜರುಪಡಿಸಬೇಕು ಎಂದು ಕಡತವನ್ನು ವಾಪಸ್ ಮಾಡಲಾಗಿದೆ. ದಾಖಲಾತಿ ಹಾಜರಪಡಿಸಲಾಗುವುದು : ಸ್ಥಳ ತನಿಕಾ ಮರು ವರದಿ ಮಾಡಲು ದಿನನಿಗದಿ ಮಾಡಲಾಗಿದ್ದು ತಾಲೂಕು ಭೂ ಮಾಪಕ ಅಧಿಕಾರಿ ಸಹಯೋಗದೊಂದಿಗೆ ದಾಖಲಾತಿಗಳನ್ನುಸಿದ್ಧಪಡಿಸಿ ದಾಖಲಾತಿಗಳನ್ನುಹಾಜರ್ ಪಡಿಸಲಾಗುವುದು ಎಂದು ತಾಲೂಕು ತಹಶೀಲ್ದಾರ್ ಜೆ ನಿಸರ್ಗ ಪ್ರಿಯ ಸ್ಪಷ್ಟಪಡಿಸಿದ್ದಾರೆ. ಪ್ರಯೋಜನವಾಗಿಲ್ಲ : ಸಂಬಂಧಿಸಿದ ಇಲಾಖೆ ಹಿರಿಯ ಅಧಿಕಾರಿಗಳಿಗೆ ಹಲವಾರು ಬಾರಿ ಪತ್ರ ವ್ಯವಹಾರ ಮಾಡಲಾಗಿದೆ ಆದರೂ ಸಹ ಶಾಲೆಯ ಸರಹದ್ದು ನಿಗದಿಯಾಗದೇ ಇರುವ ಪರಿಣಾಮ ಕಾಂಪೌಂಡ್ ಕಾಮಗಾರಿ ಆಗುತ್ತಿಲ್ಲ ಎಂದು ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಕುಮಾರಿ ಅಣ್ಣೇಗೌಡ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಒತ್ತಾಯ:ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ಇರುವ ಸರಹದ್ದಿನ ಮತ್ತು ದಾಖಲಾತಿ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಿ ಶಾಲೆಗಾಗಿ ಆಗಬೇಕಾದ ಕಾಂಪೌಂಡ್ ನಿರ್ಮಾಣಕ್ಕೆ ಅವಕಾಶ ನೀಡಬೇಕೆಂದು ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ ಮುಖಂಡರಾದ ಟಿ ಈರಯ್ಯ, ಸೀಗೂರು ವಿಜಯ್ ಕುಮಾರ್, ಪಿಪಿ ಪುಟ್ಟ ನಾಯಕ ಒತ್ತಾಯಿಸಿದ್ದಾರೆ.

# 400ಮೀಟರ್ ತಿರಂಗಾ ಬಾವುಟ ಹೊತ್ತ ವಿದ್ಯಾರ್ಥಿಗಳು



ಇಂಡಿ:ನಗರದಲ್ಲಿಎಬಿವಿಪಿವತಿಯಿಂದ ಬಂಕಿಮ್ ಚಂದ್ರ ಚಟರ್ಜಿ ಅವರು ರಚಿಸಿದ ವಂದೇ ಮಾತರಂ ಗೀತೆಗೆ 150 ವರ್ಷಗಳು ಹಾಗೂ ಭಾರತಕ್ಕೆ 79 ನೇ ಸ್ವಾತಂತ್ರ್ಯ ಸಂಭ್ರಮದ ಹಿನ್ನಿಲೆಯಲ್ಲಿ ಶ್ರೀ ಶಾಂತೇಶ್ವರ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಎಬಿವಿಪಿ ಕಾರ್ಯಕರ್ತರು ಸೇರಿ 400 ಮೀಟರ್ ಉದ್ದದ ತಿರಂಗಾ ಯಾತ್ರೆ ನಡೆಸಿದರು.

ಯಾತ್ರೆಯು ಶ್ರೀ ಶಾಂತೇಶ್ವರ ಪದವಿಪೂರ್ವ ಮಹಾವಿದ್ಯಾಲಯದಿಂದ ವಿಜಯಪುರ ರಸ್ತೆ, ನಂತರ ಬಸವೇಶ್ವರ ವೃತ್ತ , ಅಂಬೇಡ್ಕರ ವೃತ್ತ ಸೇರಿದಂತೆ ನಗರದ ಪ್ರಮುಖ ಬೀದಿಗಳಲ್ಲಿ ಮೇರವಣಿಗೆನಡೆಸಿದರು.

ಎನ್.ಸಿ.ಸಿ,ಎನ್.ಎಸ್.ಎಸ್ ಮತ್ತು ಮಹಿಳಾ ಎಬಿವಿಪಿ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಮೆರವಣಿಗೆಯಲ್ಲಿ ದೇಶದ ಪರ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಬಂಕಿಮ ಚಂದ್ರ ಚಟರ್ಜಿ ಸೇರಿದಂತೆ ಅನೇಕ ದೇಶ ಭಕ್ತರ ಜಯಘೋಷ ಹಾಕಿದರು.

ಎಬಿವಿಪಿ ಮುಖಂಡರಾದ ರಾಹುಲ ಜಾಧವ, ಹಣಮಂತ ಹಳ್ಳೂರ, ಸಚಿನ ಧನಗೊಂಡ ಸತೀಶ ಹೊಟಗಿ, ಸೋಮನಾಥ ಕಟಗೇರಿ ನಿರ್ಮಲಾ ಸ್ನೇಹಾ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿ ಸಿದ್ದರು.

# ಇಬ್ಬರು ಮಕ್ಕಳ ಮೇಲೆ ನಾಯಿಗಳ ದಾಳಿ



ಇಂಡಿ: ನಗರದಲ್ಲಿ ಬೀದಿ ನಾಯಿಗಳ ಕಾಟ ದಿನದಿಂದ ದಿನಕ್ಕೆ ಮಿತಿಮೀರುತ್ತಿದ್ದು, ಸಾರ್ವಜನಿಕರು ಹಾಗೂ ಪುಟ್ಟ ಮಕ್ಕಳು ರಸ್ತೆಗಿಳಿಯಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ಶುಕ್ರವಾರ ಬೀದಿ ನಾಯಿಗಳು ಇಬ್ಬರು ಅಮಾಯಕ ಮಕ್ಕಳ ಮೇಲೆ ಭೀಕರವಾಗಿ ದಾಳಿ ನಡೆಸಿ ರಕ್ತಸಿಕ್ತಗೊಳಿಸಿರುವ ಆಘಾತಕಾರಿ ಘಟನೆ ಸಂಭವಿಸಿದೆ. ನಗರದ ರೇವಪ್ಪನಮಡ್ಡಿ ಹಾಗೂ ಕರೀಂ ನಗರದಲ್ಲಿ ಈ ಘಟನೆಗಳು ನಡೆದಿವೆ.ರೇವಪ್ಪಮಡ್ಡಿಯ ಗುತ್ತೇದಾರ ಲೇಔಟ್‌ನಲ್ಲಿ ವಾಸಿಸುವ 9 ವರ್ಷದ ಬಾಲಕಿ ಪ್ರೇರಣಾ ಗೌಳಿ ತನ್ನ ಮನೆಯ ಮುಂದೆ ಎಂದಿನಂತೆ ಆಟವಾಡುತ್ತಿದ್ದಳು. ಈ ವೇಳೆ ಹಠಾತ್ತನೆ ನುಗ್ಗಿದ ಬೀದಿ ನಾಯಿಯೊಂದು ಬಾಲಕಿಯ ಮೇಲೆ ಧಾವಿಸಿ ಭೀಕರವಾಗಿ ದಾಳಿ ಮಾಡಿದೆ. ನಾಯಿಯ ದಾಳಿಯಿಂದಾಗಿ ಬಾಲಕಿ ಪ್ರೇರಣಾಳ ಮುಖ ಹಾಗೂ ಕಣ್ಣಿನ ಕೆಳಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿವೆ. ಸದ್ಯ ಗಾಯಾಳು ಬಾಲಕಿಯನ್ನು ಇಂಡಿ ತಾಲೂಕು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.ಅಲ್ಲದೆ ಕರೀಂ ನಗರದಲ್ಲೂ ಬೀದಿ ನಾಯಿಗಳ ಕಾಟ ಮುಂದುವರಿದಿದೆ. 5 ವರ್ಷದ ಬಾಲಕ ತೈಮೂರ್ ಮಕಾನದಾರ್ ಎಂಬ ಬಾಲಕ ಮನೆಯ ಸಮೀಪದ ಅಂಗಡಿಗೆ ತಿನ್ನಲು ಕುರಕುರೆ ತರಲು ತೆರಳುತ್ತಿದ್ದಾಗ ಬೀದಿ ನಾಯಿ ಆತನ ಮೇಲೂ ದಾಳಿ ಮಾಡಿದೆ. ಬಾಲಕನ ಕೈಗೆ ಬಲವಾಗಿ ಕಚ್ಚಿ ಗಾಯಗೊಳಿಸಿದೆ. ಈ ಬಾಲಕನಿಗೂ ಸಹ ಸದ್ಯ ಇಂಡಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಒಂದೇ ದಿನ ಪಟ್ಟಣದ ಬೇರೆ ಬೇರೆ ಕಡೆಗಳಲ್ಲಿ ಇಬ್ಬರು ಮಕ್ಕಳ ಮೇಲೆ ನಾಯಿಗಳು ದಾಳಿ ಮಾಡಿರುವುದು ಸ್ಥಳೀಯ ನಾಗರಿಕರನ್ನು ಕೆರಳಿಸಿದೆ. ನಗರಸಭೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಬೀದಿ ನಾಯಿಗಳ ಹಾವಳಿ ತಡೆಗಟ್ಟುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಅಲ್ಲದೆ ಬುಧವಾರ ಗುರುವಾರವೂ ಸಹ ನಾಯಿಗಳು ಮಕ್ಕಳಿಗೆ ಕಚ್ಚಿದ್ದು ರಹಿಮಾನ ಜಾತಗಾರ 7 ವರ್ಷ, ಜುನೇದ ತಾಂಬೂಳೆ 6, ಗುರುನಾಥ ಬಿಲ್ಲಾಡಿ 67 ವರ್ಷ, ಅಂಬಾದಾಸ್ ತಳವಾರ 22 ಸೇರಿದಂತೆ ಇನ್ನೂ ಹಲವರಿಗೆ ನಾಯಿಗಳು ಕಚ್ಚಿವೆ.

ಇನ್ನಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡು ಬೀದಿ ನಾಯಿಗಳನ್ನು ಹತೋಟಿಗೆ ತರಲು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಉಗ್ರ ಪ್ರತಿಭಟನೆ ನಡೆಸುವುದಾಗಿ ಸಾರ್ವಜನಿಕರು ಎಚ್ಚರಿಸಿದ್ದಾರೆ.

# ರೈತರಿಗೆ ವಿಮೆಪರಿಹಾರ ಬಿಡುಗಡೆ ಮಾಡಬೇಕೆಂದು ತಹಶೀಲ್ದಾರ್‌ಗೆ ಮನವಿ



ಮಲ್ಲಮ್ಮ ನುಡಿ ವಾರ್ತೆಕುರುಗೋಡು

ಆ.8 ಪ್ರಧಾನಮಂತ್ರಿ ಫಸಲ್‌ಭೀಮಾ ಯೋಜನೆ ಅಡಿಯಲ್ಲಿ ಬೆಳೆವಿಮೆ ಮಾಡಿಸಿದ ರೈತರಿಗೆ ಬೆಳೆವಿಮೆ ಬಿಡುಗಡೆ ಮಾಡಬೇಕೆಂದು ಕುರುಗೋಡು ತಾಲೂಕಿನ ರೈತರು ಕುರುಗೋಡು ತಹಶೀಲ್ದಾರ್ ನರಸಪ್ಪ ಅವರಿಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ರೈತರು ಮಾತನಾಡಿ, ಪ್ರಸಕ್ತಸಾಲಿನಲ್ಲಿ ಮುಂಗಾರುಹಂಗಾಮಿನಲ್ಲಿ ಮಳೆಕೈಕೊಟ್ಟಿದೆ. ಇದರಿಂದ ರೈತರು ಕಂಗಾಲಾಗಿದ್ದಾರೆ. ಈ ವರ್ಷದ ಮುಂಗಾರು ಆರಂಭದಲ್ಲಿ ಮಳೆಕೊರತೆ ಉಂಟಾಗಿ, ತುಂಗಭದ್ರ ಕಾಲುವೆಯಿಂದಲೂ ನೀರುಪೂರೈಕೆಯಾಗಿಲ್ಲ. ಜೂನ್ ಮೊದಲ ವಾರದಲ್ಲಿ ಮಾತ್ರ ಸ್ವಲ್ಪ ಮಳೆಯಾಗಿದ್ದು, ಅಂದಿನಿಂದ ಇಂದಿನವರೆಗೆ ತಿಂಗಳುಕಳೆದರೂ ಮಳೆಆಗಿಲ್ಲ ಎಂದು ವಿಷಾದವ್ಯಕ್ತಪಡಿಸಿದರು. ಇದ–ರಿಂದ ತಾಲೂಕಿನಲ್ಲಿ ಬರಗಾಲ ನಿರ್ಮಾಣವಾಗಿದೆ. ಇದರಿಂದ ಬಿತ್ತನೆಕಾರ್ಯನಡೆಯದೆ ಮೆಕ್ಕೆಜೋಳ, ತೊಗರಿ, ಸಜ್ಜೆ, ಮೆಣಸಿನಕಾಯಿ ಸೇರಿದಂತೆ ಇತರೆ ಬೆಳೆಗಳು ಬೆಳೆಯದೇ ಮತ್ತು ಅಲ್ಪ–ಸ್ವಲ್ಪ ಬೆಳೆದ ಬೆಳೆಗಳು ತೀವ್ರ ಹಾನಿಯಾಗಿವೆ ಎಂದು ನುಡಿದರು. ಆದ್ದರಿಂದ ಕುರುಗೋಡು ತಾಲೂಕಿನಲ್ಲಿ ರೈತರು ಬೆಳೆಗಳಿಗೆ ಮಾಡಿಸಿದ ವಿಮೆಗೆ ಸಂಬಂದಿಸಿದಂತೆ ಮೀಡ್‌ಸೀಸನ್ ಆಡ್ವರ್ಸಿಟಿ ನಿಯಮಗಳ ಅಡಿ ವಿಮೆ ಪರಿಹಾರವನ್ನು ಮಂಜೂರುಮಾಡಿ ವಿಮಾಕಂಪನಿಗೆ ನಿರ್ದೇಶನ ನೀಡಿ ರೈತರಿಗೆ ವಿಮೆಮೊತ್ತವನ್ನು ಶೀಘ್ರವಾಗಿ ಬಿಡುಗಡೆಮಾಡಬೇಕೆಂದು ನುಡಿದರು. ಕುರುಗೋಡು ತಾಲೂಕಿನಲ್ಲಿ ಮೆಣಸಿನಕಾಯಿಬೆಳೆ ಹೆಚ್ಚಾಗಿ ಬೆಳೆಯುತ್ತಾರೆ. ಈ ಬೆಳೆಗೆ ವಿಮೆ ಮಾಡಿಸಿದ ರೈತರಿಗೆ ಬೆಳೆವಿಮೆ ನೀಡಬೇಕೆಂದು ಒತ್ತಾಯಿಸಿ, ತಹಶೀಲ್ದಾರ್‌ರಿಗೆ ಮನವಿ ಸಲ್ಲಿಸಿದರು. ಮನವಿಸ್ವೀಕರಿಸಿದ ತಹಶೀಲ್ದಾರ್ ನರಸಪ್ಪ ಅವರು ಕೂಡಲೇ ಸಂಬಂದಪಟ್ಟ ಅಧಿಕಾರಿಗಳಲ್ಲಿ ಚರ್ಚಿಸಿ ತಮಗೆ ನ್ಯಾಯದೊರಕಿಸಿಕೊಡುವುದಾಗಿ ಭರವಸೆ ನೀಡಿದರು.

ಮನವಿಯಲ್ಲಿ ರೈತಮುಖಂಡ ದುರ್ಗಾತಿಮ್ಮಪ್ಪ, ಆಂಜಿನೇಯುಲು, ಕುರಿಹನುಮಣ್ಣ, ಎಸ್.ನಾಗಪ್ಪ, ಚಾನಾಳುಆನಂದ, ಕಗ್ಗಲ್ಲುನಾಗಪ್ಪ, ಕವಡೆಕಾಯಿವೆಂಕಟೇಶ, ಸಿದ್ದಮ್ಮನಹಳ್ಳಿಪೊಂಪನಗೌಡ, ಗಜ್ಜೇರುಶೇಖರ, ಇಕ್ಲಿಚೆನ್ನಬಸವ, ಕೊಸ್ಗಿಶಿವಪ್ರಸಾದ್, ಗೊಲ್ಲರಶೇಕಣ್ಣ, ಪಾಕಾಳಿನಾಗರಾಜ, ಭೂಪತಿಶೀನಪ್ಪ, ಬಂಗಿಸಾದಣ್ಣ, ನಾಗಪ್ಪ, ಗೆಜ್ಜೇರುವೆಂಕಟೇಶ, ಬಂಗಿಸಾದಣ್ಣ, ರಾಮಲಿಂಗ, ಚಂದ್ರಶೇಖರ್, ಸೇರಿದಂತೆ ಇತರೆ ರೈತರು ಇದ್ದರು.

# ರಜಾ ದಿನಗಳಲ್ಲಿ ಗ್ರಂಥಾಲಯ ಸೇವೆ ಲಭ್ಯ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಆ.08: ನಗರದ ಜಿಲ್ಲಾ ಕ್ರೀಡಾಂಗಣ ಹತ್ತಿರವಿರುವ ಮುಖ್ಯನಗರ ಕೇಂದ್ರಗ್ರಂಥಾಲಯ ಪ್ರತಿ ಸೋಮವಾರ ಹಾಗೂ ಎರಡನೇ ಮಂಗಳವಾರ ಮತ್ತು ನಾಲ್ಕನೇ ಶನಿವಾರ ದಿನವು ಸಹ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಕಾರ್ಯನಿರ್ವಹಿಸಲಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು ಗ್ರಂಥಾಲಯವನ್ನು ಉಪಯೋಗಿಸಿಕೊಳ್ಳಬಹುದು ಎಂದು ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ ವಿನೋದರಾಜ್ ಎಸ್. ತಿಳಿಸಿದ್ದಾರೆ.

# ರೈತರಿಗೆ ಸಕ್ಕರೆ ವಿತರಣೆ

ಇಂಡಿ : ತಾಲೂಕಿನ ಇಂಡಿಯನ್ ಕೇನ ಪವರ ಲಿಮಿಟೆಡ ಘಟಕದ ಸಕ್ಕರೆ ಕಾರ್ಖಾನೆಯವರು ತಮ್ಮ ಕಾರ್ಖಾನೆಗೆ ಕಬ್ಬು ಕಳುಹಿಸಿದ ರೈತರಿಗೆ ಸಕ್ಕರೆ ವಿತರಣೆ ಮಾಡಲಾಗುವದು ಎಂದು ಕಾರ್ಖಾನೆಯ ಎಂ.ಡಿ ಸೂರ್ಯ ಪ್ರಕಾಶ ತಿಳಿಸಿದ್ದಾರೆ.ರೈತರು ಕಾರ್ಖಾನೆಗೆ ಕಳೆದ ವರ್ಷ ಕಬ್ಬು ಕಳುಹಿಸಿದ ಪ್ರತಿ ಟನ್ ಕಬ್ಬಿಗೆ 500 ಗ್ರಾಮ ಸಕ್ಕರೆ ಮತ್ತು ಪ್ರತಿ ಕಿಲೋ ಗ್ರಾಂ ಗೆ 24 ರೂ ನಂತೆ ನೀಡಲಾಗುತ್ತಿದೆ.ಕಾರ್ಖಾನೆಯ ಆವರಣದಲ್ಲಿ ದಿನಾಂಕ 20 ರ ವರೆಗೆ ವಿತರಿಸುವರು. ಬೆಳಗ್ಗೆ 9.30 ರಿಂದ ಸಾಯಂಕಾಲ 4.30 ರ ವರೆಗೆ ವಿತರಿಸಲಾಗುವದೆಂದು ತಿಳಿಸಿದ್ದಾರೆ. ಹಿರೇಬೇವನೂರ, ಲಚ್ಯಾಣ, ಇಂಡಿ, ಸಾಲೋಟಗಿ, ಮಣ್ಣೂರ, ಬರೂರ ಮತ್ತು ದೇವರ ಹಿಪ್ಪರಗಿ ರೈತರು ಕಾರ್ಖಾನೆ ಬಂದು ತೆಗೆದುಕೊಂಡು ಹೋಗಲು ಸೂರ್ಯಪ್ರಕಾಶ ತಿಳಿಸಿದ್ದಾರೆ..

# ಕೋಪ, ಆತಂಕ, ಒತ್ತಡ ಕಡಿಮೆ ಗೊಳಿಸುವ ಶಕ್ತಿ ಸಂಗೀತಕ್ಕಿದೆ : ಸರಡಗಿ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

:ಸಂಗೀತವು ಕೇವಲ ಮನರಂಜನೆಯ ಸಾಧನವಲ್ಲ, ಅದು ನಮ್ಮ ಮನಸ್ಸನ್ನು ಶಾಂತಗೊಳಿಸುವ ಮತ್ತು ಉತ್ತಮ ಗುಣಗಳನ್ನು ಬೆಳೆಸುವ ಶಕ್ತಿಯಾಗಿದೆ ಎಂದು ಸಂಗೀತ ಪ್ರೇಮಿ ಸಂಗಮೇಶ ಸರಡಗಿ ಹೇಳಿದರು. ನಗರದ ಕೆ ಎಚ್ ಬಿ ಗ್ರೀನ್ ಪಾರ್ಕ್ ಬಡಾವಣೆಯಲ್ಲಿ ದಕ್ಷಿಣ ಮುಖಿ ಆಂಜನೇಯ ಭಜನಾ ಸಂಘದ ವತಿಯಿಂದ ಹಮ್ಮಿಕೊಂಡಿರುವ "ಸಂಗೀತ ಮನ ಶುಚಿಗೊಳಿಸುವ ಸಾಧನ" ವಿಷಯ ಕುರಿತು ಮಾತನಾಡುತ್ತ ಒಳ್ಳೆಯ ಸಂಗೀತವನ್ನು ಕೇಳುವುದರಿಂದ ಕೋಪ, ಆತಂಕ ಮತ್ತು ಒತ್ತಡ ಕಡಿಮೆಯಾಗುತ್ತದೆ.ಮನಸ್ಸಿನಲ್ಲಿ ಸಂತೋಷ,ಪ್ರೀತಿ,ದಯೆ ಮತ್ತು ಸಹಾನುಭೂತಿಯಂತಹ ಉತ್ತಮ ಭಾವನೆಗಳು ಬೆಳೆಯುತ್ತವೆ. ಭಕ್ತಿಗೀತೆಗಳು,ದೇಶಭಕ್ತಿಯ ಹಾಡುಗಳು ಮತ್ತು ಜಾನಪದ ಗೀತೆಗಳು ನಮ್ಮ ಸಂಸ್ಕೃತಿ ಹಾಗೂ ಮೌಲ್ಯಗಳನ್ನು ಉಳಿಸಿ ಬೆಳೆಸುತ್ತವೆ.

ಸಂಗೀತವನ್ನು ಆನಂದಿಸುವುದರ ಜೊತೆಗೆ ಅದರಲ್ಲಿರುವ ಉತ್ತಮ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ. ಆಗ ನಮ್ಮ ಮನಸ್ಸು ಉತ್ತಮವಾಗುತ್ತದೆ ಮತ್ತು ಸಮಾಜವೂ ಉತ್ತಮ ದಾರಿಯಲ್ಲಿ ಸಾಗಿಸುತ್ತದೆ ಎಂದು ಮಾರ್ಮಿಕವಾಗಿ ನುಡಿದರು. ಕಲಾವಿದರಾದ ಶರಣಪ್ಪ ಕಟ್ಟಿಮನಿ, ದಿಲೀಪಕುಮಾರ ಭಕ್ರೆ, ರವೀಂದ್ರ ಗುತ್ತೇದಾರ, ಆನಂದ ಪೂಜಾರಿ, ಶಿವಣ್ಣಗೌಡ ಪಾಟೀಲ, ರುದ್ರಗೌಡ ಪಾಟೀಲ, ಮಲ್ಲಯ್ಯ ಮಠ,ಶರಣು ಕಲಶೆಟ್ಟಿ, ರಾಮಲಿಂಗ ಅಟ್ಟೂರ ಸಂಗೀತ ಸೇವೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸಂಜೀವಕುಮಾರ ಶೆಟ್ಟಿ ನ್ಯಾಯವಾದಿ ಹಣಮಂತರಾಯ ಅಟ್ಟೂರ, ಬಾಲಕೃಷ್ಣಕುಲಕರ್ಣಿ, ಶ್ರೀನಿವಾಸ ಬುಜ್ಜಿ,ಬಸವರಾಜ ರಟಗಲ, ಶರಣು ಸರಡಗಿ, ಹಣಮಂತ ರೆಡ್ಡಿ, ರಾಮದಾಸ ಪಾಟೀಲ, ಅಮೃತ ನಾಯಕ, ಸರೋಜಾಸರಡಗಿ,ಬಸವರಾಜ ಸ್ವಾಮಿ ಬಾಳ್ಳಿ, ಸಂಜೀವಕುಮಾರ ಸಲಗರ ಸೇರಿದಂತೆ ಅನೇಕ ಜನ ಭಾಗವಹಿಸಿದರು. ಇದೆ ಸಂಧರ್ಭದಲ್ಲಿ ಉಪನ್ಯಾಸ ನೀಡಿದ ಸಂಗೀತ ಪ್ರೇಮಿ ಸಂಗಮೇಶ ಸರಡಗಿ ಅವರಿಗೆ ಗೌರವಿಸಲಾಯಿತು.

# 11 ರಂದು ತುಂಗಭದ್ರಾ ನೀರಾವರಿ ಸಲಹಾ ಸಮಿತಿ ಸಭೆ

ಬಳ್ಳಾರಿ,:2026–27ನೇ ಸಾಲಿನ ತುಂಗಭದ್ರಾ ಜಲಾಶಯದ ಮುಂಗಾರು ಹಂಗಾಮಿಗೆ ಲಭ್ಯವಿರುವ ನೀರನ್ನು ಬಳಸುವ ಕುರಿತು ನಿರ್ಧಾರ ಕೈಗೊಳ್ಳಲು ಆಗಸ್ಟ್ 11 ರಂದು ಮಧ್ಯಾಹ್ನ 03.30 ಗಂಟೆಗೆ ಮುನಿರಾಬಾದ್ ನ ಕಾಡಾ ಟಿಬಿಪಿ ಸಭಾಂಗಣದಲ್ಲಿ ತುಂಗಭದ್ರಾ ಯೋಜನಾ ಮತ್ತು ವಿಜಯನಗರ ಕಾಲುವೆಗಳ 126ನೇ ನೀರಾವರಿ ಸಲಹಾ ಸಮಿತಿ ಸಭೆಯನ್ನು ಕರೆಯಲಾಗಿದೆ.

ಕರ್ನಾಟಕ ಸರ್ಕಾರದ ಸಂಪುಟ ದರ್ಜೆಯ ಸಚಿವರು ಹಾಗೂ ನೀರಾವರಿ ಸಲಹಾ ಸಮಿತಿಯ ಸಭಾಧ್ಯಕ್ಷರೂ ಆದ ಶಿವರಾಜ ಎಸ್. ತಂಗಡಗಿ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಈ ಸಭೆಯಲ್ಲಿ ಮುಂಗಾರು ಹಂಗಾಮಿಗೆ ಲಭ್ಯವಿರುವ ನೀರಿನ ಪ್ರಮಾಣವನ್ನು ಪರಿಶೀಲಿಸಿ, ರೈತರ ಬೆಳೆಗಳಿಗೆ ನೀರು ಹರಿಸುವ ದಿನಾಂಕ ಹಾಗೂ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

## ಪರಿಷ್ಕೃತ ಕೂಲಿ ದರದ ಒಪ್ಪಂದಕ್ಕೆ ಸಹಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಬಿಡಿಸಿಸಿಐ) ನೇತೃತ್ವದಲ್ಲಿ ಬಳ್ಳಾರಿ ನಗರ ಹಮಾಲರ ಸಂಘ, ವ್ಯಾಪಾರಿಗಳು ಹಾಗೂ ಕೈಗಾರಿಕೋದ್ಯಮಿಗಳೊಂದಿಗೆ ನಡೆಸಿದ ನಿರಂತರ ಸಮಾಲೋಚನೆಯ ಫಲವಾಗಿ ಹಮಾಲಿಗಳ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪರಿಷ್ಕೃತ ಕೂಲಿ ದರದ ಒಪ್ಪಂದಕ್ಕೆ ಶನಿವಾರ ಸಹಿ ಹಾಕಲಾಯಿತು.

ಬಿಡಿಸಿಸಿಐ ಅಧ್ಯಕ್ಷ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಬಳ್ಳಾರಿ ನಗರ ಹಮಾಲರ ಸಂಘದ ಅಧ್ಯಕ್ಷ ಎಂ. ರವಿಪ್ರಸಾದ್ ಅವರು ಹಮಾಲಿಗಳನ್ನು ಪ್ರತಿನಿಧಿಸಿ ಪರಿಷ್ಕೃತ ದರಪಟ್ಟಿಗೆ ಸಹಿ ಹಾಕಿದರು.

ಪರಿಷ್ಕೃತ ದರ ಒಪ್ಪಂದವು 2026ರ ಆಗಸ್ಟ್ 15ರಿಂದ 2029ರ ಜೂನ್ 30ರವರೆಗೆ ಜಾರಿಯಲ್ಲಿರಲಿದೆ. ಈ ಒಪ್ಪಂದದಿಂದ ಹಮಾಲಿಗಳು, ವ್ಯಾಪಾರಿಗಳು ಹಾಗೂ ಕೈಗಾರಿಕೋದ್ಯಮಿಗಳ ನಡುವೆ ಉತ್ತಮ ಸಮನ್ವಯ, ಪರಸ್ಪರ ಸಹಕಾರ ಮತ್ತು ಸೌಹಾರ್ದಯುತ ವಾತಾವರಣ ನಿರ್ಮಾಣವಾಗಲಿದೆ ಎಂದು ಸಭೆಯಲ್ಲಿ ಆಶಯ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಡಿಸಿಸಿಐ ಅಧ್ಯಕ್ಷ ಅವ್ವಾರು ಮಂಜುನಾಥ್, ಹಮಾಲಿಗಳು, ವ್ಯಾಪಾರಿಗಳು ಹಾಗೂ ಕೈಗಾರಿಕೋದ್ಯಮಿಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪರಸ್ಪರ ಚರ್ಚೆ ಮತ್ತು ಸಮಾಲೋಚನೆಯ ಮೂಲಕ ಪರಿಷ್ಕೃತ ದರವನ್ನು ನಿಗದಿಪಡಿಸಲಾಗಿದೆ. ಎಲ್ಲರೂ ಒಪ್ಪಂದದ ನಿಯಮಗಳನ್ನು ಪಾಲಿಸುವ ಮೂಲಕ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಬಿಡಿಸಿಸಿಐ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಮಾತನಾಡಿ, ಹಮಾಲರು, ವ್ಯಾಪಾರಿಗಳು ಹಾಗೂ ಕೈಗಾರಿಕೋದ್ಯಮಿಗಳ ನಡುವೆ ಸೌಹಾರ್ದತೆ ಅತ್ಯಂತ ಅಗತ್ಯವಾಗಿದೆ. ಪರಸ್ಪರ ಹೊಂದಾಣಿಕೆ ಅನಿವಾರ್ಯವಾಗಿದ್ದು, ದೈನಂದಿನ ವ್ಯವಹಾರಗಳಲ್ಲಿ ಎಲ್ಲರೂ ತಾಳ್ಮೆ, ಶಿಸ್ತು ಮತ್ತು ಸಮಾಧಾನದಿಂದ ನಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಪರಿಷ್ಕೃತ ಹಮಾಲಿ ದರ ಒಪ್ಪಂದವು ಪೂರಕವಾಗಲಿದೆ ಎಂದು ಹೇಳಿದರು.

ಬಳ್ಳಾರಿ ನಗರ ಹಮಾಲರ ಸಂಘದ ಅಧ್ಯಕ್ಷ ಎಂ. ರವಿಪ್ರಸಾದ್ ಮಾತನಾಡಿ, ಪರಿಷ್ಕೃತ ದರಪಟ್ಟಿಯ ಪ್ರಕಾರ ವ್ಯಾಪಾರಿಗಳು ಹಾಗೂ ಕೈಗಾರಿಕೋದ್ಯಮಿಗಳು ಹಮಾಲಿಗಳಿಗೆ ಕೂಲಿ ಪಾವತಿಸಬೇಕು. ಹಮಾಲರು, ವ್ಯಾಪಾರಿಗಳು ಮತ್ತು ಉದ್ಯಮಿಗಳು ಪರಸ್ಪರ ಸಹಕಾರ, ತಾಳ್ಮೆ ಹಾಗೂ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸುವ ಮೂಲಕ ಉತ್ತಮ ವಾತಾವರಣ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಬಿಡಿಸಿಸಿಐ ಹಿರಿಯ ಉಪಾಧ್ಯಕ್ಷ ಎಸ್. ದೊಡ್ಡನಗೌಡ, ಉಪಾಧ್ಯಕ್ಷರಾದ ಸೊಂತ ಗಿರಿಧರ ಹಾಗೂ ಪಿ. ಪಾಲಣ್ಣ, ಜಂಟಿ ಕಾರ್ಯದರ್ಶಿಗಳಾದ ವಿ. ರಾಮಚಂದ್ರ ಹಾಗೂ ಡಾ. ಮರ್ಚೇಡ್ ಮಲ್ಲಿಕಾರ್ಜುನಗೌಡ, ಮಾಜಿ ಅಧ್ಯಕ್ಷರಾದ ಬಿ. ಮಹಾರುದ್ರಗೌಡ, ಸಿ. ಶ್ರೀನಿವಾಸ್‌ರಾವ್ ಹಾಗೂ ಡಾ. ಡಿ.ಎಲ್. ರಮೇಶ್ ಗೋಪಾಲ್, ದಲ್ಲಾಲಿ ವರ್ತಕರ ಸಂಘದ ಕಾರ್ಯದರ್ಶಿ ಗುರುಸ್ವಾಮಿ, ಎಫ್‌ಎಂಸಿಜಿ ಪ್ರತಿನಿಧಿ ಕಿಶೋರ್, ಗಾಯತ್ರಿ ಎಂಟರ್‌ಪ್ರೈಸಸ್‌ನ ಪರಮೇಶ್ವರಪ್ಪ, ವರ್ತಕರಾದ ರಮೇಶ್, ಫರ್ಟಿಲೈಸರ್ಸ್ ಸಂಘದ ಪದಾಧಿಕಾರಿಗಳು, ಸಿವಿಲ್ ಇಂಜಿನಿಯರ್ ಅಸೋಸಿಯೇಷನ್ ಅಧ್ಯಕ್ಷ ಸತ್ಯನಾರಾಯಣ, ಡಿಸ್ಟ್ರಿಬ್ಯೂಷನ್ ಅಸೋಸಿಯೇಷನ್‌ನ ನರೇಂದ್ರ, ಮೂಕಾಂಬಿಕಾ ಎಂಟರ್‌ಪ್ರೈಸಸ್‌ನ ಶ್ರೀನಿವಾಸ್, ಹಮಾಲರ ಸಂಘದ ಮೇಸ್ತ್ರಿಗಳಾದ ಬಿ. ಸುಂಕಣ್ಣ, ಬಿ. ಆಂಜನೇಯಲು, ಬಿ. ಕೃಷ್ಣ ಹಾಗೂ ಬಿ. ಅಂಜಿನಪ್ಪ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು

## ಕಾಮಗಾರಿ ಸ್ಥಳಕ್ಕೆ ಜಿಲ್ಲಾ ಪಂಚಾಯತ್ ಸಿಇಒ ಭೇಟಿ ಶಾಶ್ವತ ಆಸ್ತಿ ನಿರ್ಮಾಣಕ್ಕೆ ಒತ್ತು ನೀಡಲು ಸೂಚನೆ



• ಮಲ್ಲಮ್ಮ ನುಡಿ ವಾರ್ತೆ ಔರಾದ

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ್ ದಿಲೀಪ್ ಬದೋಲೆ ಅವರು ಶುಕ್ರವಾರ ತಾಲೂಕಿನ ಧೂಪತಮಹಾಗಾಂವ ಗ್ರಾಮದಲ್ಲಿ ವಿಕಸಿತ ಭಾರತ–ಜಿ ರಾಮ್ ಜಿ ಯೋಜನೆಯಡಿ ನಡೆಯುತ್ತಿರುವ ಸಿಸಿಟಿ (ಕಾಂಟೂರ್ ಟ್ರೆಂಚ್) ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ವಿಬಿ–ಜಿ ರಾಮ್ ಜಿ ಯೋಜನೆಯು ಗ್ರಾಮೀಣ ಜನರಿಗೆ ಉದ್ಯೋಗ ಕಲ್ಪಿಸುವುದರ ಜೊತೆಗೆ ಜಲ ಸಂರಕ್ಷಣೆ, ಮಣ್ಣಿನ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಗೆ ಪೂರಕವಾಗುವ ಶಾಶ್ವತ ಆಸ್ತಿಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದರು. ವಲಸೆ ಹೋಗದೆ, ನಿಮ್ಮೂರಲ್ಲೇ ಕೆಲಸ ಮಾಡಿ: ಗ್ರಾಮೀಣ ಪ್ರದೇಶದ ಕೂಲಿಕಾರ್ಮಿಕರು ಉದ್ಯೋಗಕ್ಕಾಗಿ ವಲಸೆ ಹೋಗುವ ಅಗತ್ಯವಿಲ್ಲ. ಸರ್ಕಾರದ ಉದ್ಯೋಗ ಖಾತರಿ ಯೋಜನೆಯಡಿ ನಿಮ್ಮೂರಲ್ಲೇ ಸಾಕಷ್ಟು ಕೆಲಸದ ಅವಕಾಶಗಳನ್ನು ಕಲ್ಪಿಸಲಾಗುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಮಾಹಿತಿ ನೀಡಿದರು. ವಿಬಿ ಜಿ ರಾಮ್ ಜಿ ಯೋಜನೆಯಡಿ ದಿನಗೂಲಿ ಮೊತ್ತವನ್ನು ರೂ.370ರಿಂದ ರೂ.382ಕ್ಕೆ ಹೆಚ್ಚಿಸಲಾಗಿದೆ. ವಾರ್ಷಿಕ ಉದ್ಯೋಗಾವಕಾಶವನ್ನು 100 ದಿನಗಳಿಂದ 125 ದಿನಗಳಿಗೆ ವಿಸ್ತರಿಸಲಾಗಿದ್ದು, ಗ್ರಾಮೀಣ್ ರೋಜ್ ಗಾರ್ ಗ್ಯಾರಂಟಿ ಕಾರ್ಡ್ ಹೊಂದಿರುವ ಕುಟುಂಬವು ವರ್ಷಕ್ಕೆ ರೂ.47,750ರವರೆಗೆ ಆದಾಯ ಗಳಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು. ಅಲ್ಲದೆ, ವಿಬಿ ಜಿ ರಾಮ್‌ಜಿ ಯೋಜನೆಯಡಿ ಹೆಚ್ಚು ಮಾನವ ದಿನಗಳ ಸೃಜನೆಗೆ ಒತ್ತು ನೀಡಬೇಕು. ಅರ್ಹ ಗ್ರಾಮೀಣ ಕುಟುಂಬಗಳಿಗೆ ನಿರಂತರ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಯೋಜನೆಯ ಸೌಲಭ್ಯಗಳು ಪ್ರತಿಯೊಬ್ಬ ಫಲಾನುಭವಿಗೂ ತಲುಪುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಅವರು ಸೂಚಿಸಿದರು. ಕೂಲಿಕಾರ್ಮಿಕರಿಗೆ ಬಾಳೆಹಣ್ಣು ವಿತರಿಸಿದ ಸಿಇಒ ಕಾಮಗಾರಿ ಸ್ಥಳದಲ್ಲಿ ಕೂಲಿಕಾರ್ಮಿಕರೊಂದಿಗೆ ಸಂವಾದ ನಡೆಸಿದ ಸಿಇಒ ಅವರು, ಕೂಲಿಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು. ಈ ವೇಳೆ ಕೂಲಿಕಾರ್ಮಿಕರಿಗೆ ಬಾಳೆಹಣ್ಣುಗಳನ್ನು ವಿತರಿಸಿ, ಆರೋಗ್ಯ ವಿಚಾರಿಸಿದರು ಇದೇ ವೇಳೆ ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ (ಆಡಳಿತ) ಜಯಪ್ರಕಾಶ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ್, ಸಹಾಯಕ ನಿರ್ದೇಶಕ (ಗ್ರಾ.ಉ) ಶಿವಕುಮಾರ ಘಾಟೆ, ಎಡಿಪಿಸಿ ದೀಪಕ ಕಡಿಮನಿ, ಗ್ರಾಮ ಪಂಚಾಯತ್ ಪಿಡಿಒ ನಂದಕಿಶೋರ, ತ್ರಾಂತಿಕ ಸಂಯೋಜಕ ಆನಂದ ಕಾಳಗಾಪೂರೆ, ತಾಂತ್ರಿಕ ಸಹಾಯಕ ಶರಣಪ್ಪ, ಐಇಸಿ ಅಂಬಾದಾಸ ಪಾಟೀಲ್, ಗ್ರಾಪಂ ಸಿಬ್ಬಂದಿಯವರು ಹಾಗೂ ಕೂಲಿಕಾರ್ಮಿಕರು ಹಾಜರಿದ್ದರು.

## ಗೋವಿಂದರಾವ್ ಸಮಿತಿ ವರದಿ ಸಮಗ್ರ ಚಿಂತನೆ ದುಂಡುಮೇಜಿನ ಸಭೆ 14ಕ್ಕೆ

ಕಲಬುರಗಿ: ಗೋವಿಂದರಾವ್ ನೇತೃತದಪ್ರಾದ 'ೀಶಿಕಅಸಮತೋಲನಾ ನಿವಾರಣಾ ಸಮಿತಿಯ ವರದಿ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ ರಚನಾತ್ಮಕ ಪ್ರಗತಿಯ ಕುರಿತು ಆಗಸ್ಟ್ 11ರಂದು ನಿಗದಿ ಮಾಡಿ ಹಮ್ಮಿಕೊಂಡಿರುವ ದುಂಡು ಮೇಜಿನ ಸಭೆಯನ್ನು ಅನೀವಾರ್ಯ ಕಾರಣಗಳಿಂದ ಮುಂದೂಡಿ ಬರುವ ಅಗಸ್ಟ 14ರಂದು ಶುಕ್ರವಾರ ಮಧ್ಯಾಹ್ನ ಸರಿಯಾಗಿ 11.15 ಗಂಟೆಗೆ ಶರಣಬಸವ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಯಥಾಪ್ರಕಾರ ನಿಗದಿ ಮಾಡಲಾಗಿದೆ ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಗೌರವಾಧ್ಯಕ್ಷ ಬಸವರಾಜ್ ದೇಶಮುಖ ಮತ್ತು ಸಂಸ್ಥಾಪಕ ಅಧ್ಯಕ್ಷ ಡಾ. ಲಕ್ಷ್ಮಣ ದಸ್ತಿಯವರು ತಿಳಿಸಿದ್ದಾರೆ.

## ನಿವೃತ್ತ ಸರ್ಕಾರಿ ನೌಕರರ ಸಂಘಕ್ಕೆ ೮೦ ಲಕ್ಷ ರೂ. ಮೌಲ್ಯದ ನಿವೇಶನ : ಶಂಭುಲಿಂಗನಗೌಡ ಪಾಟೀಲರಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ




ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ಮಂಡಳಿಯ ಅಧ್ಯಕ್ಷ ಹಾಗೂ ಸರ್ಕಾರಿ ನೌಕರರು ಮತ್ತು ಶಿಕ್ಷಕರ ಕಣ್ಮಣಿಯಾಗಿರುವ ಶಂಭುಲಿಂಗನಗೌಡ ಪಾಟೀಲ ಹಲಗೇರಿ ಅವರು ಕೊಪ್ಪಳ ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಸಂಘದ ಕಾರ್ಯಚಟುವಟಿಕೆಗಳಿಗೆ ಅನುಕೂಲವಾಗುವಂತೆ ಅಮೂಲ್ಯ ನಿವೇಶನವನ್ನು ಎಲ್ಲಾ ನಿರ್ದೇಶಕರ ಮಂಡಳಿ ಯ ತೀರ್ಮಾನದಂತೆ ನೀಡುವ ಮೂಲಕ ಸಮಾಜಮುಖಿ ಕಾರ್ಯಕ್ಕೆ ಮಾದರಿಯಾಗಿದ್ದಾರೆ. ಕೊಪ್ಪಳ ನಗರದ ಪ್ರತಿಷ್ಠಿತ ಕಾಲೋನಿಯ ಕಿನ್ನಾಳ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ 4040 ಅಡಿ ಅಳತೆಯ, ಪ್ರಸ್ತುತ ಮಾರುಕಟ್ಟೆ ಮೌಲ್ಯ ಸುಮಾರು 80 ಲಕ್ಷ ರೂ. ಇರುವ ನಿವೇಶನವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ಮಂಡಳಿಯ ವತಿಯಿಂದ ಕೊಪ್ಪಳ ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಸಂಘಕ್ಕೆ ನೀಡಲಾಗಿದೆ. ನಿವೃತ್ತ ಸರ್ಕಾರಿ ನೌಕರರ ಸಂಘಕ್ಕೆ ಸ್ವಂತ ನಿವೇಶನ ದೊರೆತಿರುವುದರಿಂದ ಸಂಘದ ಕಚೇರಿ ಹಾಗೂ ವಿವಿಧ ಕಾರ್ಯಚಟುವಟಿಕೆಗಳನ್ನು ನಡೆಸಲು ಹೆಚ್ಚಿನ ಅನುಕೂಲವಾಗಲಿದೆ ಎಂದು ಸಂಘದ ಪದಾಧಿಕಾರಿಗಳು ಸಂತಸ ವ್ಯಕ್ತಪಡಿಸಿದರು. ಸರ್ಕಾರಿ ನೌಕರರು ಮತ್ತು ಶಿಕ್ಷಕರ ಹಿತಕ್ಕಾಗಿ ಹಲವು ಸಮಾಜಮುಖಿ ಕಾರ್ಯಗಳನ್ನು ಕೈಗೊಂಡಿರುವ ಶಂಭುಲಿಂಗನಗೌಡ ಪಾಟೀಲ, ನಿರ್ದೇಶಕ ಮಂಡಳಿಯ ಹೃದಯ ವೈಶಾಲ್ಯತೆ ಹಾಗೂ ಸೇವಾ ಮನೋಭಾವವನ್ನು ನಿವೃತ್ತ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಶ್ಲಾಘಿಸಿದರು.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘದ ಕೊಪ್ಪಳ ಜಿಲ್ಲಾ ಘಟಕದ ವತಿಯಿಂದ ಶಂಭುಲಿಂಗನಗೌಡ ಪಾಟೀಲ ಹಲಗೇರಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ, ಅಭಿನಂದನೆ ಸಲ್ಲಿಸಲಾಯಿತು.

ಸನ್ಮಾನ ಸ್ವೀಕರಿಸಿದ ಶಂಭುಲಿಂಗನಗೌಡ ಪಾಟೀಲ ಅವರು ನಿವೃತ್ತ ಸರ್ಕಾರಿ ನೌಕರರ ಸಂಘದ ಚಟುವಟಿಕೆಗಳಿಗೆ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಸಿ.ವಿ. ಜಡಿಯವರು, ಪ್ರಧಾನ ಕಾರ್ಯದರ್ಶಿ ಬೀರನಾಯ್ಕರ್, ಮುಸ್ತಫಾ ಕುದರಿಮೋತಿ, ಶಂಕರಗೌಡ, ವೆಂಕಣ್ಣ ಬಾರಕೇರ, ಕಂತೆಪ್ಪ, ಮೇರಿ ಮೇಡಂ, ಇಂದುಮತಿ ಸೇರಿದಂತೆ ಹಲವಾರು ನಿವೃತ್ತ ಸರ್ಕಾರಿ ನೌಕರರು ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಪತ್ರಿಕೋದ್ಯಮ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಅತ್ಯಧಿಕ: ಡಾ. ಪ್ರಭಾಕರ ಜೋಶಿ



ಕಲಬುರಗಿ: ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿಯೂ ಉದ್ಯೋಗಾವಕಾಶಗಳು ಕುಗ್ಗುತ್ತಿರುವ ಸಂದರ್ಭದಲ್ಲಿ, ಯುವ ಪತ್ರಕರ್ತರಿಗೆ ವ್ಯಾಪಕ ಉದ್ಯೋಗಾವಕಾಶಗಳನ್ನು ಒದಗಿಸುವ ಕೆಲವೇ ಕ್ಷೇತ್ರಗಳಲ್ಲಿ ಪತ್ರಿಕೋದ್ಯಮವೂ ಒಂದಾಗಿದೆ ಎಂದು ಸಂಯುಕ್ತ ಕರ್ನಾಟಕದ ಹಿರಿಯ ಪತ್ರಕರ್ತ ಹಾಗೂ ಸ್ಥಾನಿಕ ಸಂಪಾದಕ ಡಾ. ಪ್ರಭಾಕರ ಜೋಶಿ ಅಭಿಪ್ರಾಯ ಪಟ್ಟರು.

ಶರಣಬಸವ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ 2024–26 ನೇ ಸಾಲಿನ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ವಿಶ್ವವಿದ್ಯಾಲಯದ ಅನುಭವ ಮಂಟಪದಲ್ಲಿ ಜರುಗಿದ ಸಮಾರಂಭದಲ್ಲಿ ಮಾತನಾಡಿದ ಅವರು, ಪತ್ರಿಕೋದ್ಯಮ ಪದವೀಧರರು ಯಶಸ್ವಿ ಪತ್ರಕರ್ತರಾಗಬೇಕಾದರೆ ವೃತ್ತಿಯ ಬಗ್ಗೆ ಪ್ರಾಮಾಣಿಕತೆ ಹಾಗೂ ಬದ್ಧತೆಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಪತ್ರಿಕೋದ್ಯಮ ಕ್ಷೇತ್ರವು ಇಂದು ಗುಣಾತ್ಮಕ ಬದಲಾವಣೆಗೆ ಒಳಗಾಗುತ್ತಿದೆ. ಇಂಟರ್‌ನೆಟ್ ಸೇರಿದಂತೆ ತಂತ್ರಜ್ಞಾನದ ಬೆಳವಣಿಗೆಯಿಂದ ಸುದ್ದಿ ಮೂಲಗಳನ್ನು ಸುಲಭವಾಗಿ ಸಂಪರ್ಕಿಸಲು ಸಾಧ್ಯವಾಗಿದ್ದು, ಇದರಿಂದ ಪತ್ರಕರ್ತರ ಕಾರ್ಯನಿರ್ವಹಣೆಯೂ ಮತ್ತಷ್ಟು ಸುಲಭವಾಗಿದೆ. ಪತ್ರಕರ್ತರ ಕೆಲಸದ ಪರಿಸ್ಥಿತಿಗಳಲ್ಲಿಯೂ ಸಾಕಷ್ಟು ಸುಧಾರಣೆ ಕಂಡುಬಂದಿದೆ ಎಂದು ಡಾ. ಜೋಶಿ ತಿಳಿಸಿದರು.

ಪತ್ರಿಕೋದ್ಯಮ ಪದವೀಧರರಿಗೆ ಉದ್ಯೋಗಾವಕಾಶಗಳು ಕೇವಲ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ಮಾತ್ರ ಸೀಮಿತವಾಗಿಲ್ಲ. ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳಲ್ಲಿಯೂ ಅವರು ತಮ್ಮ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಾಹಿತಿ ಅಧಿಕಾರಿಗಳಾಗಿ, ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಸಾರ್ವಜನಿಕ ವಲಯದ ಕೈಗಾರಿಕೆಗಳಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವ ಅವಕಾಶಗಳಿವೆ ಎಂದು ಅವರು ಹೇಳಿದರು.

ಸಾಮಾಜಿಕ ಮಾಧ್ಯಮ ವೇದಿಕೆಗಳೂ ಪತ್ರಕರ್ತರಿಗೆ ಹೊಸ ಅವಕಾಶಗಳ ಬಾಗಿಲು ತೆರೆದಿವೆ. ಯಾವುದೇ ದೊಡ್ಡ ಹೂಡಿಕೆಯಿಲ್ಲದೆ ಸ್ವಂತ ಸುದ್ದಿ ಅಥವಾ ಮಾಧ್ಯಮ ಚಾನೆಲ್‌ಗಳನ್ನು ಆರಂಭಿಸುವ ಮೂಲಕ ಪತ್ರಿಕೋದ್ಯಮ ಪದವೀಧರರು ಯಶಸ್ವಿ ಉದ್ಯಮಿಗಳಾಗಬಹುದು ಎಂದು ಡಾ. ಜೋಶಿ ಅಭಿಪ್ರಾಯಪಟ್ಟರು.

ಕಡಿಮೆ ಹಾಗೂ ಕೈಗೆಟುಕುವ ಶುಲ್ಕದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಕೋರ್ಸ್‌ನ್ನು ಒದಗಿಸುವ ಮೂಲಕ ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಪತ್ರಕರ್ತರಾಗುವ ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ಅವಕಾಶ ಕಲ್ಪಿಸಿರುವ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕಾರ್ಯವನ್ನು ಡಾ. ಜೋಶಿ ಶ್ಲಾಘಿಸಿದರು.

ವಿಭಾಗದ ಮುಖ್ಯಸ್ಥರಾದ ಡಾ. ಸುನೀತಾ ಪಾಟೀಲ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದ ಡಾ. ಅಶ್ವಿನಿ ರೆಡ್ಡಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಮಾಜ ವಿಜ್ಞಾನ ವಿಭಾಗದ ಡೀನ್ ಪ್ರೊ. ಟಿ. ವಿ. ಶಿವಾನಂದನ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿ ಪ್ರವೀಣ್ ಅಥರ್ಗಾ ಕಾರ್ಯಕ್ರಮ ನಿರೂಪಿಸಿದರು.

## ಬರ ಪರಿಸ್ಥಿತಿ ವೀಕ್ಷಣೆ: ರೈತರ ಸಂಕಷ್ಟಕ್ಕೆ ಸ್ಪಂದಿಸಲು ಸರ್ಕಾರ ಬದ್ಧ: ಸಚಿವ ಡಾ.ಅಜಯ್ ಧರ್ಮಸಿಂಗ್

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು



ಆ 08: ರಾಯಚೂರು ಜಿಲ್ಲೆಯಲ್ಲಿ ವಿವಿಧ ತಾಲೂಕುಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿ ಪರಿಶೀಲಿಸಿದ್ದು ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಿ, ರೈತರ ಸಂಕಷ್ಟವನ್ನು ಅರಿಯುವ ಉದ್ದೇಶದಿಂದ ಮುಖ್ಯಮಂತ್ರಿ ಅವರ ಸೂಚನೆಯಂತೆ ಜಿಲ್ಲೆಗೆ ಭೇಟಿ ನೀಡಿದ್ದೇನೆ ಎಂದು ಕರ್ನಾಟಕ ಸರ್ಕಾರದ ನೂತನ ಸಚಿವರಾದ ಅಜಯ್ ಧರ್ಮಸಿಂಗ್ ಹೇಳಿದರು.

ಅವರು ಶನಿವಾರ ರಾಯಚೂರು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಜಿಲ್ಲೆಯ ಬರ ಪರಿಸ್ಥಿತಿ, ಕುಡಿಯುವ ನೀರಿನ ಸಮಸ್ಯೆಗಳು, ಮುಂಗಾರು ಹಂಗಾಮಿನ ಬಿತ್ತನೆ ಮತ್ತು ರಸಗೊಬ್ಬರ ಬೇಡಿಕೆಗಳು ಹಾಗೂ ಮೇವಿನ ಲಭ್ಯತೆ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿ ಮಾತನಾಡಿದರು. ರಾಯಚೂರು ಜಿಲ್ಲೆಗೆ ಮೊದಲ ಬಾರಿಗೆ ಜಿಲ್ಲಾ ಉಸ್ತುವಾರಿ ಸಚಿವನಾಗಿ ಬರ ಪರಿಸ್ಥಿತಿ ವೀಕ್ಷಣೆಗೆ ಆಗಮಿಸಿರುವುದು ನನ್ನ ಭಾಗ್ಯ ಹಾಗೂ ಸಂತೋಷದ ವಿಷಯವಾಗಿದೆ. ರಾಯಚೂರು ಜಿಲ್ಲೆ ತಮ್ಮ ಕುಟುಂಬಕ್ಕೆ ಹೊಸದಲ್ಲ. ತಮ್ಮ ತಂದೆ ಹಾಗೂ ಮಾಜಿ ಮುಖ್ಯಮಂತ್ರಿ ದಿವಂಗತ ಧರ್ಮಸಿಂಗ್ ಅವರು 1999 ರಿಂದ 2004 ರವರೆಗೆ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ನಾನು ಕೂಡ ಈ ಹಿಂದೆ ಹಲವು ಬಾರಿ ರಾಯಚೂರಿಗೆ ಭೇಟಿ ನೀಡಿದ್ದೇನೆ. ಪ್ರಮಾಣ ವಚನ ಸ್ವೀಕರಿಸಿದ ಬಳಿಕ ನಡೆದ ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಮುಖ್ಯಮಂತ್ರಿ ಅವರು ಪ್ರತಿಯೊಬ್ಬ ಸಚಿವರಿಗೂ ಒಂದೊಂದು ಜಿಲ್ಲೆಯ ಜವಾಬ್ದಾರಿ ವಹಿಸಿ, ತಮ್ಮ ಜಿಲ್ಲೆಗಳಿಗೆ ತೆರಳಿ ಅಲ್ಲಿನ ರೈತರ ಸಂಕಷ್ಟದಲ್ಲಿ ಭಾಗಿಯಾಗಬೇಕು ಎಂದು ಸೂಚಿಸಿದ್ದರು. ಅದರಂತೆ ರಾಯಚೂರು ಜಿಲ್ಲೆಗೆ

ಆಗಮಿಸಿ ಕೇವಲ ಸಭೆ ನಡೆಸುವುದಕ್ಕೆ ಸೀಮಿತವಾಗದೆ, ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ತೆರಳಿ ರೈತರನ್ನು ನೇರವಾಗಿ ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಆಲಿಸಲಾಗಿದೆ ಎಂದು ಹೇಳಿದರು. ರಾಯಚೂರು ಗ್ರಾಮೀಣ, ದೇವದುರ್ಗ, ಲಿಂಗಸುಗೂರು, ಸಿಂಧನೂರು, ಮಸ್ಕಿ ಹಾಗೂ ಮಾನ್ವಿ ಸೇರಿದಂತೆ ವಿವಿಧ ತಾಲೂಕುಗಳ ಗ್ರಾಮಗಳಿಗೆ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಲಾಗಿದೆ. ರೈತರ ಜಮೀನುಗಳಿಗೆ ತೆರಳಿ ಬೆಳೆಗಳ ಪರಿಸ್ಥಿತಿಯನ್ನು ನೇರವಾಗಿ ವೀಕ್ಷಿಸಲಾಗಿದೆ ನಮ್ಮ ರೈತರು ಬಹಳ ಸಂಕಷ್ಟದಲ್ಲಿದ್ದಾರೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಸುಮಾರು 2.73 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಡೆದಿದ್ದು, ಅದರಲ್ಲಿ ಸುಮಾರು 1.77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬಿತ್ತನೆಯಾಗಿದೆ. ಕೆಲ ರೈತರು ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಮಾಡಿದ್ದಾರೆ. ಮಳೆ ಬಾರದ ಕಾರಣ ಎಲ್ಲಾ ಬೆಳೆಗಳು ಹಾಳಾಗಿವೆ ಹಾಗಾಗಿ ಈ ವರದಿಯನ್ನು ಬರುವ ಸಚಿವ ಸಂಪುಟದ ಸಭೆಯಲ್ಲಿ ಸರಕಾರದ ಗಮನಕ್ಕೆ ತರಲಾಗುವುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಮಾಜಿ ಸಚಿವರು ಹಾಗೂ ಹಾಲಿ ವಿಧಾನ ಪರಿಷತ್ ಶಾಸಕರಾದ ಎನ್.ಎಸ್.ಭೋಸರಾಜು, ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಇದ್ದರು.

## ಸಂಕಷ್ಟದಲ್ಲಿರುವ ಪ್ರತಿಯೊಬ್ಬ ರೈತನಿಗೆ ಸೂಕ್ತ ಪರಿಹಾರ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು



ಆ 08: ರಾಯಚೂರು ಜಿಲ್ಲೆಯಲ್ಲಿ ಬರ ಅಧ್ಯಯನ ಆರಂಭಿಸಿರುವ ಕರ್ನಾಟಕ ಸರ್ಕಾರದ ನೂತನ ಸಚಿವರಾದ ಡಾ.ಅಜಯ್ ಧರಂಸಿಂಗ್ ಅವರು 2ನೇ ದಿನವೂ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಬರ ಪರಿಶೀಲನೆ ನಡೆಸುವಲ್ಲಿ ನಿರತರಾದರು.

ಈ ವೇಳೆ ಕರ್ನಾಟಕ ಸರ್ಕಾರದ ನೂತನ ಸಚಿವರಾದ ಡಾ.ಅಜಯ್ ಧರಂಸಿಂಗ್ ಅವರು ಪೋತ್ನಾಳ ಗ್ರಾಮದ ಜಮೀನಿನ ಪರಿಶೀಲನೆ ನಂತರ ಮಾತನಾಡಿದ ಅವರು ರಾಯಚೂರು ಜಿಲ್ಲೆಯಲ್ಲಿ ಮಳೆಯ ಅಭಾವ ಹಾಗೂ ಕೃಷಿ ಬಿಕ್ಕಟ್ಟಿನಿಂದಾಗಿ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದು, ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ಈ ಹಿನ್ನೆಲೆಯಲ್ಲಿ ಮಸ್ಕಿ ಮತ್ತು ಸಿಂಧನೂರು ತಾಲೂಕುಗಳ ವಿವಿಧ ಪ್ರದೇಶಗಳಿಗೆ ಜನಪ್ರತಿನಿಧಿಗಳ ಹಾಗೂ ನಾಯಕರ ತಂಡ ಭೇಟಿ ನೀಡಿ, ನೇರವಾಗಿ ರೈತರನ್ನು ಭೇಟಿಯಾಗಿ ಅವರ ಕುಂದುಕೊರತೆಗಳನ್ನು ಆಲಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಪ್ರಸಕ್ತ ಕೃಷಿ ಸ್ಥಿತಿ ಆತಂಕಕಾರಿಯಾಗಿದೆ. ಪ್ರತಿ ವರ್ಷ ಕನಿಷ್ಠ 1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗುತ್ತಿತ್ತು. ಆದರೆ ಈ ಬಾರಿ ಕೇವಲ 12,000 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ಇದರಲ್ಲಿ ಸುಮಾರು 4,000 ಹೆಕ್ಟೇರ್ ಹತ್ತಿ ಹಾಗೂ 7,000 ಹೆಕ್ಟೇರ್ ಸೂರ್ಯಕಾಂತಿ ಬೆಳೆ ಸೇರಿದೆ ಎಂದರು. ವಾಡಿಕೆಯಂತೆ ನಡೆಯಬೇಕಿದ್ದ 1 ಲಕ್ಷ ಹೆಕ್ಟೇರ್ ಬಿತ್ತನೆಗೆ ಹೋಲಿಸಿದರೆ ಈ ಬಾರಿ ಬಿತ್ತನೆಯಾಗಿರುವುದು ಕೇವಲ 12,000 ಹೆಕ್ಟೇರ್ ಮಾತ್ರ. ಮಸ್ಕಿಯಿಂದ ಸಿಂಧನೂರುವರೆಗಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಬೆಳೆ ಹಾನಿ ಹಾಗೂ ರೈತರ ಸಂಕಷ್ಟದ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸಲಾಗುತ್ತಿದೆ.

# ಶ್ರೀ ರೇಣುಕಾ ಯಲ್ಲಮ್ಮ ದೇವಿಯ 5ನೇ ವರ್ಷದ ಜಾತ್ರಾ ಮಹೋತ್ಸವ



**ಬಳ್ಳಾರಿ:** ನಗರದ ಸಂಗನಕಲ್ಲು ರಸ್ತೆಯ ಸುಬ್ಬರಾವ್ ಕ್ಯಾಂಪ್‌ನಲ್ಲಿ ನೆಲೆಸಿರುವ ಶ್ರೀ ರಕ್ಷಾ ಸರ್ವಧರ್ಮ ಪೀಠದ ಶ್ರೀ ಶ್ರೀ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ 5ನೇ ವರ್ಷದ ಜಾತ್ರಾ ಮಹೋತ್ಸವವು ಆಗಸ್ಟ್ 10ರಿಂದ 12ರವರೆಗೆ ಮೂರು ದಿನಗಳ ಕಾಲ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹಾಗೂ ದವಾಧಾನ್ಯ ದಿನಸಗಳಿಂದ ತುಲಭಾರ ಕಾರ್ಯಕ್ರಮ ಮತ್ತು ರಕ್ತದಾನ ಶಿಬಿರ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಲಿದೆ.

ಹರ–ಗುರು ಚರಮೂರ್ತಿಗಳು, ಶರಣ ಸಂತ–ಮಹಾಂತರು ಹಾಗೂ ಸದ್ಗುರು ಜುಮಾರಿ ತಾತನವರ ನೇತೃತ್ವದಲ್ಲಿ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳು ನಡೆಯಲಿವೆ. ವೇದಮೂರ್ತಿ ಆಲೂರು ಶ್ರೀ ರುದ್ರಮುನಿ ತಾತನವರು ಹಾಗೂ ವೇದಮೂರ್ತಿ ಬೆಣಕಲ್ಲು ರಾಮಲಿಂಗಯ್ಯ ತಾತನವರ ಕೃಪಾಶೀರ್ವಾದದೊಂದಿಗೆ ಜಾತ್ರಾ ಮಹೋತ್ಸವವನ್ನು ಆಯೋಜಿಸಲಾಗಿದೆ ಎಂದು ದೇವಸ್ಥಾನದ ಸಮಿತಿ ತಿಳಿಸಿದೆ. ಆಗಸ್ಟ್ 10ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಮಹಿಳೆಯರಿಂದ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ ನಡೆಯಲಿದೆ. ಬಳಿಕ ವಿವಿಧ ವಾದ್ಯ–ವೈಭವಗಳೊಂದಿಗೆ ಉಚ್ಚಾಯ ಪಲ್ಲಕ್ಕಿ ಉತ್ಸವ ಜರುಗಲಿದೆ. ಸಂಜೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಆಗಸ್ಟ್ 11ರಂದು ಮಂಗಳವಾರ, ಆಷಾಢ ಮಾಸದ ನಾಲ್ಕನೇ ಮಂಗಳವಾರದ ಅಂಗವಾಗಿ ಜಾತ್ರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಮಹಾ ರಥೋತ್ಸವ ನಡೆಯಲಿದೆ. ಪಲ್ಲಕ್ಕಿ ಉತ್ಸವ, ಕಳಸ ಹಾಗೂ ಕುಂಭಗಳೊಂದಿಗೆ ಸಕಲ ವಾದ್ಯ–ವೈಭವಗಳ ನಡುವೆ ರಥೋತ್ಸವ ನೆರವೇರಲಿದೆ. ಸಂಜೆ 5.31ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕೋಲಾಟ ಕಾರ್ಯಕ್ರಮ ಆಯೋಜಿಸಲಾಗಿದೆ. ಆಗಸ್ಟ್ 12ರಂದು ಬುಧವಾರ ಪಲ್ಲಕ್ಕಿ ಉತ್ಸವದ ನಂತರ ಸಂಜೆ 6 ಗಂಟೆಗೆ ಲಂಕಾ ದಹನ ಹಾಗೂ ಪಟಾಕಿ ಉತ್ಸವ ನಡೆಯಲಿದೆ. ಮೂರು ದಿನಗಳ ಕಾಲ ನಡೆಯಲಿರುವ ಜಾತ್ರಾ ಮಹೋತ್ಸವಕ್ಕೆ ಬಳ್ಳಾರಿ ನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಹಾಗೂ ವಿವಿಧ ಪ್ರದೇಶಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆಯಿದೆ. ಭಕ್ತರು ಕುಟುಂಬ ಸಮೇತರಾಗಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಶ್ರೀ ರೇಣುಕಾ ಯಲ್ಲಮ್ಮ ದೇವಿಯ ದರ್ಶನ ಪಡೆದು, ತನು–ಮನ–ಧನದಿಂದ ಸೇವೆ ಸಲ್ಲಿಸಿ ದೇವಿಯ ಹಾಗೂ ತಾತನವರ ಕೃಪಾಶೀರ್ವಾದಕ್ಕೆ ಪಾತ್ರರಾಗುವಂತೆ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಶ್ರೀ ರಕ್ಷಾ ಸೇವಾ ಸಮಿತಿ ಮನವಿ ಮಾಡಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನ ಹಾಗೂ ಸುಬ್ಬರಾವ್ ಕ್ಯಾಂಪ್ ಪ್ರದೇಶದಲ್ಲಿ ಸಡಗರದ ವಾತಾವರಣ ನಿರ್ಮಾಣವಾಗಿದ್ದು, ಭಕ್ತರನ್ನು ಸ್ವಾಗತಿಸಲು ಸಮಿತಿ ಸಿದ್ಧತೆಗಳನ್ನು ಕೈಗೊಂಡಿದೆ.

ಸರ್ವ ಭಕ್ತರಿಗೂ ಆದರದ ಸುಸ್ವಾಗತ ಎಂದು ಶ್ರೀ ರೇಣುಕಾ ಯಲ್ಲಮ್ಮ ದೇವಿ ಹಾಗೂ ತಾತನವರ ಸಮಸ್ತ ಭಕ್ತ ಬಳಗ, ಸುಬ್ಬರಾವ್ ಕ್ಯಾಂಪ್, ಸಂಗನಕಲ್ಲು ರಸ್ತೆ, ಬಳ್ಳಾರಿ, ಹಾಗೂ ಶ್ರೀ ರಕ್ಷಾ ಸೇವಾ ಸಮಿತಿ ಸದಸ್ಯರು ತಿಳಿಸಿದ್ದಾರೆ.

# ರಾಷ್ಟ್ರೀಯ ಹೆದ್ದಾರಿ–50ರ ಅವ್ಯವಸ್ಥೆ ಸರಿಪಡಿಸಿ: ಗಣೇಶ ಜಿ. ಒತ್ತಾಯ



**ಭಾಲ್ಕಿ:** ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಮಹಾರಾಷ್ಟ್ರ ಗಡಿಯಿಂದ ಕಮಲನಗರ ಹಾಗೂ ನೌಬಾದ್‌ವರೆಗೆ ರಸ್ತೆ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನಮ್ಮ ಕರ್ನಾಟಕ ಸೇನೆಯ ಬೀದರ್ ಜಿಲ್ಲಾ ಅಧ್ಯಕ್ಷ ಗಣೇಶ ಜಿ. ಪಾಟೀಲ ಒತ್ತಾಯಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ–50ರ ಕಳಪೆ ಕಾಮಗಾರಿಯ ಕುರಿತು ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಕ್ರಮ ಕೈಗೊಳ್ಳಬೇಕು. ಬೀದರ್ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಸುಂಕ ವಸೂಲಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ಕನ್ನಡ ನಾಮಫಲಕ ಅಳವಡಿಸಬೇಕು. ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಅಳವಡಿಸಿರುವ ವಿದ್ಯುತ್ ದೀಪಗಳು ಗುಣಮಟ್ಟದಿಂದ ಕೂಡಿರಬೇಕು. ಸುಮಾರು 10 ತಿಂಗಳಿಂದ ಮೇಲ್ಸೇತುವೆ ಮೇಲೆ ವಿದ್ಯುತ್ ದೀಪಗಳಿಲ್ಲದೆ ಹಾಗೆ ಇವೆ ಮೇಲ್ ಸೇತುವೆ ಹಾಗೂ ರಸ್ತೆಯ ಮೇಲಿನ ವಿದ್ಯುತ್ ದೀಪಗಳನ್ನು ತಕ್ಷಣ ದುರಸ್ತಿ/ಅಳವಡಿಸಿ, ರಾತ್ರಿ ವೇಳೆ ಕಡ್ಡಾಯವಾಗಿ ಉರಿಯುವಂತೆ ವ್ಯವಸ್ಥೆ ಮಾಡಬೇಕು. ರಸ್ತೆ ಕಾಮಗಾರಿಯ ವಿಳಂಬ ಹಾಗೂ ಅವೈಜ್ಞಾನಿಕ ನಿರ್ಮಾಣದಿಂದ ಸಂಭವಿಸುತ್ತಿರುವ ಅಪಘಾತಗಳನ್ನು ತಡೆಯಲು ತುರ್ತು ಕ್ರಮ ಕೈಗೊಳ್ಳಬೇಕು. ಪತ್ರದಲ್ಲಿ ಉಲ್ಲೇಖಿಸಿರುವಂತೆ, 2024ರವರೆಗೆ ಸುಮಾರು 126 ಮಂದಿ ಮೃತಪಟ್ಟಿದ್ದು, 464 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಹಾಗೂ 350 ಅಪಘಾತಗಳು ಸಂಭವಿಸಿವೆ ಎಂದು ತಿಳಿಸಲಾಗಿದ್ದು, ರಸ್ತೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಸಾರ್ವಜನಿಕರ ಹಿತಾಸಕ್ತಿಯ ಬೇಡಿಕೆಗಳನ್ನು ನಿರ್ಲಕ್ಷಿಸಿದರೆ ಸಂಘಟನೆಯ ವತಿಯಿಂದ ಸಾರ್ವಜನಿಕರೊಂದಿಗೆ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ. ರಸ್ತೆ ಕಾಮಗಾರಿ ಗುಣಮಟ್ಟ, ಸಾರ್ವಜನಿಕರ ಸುರಕ್ಷತೆ ಹಾಗೂ ಕನ್ನಡ ನಾಮ ಫಲಕದ ವಿಚಾರದಲ್ಲಿ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

# ಭೀಕರ ಮುಂಗಾರು ಅಭಾವ ಹಾಗೂ ಶೇ.60 ರಷ್ಟು ಮಳೆ ಕೊರತೆ: ಬರ ಪರಿಸ್ಥಿತಿ ನಿರ್ವಹಣೆಗೆ ಜಿಲ್ಲಾಡಳಿತದಿಂದ ಸಿದ್ಧತೆ..!

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯನಗರ ಜಿಲ್ಲೆಯಾದ್ಯಂತ ತೀವ್ರ ಮಳೆ ಕೊರತೆ ಎದುರಾಗಿದ್ದು, ಜಿಲ್ಲೆಯನ್ನು ಭೀಕರ ಬರ ಪರಿಸ್ಥಿತಿ ಆವರಿಸಿದೆ. ಜೂನ್ 1 ರಿಂದ ಆಗಸ್ಟ್ 6 ರವರೆಗಿನ ಅವಧಿಯಲ್ಲಿ ವಾಡಿಕೆ ಮಳೆಯಾದ 188.7 ಮಿ.ಮೀ.ಗೆ ಪ್ರತಿಯಾಗಿ ಕೇವಲ 76.0 ಮಿ.ಮೀ. ಮಳೆಯಾಗಿದ್ದು, ಶೇಕಡಾ 60 ರಷ್ಟು ಮಳೆ ಅಭಾವ ದಾಖಲಾಗಿದೆ. ಈ ಹಿನ್ನೆಲೆಯಲ್ಲಿ ರೈತರ ನೆರವಿಗೆ ಸರ್ಕಾರ ಮುಂದಾಗಿದೆ ಎಂದು ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ತಿಳಿಸಿದರು.

ಅವರು ಶುಕ್ರವಾರ ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು. ಸರ್ಕಾರದ ಸೂಚನೆಯಂತೆ ರಾಜ್ಯಾದ್ಯಂತ ಬರ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ಪ್ರವಾಸ ಕೈಗೊಳ್ಳಲಾಗಿದೆ.

ರೈತರ ಸಾಲಕ್ಕೆ ಬ್ಯಾಂಕ್ ಗಳಿಂದ ನೋಟಿಸ್ ನೀಡಲಾಗುತ್ತಿದೆ ಎಂದು ರೈತರು ತಿಳಿಸಿದ್ದು ಈ ಬಗ್ಗೆ ಮುಖ್ಯಮಂತ್ರಿಗಳ ಬಳಿ ಚರ್ಚಿಸಲಾಗುತ್ತದೆ, ಜಿಲ್ಲಾ ಹಂತದಲ್ಲಿ ಬ್ಯಾಂಕರ್ಸ್ ಗಳ ಸಭೆ ನಡೆಸಿ



ನಿರ್ದೇಶನ ನೀಡಲು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಜಲಾಶಯದಲ್ಲಿ ನೀರು ಲಭ್ಯವಿದ್ದು ಕುಡಿಯುವ ನೀರಿಗೆ ಸಮಸ್ಯೆ ಇರುವುದಿಲ್ಲ. ಗ್ರಾಮೀಣ ಭಾಗದಲ್ಲಿ 56 ಖಾಸಗಿ ಬೋರ್ ವೆಲ್ ಗಳಿಂದ ನೀರು ಪೂರೈಕೆ ಮಾಡಲಾಗುತ್ತಿದೆ, ಇದನ್ನು ಹೊರತುಪಡಿಸಿ ಬೇರೆ ಸಮಸ್ಯೆ ಇಲ್ಲ,ಮುಂದಿನ ದಿನಗಳಲ್ಲೂ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕೆಂದರು. ನಗರ ಸ್ಥಳೀಯ ಸಂಸ್ಥೆಗಳಲ್ಲಿಯು ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ.

**ತಾಲ್ಲೂಕುವಾರು ಮಳೆ ಕೊರತೆಯ ವಿವರ:**

ಹೊಸಪೇಟೆ: 47.2 ಮಿ.ಮೀ ಮಳೆ ಶೇ 77% ಅತ್ಯಧಿಕ ಕೊರತೆ,ಹಗರಿಬೊಮ್ಮನಹಳ್ಳಿ 69.3 ಮಿ.ಮೀ ಮಳೆ 63% ಅತ್ಯಧಿಕ ಕೊರತೆ, ಹೂವಿನಹಡಗಲಿ: 67.5 ಮಿ.ಮೀ ಮಳೆ 59% ಕೊರತೆ, ಹರಪನಹಳ್ಳಿ: 91.5 ಮಿ.ಮೀ ಮಳೆ 57% ಕೊರತೆ, ಕೂಡ್ಲಿಗಿ: 83.1 ಮಿ.ಮೀ ಮಳೆ 47% ಕೊರತೆ, ಕೊಟ್ಟೂರು: 83.1 ಮಿ.ಮೀ ಮಳೆ 44% ಕೊರತೆಯಾಗಿದೆ.

**ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿ:**

ಬಿತ್ತನೆ ಹಿನ್ನಡೆ ಒಟ್ಟು 2,97,633 ಹೆಕ್ಟೇರ್ ಬಿತ್ತನೆ ಗುರಿಯಲ್ಲಿ ಕೇವಲ 1,93,670 ಹೆಕ್ಟೇರ್ (ಶೇ. 65.07) ಮಾತ್ರ ಬಿತ್ತನೆಯಾಗಿದೆ. ಮಳೆಯಾಶ್ರಿತ ಪ್ರದೇಶದ 1,43,063 ಹೆಕ್ಟೇರ್ ಪೈಕಿ 1,25,717 ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ (ಶೇ. 87 ಕ್ಕೂ ಹೆಚ್ಚು) ಬೆಳೆಗಳು ತೇವಾಂಶ ಕೊರತೆಯಿಂದ ಬಾಡಿ ಒಣಗುತ್ತಿವೆ.

**ಬೆಳೆಗಳ ಸ್ಥಿತಿ:** ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ ಹಾಗೂ ಸಿರಿಧಾನ್ಯ ಬೆಳೆಗಳು ಶೇ. 40 ರಿಂದ ಶೇ.90 ರಷ್ಟು ಒಣಗಿ ಕುಂಠಿತಗೊಂಡಿವೆ.

**ತೋಟಗಾರಿಕೆ ಬೆಳೆಗಳು:** ಈರುಳ್ಳಿ, ಟೊಮಾಟೊ ಮತ್ತು ಮೆಣಸಿನಕಾಯಿ ಬೆಳೆಗಳಲ್ಲಿ ಸುಮಾರು 1,289 ಹೆಕ್ಟೇರ್ ಪ್ರದೇಶ ತೀವ್ರ ಹಾನಿಗೊಳಗಾಗಿದೆ.

ತುಂಗಭದ್ರಾ ಜಲಾಶಯ ಹಾಗೂ ಕುಡಿಯುವ ನೀರು: ತುಂಗಭದ್ರಾ ಜಲಾಶಯ ಒಟ್ಟು 105.78 ಟಿಎಂಸಿ ಸಾಮರ್ಥ್ಯದಲ್ಲಿ ಪ್ರಸ್ತುತ 64.81 ಟಿಎಂಸಿ ನೀರು ಲಭ್ಯವಿದೆ.

ರಾಷ್ಟ್ರೀಯ ಮತ್ತು ರಾಜ್ಯ ಜಲನೀತಿಯನ್ವಯ ಜಲಾಶಯದಲ್ಲಿರುವ ನೀರನ್ನು ಕೇವಲ ಕುಡಿಯುವ ಉದ್ದೇಶಕ್ಕೆ ಮಾತ್ರ ಪ್ರಥಮ ಆದ್ಯತೆಯ ಮೇಲೆ ಕಾಯ್ದಿರಿಸಲಾಗಿದೆ. ರೈತರು ಕೃಷಿಗಾಗಿ ಈ ನೀರನ್ನು ನಂಬದೆ ಪರ್ಯಾಯ ಬೆಳೆಗಳನ್ನು ಆಶ್ರಯಿಸಲು ರೈತರಿಗೆ ಮನವರಿಕೆ ಮಾಡಲು ತಿಳಿಸಲಾಯಿತು.

**ಕುಡಿಯುವ ನೀರು:** ಗ್ರಾಮೀಣ ಪ್ರದೇಶಗಳಲ್ಲಿ 32 ಗ್ರಾಮಗಳಿಗೆ 44 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಲಾಗುತ್ತಿದೆ.

**ಮೇವು ಲಭ್ಯತೆ ಮತ್ತು ಅನುದಾನ:**

**ಮೇವು ಸಂಗ್ರಹ:** ಜಿಲ್ಲೆಯಲ್ಲಿ ಪ್ರಸ್ತುತ 7,61,571 ಟನ್ ಮೇವು ಲಭ್ಯವಿದ್ದು, ಮುಂದಿನ 50 ವಾರಗಳಿಗೆ ಜಾನುವಾರುಗಳಿಗೆ ಮೇವಿನ ಅಭಾವವಿರುವುದಿಲ್ಲ. ಬರ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್ ಖಾತೆಗಳಲ್ಲಿ ಒಟ್ಟು □916.09 ಲಕ್ಷ ಅನುದಾನ ಲಭ್ಯವಿದೆ.

# ಮಠಕ್ಕೆ ಸಚಿವ ಡಾ. ವಿಜಯಾನಂದ ಭೇಟಿ

• ಮಲ್ಲಮ್ಮ ನುಡಿ ವಾರ್ತೆ ಸಿದ್ದನಕೊಳ್ಳ

ರಾಜ್ಯ ಸಚಿವರಾದ ಡಾ. ವಿಜಯಾನಂದ ಕಾಶಪ್ಪನವರು ಸಿದ್ದನಕೊಳ್ಳದ ಶ್ರೀಮಠಕ್ಕೆ ಭೇಟಿ ನೀಡಿ ಪೂಜ್ಯ ಶ್ರೀ ಡಾ. ಶಿವಕುಮಾರ ಸ್ವಾಮೀಜಿಯವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಬಳಿಕ ಶ್ರೀಮಠದಲ್ಲಿಯೇ ಪ್ರಸಾದ ಸೇವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಡಾ. ವಿಜಯಾನಂದ ಕಾಶಪ್ಪನವರು, "ಸಿದ್ದಪ್ಪಜ್ಜನ ಆಶೀರ್ವಾದದಿಂದಲೇ ನಾನು ಸಚಿವನಾಗಿದ್ದೇನೆ" ಎಂದು ಭಕ್ತಿಭಾವದಿಂದ ಹೇಳಿದರು.

ಸಚಿವರಿಗೆ ಆಶೀರ್ವಚನ ನೀಡಿದ ಪೂಜ್ಯ ಶ್ರೀ ಡಾ. ಶಿವಕುಮಾರ ಸ್ವಾಮೀಜಿಯವರು, "ಜನಪರ ಕೆಲಸಗಳನ್ನು ಮಾಡುತ್ತಾ ಜನರ ಸೇವೆ ಮಾಡು. ಮುಂದಿನ ದಿನಗಳಲ್ಲಿ ರಾಜಕೀಯದಲ್ಲಿ ಇದಕ್ಕಿಂತಲೂ ದೊಡ್ಡ ಹುದ್ದೆ ನಿನಗೆ ದೊರೆಯಲಿದೆ" ಎಂದು ಆಶೀರ್ವದಿಸಿದರು.



ಈ ಸಂದರ್ಭದಲ್ಲಿ ಸಚಿವರ ತಾಯಿ ಹಾಗೂ ಮಾಜಿ ಶಾಸಕಿ ಗೌರಮ್ಮ ಕಾಶಪ್ಪನವರ, ದೇವಾನಂದ ಕಾಶಪ್ಪನವರ, ಬಸವರಾಜ ಶಿರೂರು, ಮಹಾಂತೇಶ ಗದ್ದಿನಕೇರಿ ಸೇರಿದಂತೆ ಮಠದ ಭಕ್ತರು, ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

# ಶಾಸಕಾಂಗ–ಕಾರ್ಯಾಂಗ ಒಟ್ಟಾಗಿ ಕೆಲಸ ಮಾಡಿದಾಗ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಬಹುದು

• ಮಲ್ಲಮ್ಮ ನುಡಿ ವಾರ್ತೆ ಹಳಿಯಾಳ

ಶಾಸಕಾಂಗ ಮತ್ತು ಕಾರ್ಯಾಂಗ ಒಟ್ಟಾಗಿ ಕೂಡಿ ಕೆಲಸ ಮಾಡಿದಾಗ ಮಾತ್ರ ಸಾರ್ವಜನಿಕರ ಕುಂದು–ಕೊರತೆಗೆ ಸ್ಪಂದಿಸಲು ಸಾಧ್ಯ ಎಂದು ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಲಕ್ಷ್ಮಣ ಸವದಿ ಅವರು ಹೇಳಿದರು. ಅವರು ಮಂಗಳವಾರ ಹಳಿಯಾಳದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಚಿವ ಸಂಪುಟ ರಚನೆ ನಂತರ ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಆಯಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸ್ಥಳೀಯವಾಗಿ ಪರಿಶೀಲನ ಸಭೆ ನಡೆಸಿ ಮಾಹಿತಿಯನ್ನು ಕ್ರೂಢೀಕರಿಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ. ಅದರಂತೆ ನಾವು ಪ್ರತಿಯೊಂದು ವಿಧಾನಸಭಾ ಕ್ಷೇತ್ರವಾರು ಸಭೆ ನಡೆಸಿ, ಇಲ್ಲಿನ ಅತಿವೃಷ್ಟಿ–ಅನಾವೃಷ್ಟಿ ಬಗ್ಗೆ ಇಲಾಖೆಗಳೊಂದಿಗೆ ಚರ್ಚಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಸಚಿವರು ತಿಳಿಸಿದರು. ಈ ಪ್ರಗತಿ ಪರಿಶೀಲನಾ



ಸಭೆಯಲ್ಲಿ ಭಾಗವಹಿಸಿದ್ದ ಮಾನ್ಯ ಶಾಸಕರಾದ ಆರ್.ವಿ. ದೇಶಪಾಂಡೆ ಅವರು ಮಾತನಾಡಿ, ಸರ್ಕಾರ ಮಟ್ಟದಲ್ಲಿ ಕೆಲಸ ಮಾಡಲು ನಮ್ಮ ಕ್ಷೇತ್ರಕ್ಕೆ ಬಂದು ಸಭೆಯನ್ನು ಯಶಸ್ವಿಗೊಳಿಸಿದ್ದಕ್ಕೆ ಮೊದಲನೆಯದಾಗಿ ನಮ್ಮ ಕ್ಷೇತ್ರದ ಪರವಾಗಿ ತಮ್ಮ ಕಾರ್ಯ ಪ್ರಗತಿಯಾಗಲಿ ಎಂದು ಸಚಿವರಿಗೆ ಶುಭ ಹಾರೈಸಿದರು. ಈ ಸಭೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿ ಪ್ರಿಯಾ,ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಡಾ. ದಿಲೀಶ್ ಸಶಿ,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿಫನ್ ಎನ್, ಶಿರಸಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಭೀಮಣ್ಣ ನಾಯಕ್, ಪ್ರಶಾಂತ್ ಕುಮಾರ್ ಕೆ.ಸಿ ತಹಸಿಲ್ದಾರ್ ಫಿರೋಜ್ ಷಾ ಸೋಮನಕಟ್ಟಿ ಎಲ್ಲಾ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಾನವೀಯತೆ ಮೆರೆದ ಆಂಬುಲೆನ್ಸ್ ಚಾಲಕರು..!

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಪಿ.ಕೆ. ಹಳ್ಳಿ ನಿವಾಸಿ ದಂಪತಿಗಳ 9 ದಿನದ ನವಜಾತ ಶಿಶು ಜನನದ ನಂತರ ಹೃದಯ ಸಂಬಂಧಿ ಕಾಯಿಲೆ ಮತ್ತು ಶ್ವಾಸಕೋಶ ತೊಂದರೆಯಿಂದ ಬಳಲುತ್ತಿದ್ದ ಶಿಶುವನ್ನು ಕಳೆದ ಐದು ದಿನಗಳ ಹಿಂದೆ, ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಹೃದಯ ಸಂಬಂಧಿ ಚಿಕಿತ್ಸೆ ಹಾಗೂ ಶ್ವಾಸಕೋಶ ಚಿಕಿತ್ಸೆ ಪಡೆದ ನಂತರ ನವಜಾತ ಶಿಶುವನ್ನು ಮರಳಿ ಬೆಂಗಳೂರಿನಿಂದ ಹೊಸಪೇಟೆಗೆ ಖಾಸಗಿ ಆಂಬುಲೆನ್ಸ್ ಚಾಲಕರು ಕೇವಲ 5 ತಾಸಿನಲ್ಲಿ ಹೊಸಪೇಟೆಯ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಿರುವುದು ಶ್ಲಾಘನೀಯ.

ಬೆಂಗಳೂರಿನ ನಾರಾಯಣ ಹೃದಯಾಲಯದಿಂದ ಹೊಸಪೇಟೆಯ ಮಾರ್ಗ ಮಧ್ಯ ಬರುವ ಎಲ್ಲಾ ತಾಲೂಕು ಹಾಗೂ ಜಿಲ್ಲೆಯ ಆಂಬುಲೆನ್ಸ್ ಚಾಲಕರು ತಮ್ಮ ವಾಹನಗಳೊಂದಿಗೆ ನವಜಾತ ಶಿಶುವನ್ನು



ಸಾಗಿಸುತ್ತಿದ್ದ ಆಂಬುಲೆನ್ಸ್ ವಾಹನಕ್ಕೆ ಎಸ್ಕಾರ್ಟ್ ನೀಡಿದರು ಮತ್ತು ಸ್ಥಳೀಯ ಪೊಲೀಸರು ಸಹಕಾರದಿಂದ ಜೀರೋ ಟ್ರಾಫಿಕ್ ಮುಖಾಂತರ ಮಗುವನ್ನು ಕಡಿಮೆ ಅವಧಿಯಲ್ಲಿ ಆಸ್ಪತ್ರೆಗೆ ಸ್ಥಳಾಂತರಿಸಿರುವುದು ಮತ್ತು ಈ ಸಂದರ್ಭದಲ್ಲಿ ಅಖಖಿಗ ನ ವಿಜಯನಗರ ಜಿಲ್ಲೆ ಆಂಬುಲೆನ್ಸ್ ಚಾಲಕರ ಸಂಘದ ನೇತೃತ್ವದಲ್ಲಿ ಹಗರಿಬೊಮ್ಮನಹಳ್ಳಿಯ 2 ಆಂಬುಲೆನ್ಸ್ ವಾಹನ ಮರಿಯಮ್ಮನಹಳ್ಳಿಯ 1 ಆಂಬುಲೆನ್ಸ್ ವಾಹನ ಹೊಸಪೇಟೆಯ ಒಂದು ಆಂಬುಲೆನ್ಸ್ ವಾಹನ ಕೊಪ್ಪಳದ ಮೂರು ಆಂಬುಲೆನ್ಸ್ ವಾಹನ ಕೂಡ್ಲಿಗಿಯಿಂದ ಎಸ್ಕಾರ್ಟ್ ನೀಡಿ ಜೀರೋ ಟ್ರಾಫಿಕ್ ಮುಖಾಂತರ ಮಗುವನ್ನು ಹೊತ್ತು ತಂದ ಆಂಬುಲೆನ್ಸ್ ಸುಗಮ ಸಂಚಾರಕ್ಕೆ ಸಹಕಾರ ನೀಡಿದರು. ಇದೇ ಸಂದರ್ಭದಲ್ಲಿ ವಿಷಯ ತಿಳಿದ ಹೊಸಪೇಟೆಯ ಟ್ರಾಫಿಕ್ ಪೊಲೀಸ್ ಇನ್ಸ್ಪೆಕ್ಟರ್ ಹುಲುಗಪ್ಪ ರವರು ಹೊಸಪೇಟೆ ನಗರದಲ್ಲಿ ಆಂಬುಲೆನ್ಸ್ ಸಾಗುವ ಮಾರ್ಗ ಮಧ್ಯೆ ಸುಗಮ ಸಂಚಾರಕ್ಕೆ ಅನುಕೂಲವಾಗಲು ಟ್ರಾಫಿಕ್ ಪೊಲೀಸರನ್ನು ನಿಯೋಜಿಸಿ ಸಹಕಾರ ನೀಡಿದರು. ಹಾಗೂ ಹೊಸಪೇಟೆಯ ಕರ್ನಾಟಕ ರಾಜ್ಯ ಟ್ಯಾಕ್ಸಿ ಹಾಗೂ ಮ್ಯಾಕ್ಸಿ ಕ್ಯಾಬ್ ಚಾಲಕರ ಸಂಘದ ರಾಜ್ಯ ಸಂಚಾಲಕರಾದ ಕೆ.ಎಂ.ಸಂತೋಷ್ ಕುಮಾರ್ ರವರ ಮಾರ್ಗದರ್ಶನದಂತೆ ವಿಕ್ರಮ್,ಹವಲ್ದಾರ್ ಸಾಗರ್ ಮತ್ತು ಇತರೆ ಮುಖಂಡರುಗಳು ಪ್ರಮುಖ ವೃತ್ತಗಳಲ್ಲಿ ನಿಂತು ಟ್ರಾಫಿಕ್ ಅಡಚಣೆ ಆಗದಂತೆ ನೋಡಿಕೊಂಡರು ಒಟ್ಟಾರೆ ನವಜಾತ ಶಿಶುವನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಯಿಂದ ಹೊಸಪೇಟೆಯ ಖಾಸಗಿ ಆಸ್ಪತ್ರೆಯವರೆಗೆ ಸ್ಥಳಾಂತರಿಸಲು ಸಹಕರಿಸಿದ ಎಲ್ಲಾ ಚಾಲಕರಗೂ ತುಂಬು ಹೃದಯದ ಧನ್ಯವಾದಗಳು ಅರ್ಪಿಸಿದ ಮಗುವಿನ ಕುಟುಂಬಸ್ಥರು.

ಮಾನವೀಯತೆ ಮೆರೆದ ಆಂಬುಲೆನ್ಸ್ ಚಾಲಕರು ಚಾಲಕರು ಹಾಗೂ ಸಹಕಾರ ನೀಡಿದ ಪೊಲೀಸ್ ಇಲಾಖೆಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

# ಸಹೃದಯಿ ಸಹಕಾರಿಗೆ ಸಹಕಾರಿ ರತ್ನ ಪ್ರಶಸ್ತಿ ಲಭಿಸಲಿ



ಸಹಾಯ–ಸಹಕಾರ
● ಡಾ. ಯಂಕನಗೌಡ ಪಾಟೀಲ್
ಕೆಂಭಾವಿ

ಒಟ್ಟಿಗೆ ಸೇರುವುದು, ಒಟ್ಟಿಗೆ ಇರುವುದು, ಒಟ್ಟಾಗಿ ಕೆಲಸ ಮಾಡುವುದು, ಒಲಿಯುವುದು ತಾನೇ ಯಶಸ್ಸು" ಎಂಬಂತೆ ಪರಸ್ಪರ ಸಹಾಯ–ಸಹಕಾರ, ಸೌಹಾರ್ದತೆ, ಸಹಬಾಳ್ವೆ ಮತ್ತು ಸಮನ್ವಯದ ಜೀವನವೇ ಸ್ವರ್ಗ ಸುಖ ಎಂಬ ಸಹಕಾರಿ ತತ್ವದ ಧ್ಯೇಯೋದ್ದೇಶದೊಂದಿಗೆ, ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳಿ ನಿಯಮಿತ, ಬೆಂಗಳೂರಿನಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಪ್ರಾದೇಶಿಕ ವ್ಯವಸ್ಥಾಪಕರಾಗಿ ವಯೋನಿವೃತ್ತಿಯಾದ ನಂತರ, ಕಲಬುರ್ಗಿ ಹಾಗೂ ಯಾದಗಿರಿ ಜಿಲ್ಲೆಯಾದ್ಯಂತ ಅನೇಕ ಸಹಕಾರಿ ಸಂಘಗಳನ್ನು ಹುಟ್ಟುಹಾಕುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿ ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಹಿರಿಯ ಮುತ್ಸದ್ದಿ, ಎಲೆಮರೆಯ ಕಾಯಿಯಂತೆ ಅದೆಷ್ಟೋ ನಾಯಕರನ್ನು ಸಹಕಾರಿ ಕ್ಷೇತ್ರಕ್ಕೆ ಪರಿಚಯಿಸಿದ ಹೆಗ್ಗಳಿಕೆ ಹಿರಿಯ ಸಹಕಾರಿ ಶ್ರೀ ವೈ. ಟಿ. ಪಾಟೀಲರಿಗೆ ಸಲ್ಲುತ್ತದೆ.

ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಯಡಿಯಾಪುರ ಗ್ರಾಮದಲ್ಲಿ 1948 ಆಗಸ್ಟ್ 15 ರಂದು ಜನಿಸಿದ ಯಮನಪ್ಪಗೌಡರ (ತಂದೆ ತಮ್ಮಣ್ಣಗೌಡ ಪಾಟೀಲರು) ಪೂರ್ವ ಪ್ರಾಥಮಿಕ ಶಿಕ್ಷಣ ಸ್ವಗ್ರಾಮದಲ್ಲಿ, ಹಿರಿಯ ಪ್ರಾಥಮಿಕ ಶಿಕ್ಷಣ ಮಲ್ಲಾ (ಬಿ) ಗ್ರಾಮದಲ್ಲಿ, ಪ್ರೌಢ ಶಿಕ್ಷಣ ಸರಕಾರಿ ಬಾಲಕರ ಹೈಸ್ಕೂಲ್ ಕೆಂಭಾವಿಯಲ್ಲಿ ಹಾಗೂ ಗುಲ್ಬರ್ಗಾದ



ಶ್ರೀ ಶರಣಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಬಿ.ಎಸ್ಸಿ. ಪದವಿಯನ್ನು ಪೂರೈಸಿಕೊಂಡರು. ಪಾಟೀಲರನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಹಿರಿಯ ಸಹಾಯಕರಾಗಿ ವೃತ್ತಿಜೀವನ ಆರಂಭಿಸಲು ನೇಮಕಾತಿ ಆದೇಶ ಕೊಡಿಸಿದ ಮಾಜಿ ಮಂತ್ರಿ ದಿವಂಗತ ಬಾಪುಗೌಡ ದರ್ಶನಾಪೂರ ಅವರ ಕೊಡುಗೆ ಅಪಾರವಾದದ್ದು.

1973 ರಿಂದ 2006 ರವರೆಗೆ ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳಿ ನಿ., ಬೆಂಗಳೂರು ಇದರಲ್ಲಿ ವಿವಿಧ ಹುದ್ದೆಗಳಲ್ಲಿ 33 ವರ್ಷ ಸೇವೆ ಸಲ್ಲಿಸಿದ ವೈ. ಟಿ. ಪಾಟೀಲರು ಪ್ರಾದೇಶಿಕ ವ್ಯವಸ್ಥಾಪಕರಾಗಿ ನಿವೃತ್ತಿಯ ನಂತರವೂ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿಯಾಗಿ ಮತ್ತು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿಯ ಸಂಸ್ಥಾಪಕ ನಿರ್ದೇಶಕರಾಗಿ ಸಂಘದ ಶ್ರೇಯೋಭಿವೃದ್ಧಿಗೆ ಸದಾ ಶ್ರಮಿಸುತ್ತಿರುವ ಸಹೃದಯಿ ಸಹಕಾರಿಯಾಗಿದ್ದಾರೆ.

ಸಹಕಾರಿ ಕ್ಷೇತ್ರದ ಜೊತೆಜೊತೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಒಡನಾಟ ಹೊಂದಿರುವ ವೈ. ಟಿ. ಪಾಟೀಲರ ವಯಸ್ಸು 78 ಆದರೂ ಅವರಲ್ಲಿರುವ ಅದಮ್ಯ ಉತ್ಸಾಹ, ಹುರುಪು ಹಾಗೂ ಹುಮ್ಮಸ್ಸು 28 ರ ಯುವಕರನ್ನು ನಾಚಿಸುವಂತಿದೆ. ಪ್ರತಿವರ್ಷ ತಮ್ಮ ಹುಟ್ಟುಹಬ್ಬದಂದು (ಆಗಸ್ಟ್ 15) ತಾವು ಕಲಿತ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್, ಪೆನ್ ವಿತರಿಸುತ್ತಾ ಸರಳತೆಯ ಬದುಕು ನಡೆಸುತ್ತಿದ್ದಾರೆ. ನಾವೆಷ್ಟು ಖುಷಿಯಾಗಿದ್ದೇವೆ ಎಂಬುದು ಮುಖ್ಯವಲ್ಲ, ನಮ್ಮಿಂದ ಎಷ್ಟು ಜನ ಸಂತೋಷದಿಂದ ಇದ್ದಾರೆ ಎಂಬುದರ ಮೇಲೆ ಜೀವನದ ಸಾರ್ಥಕತೆ ನಿರ್ಧಾರವಾಗುತ್ತದೆ. ಸಾಧ್ಯವಾದಷ್ಟು ಎಲ್ಲರನ್ನೂ ಪ್ರೀತಿಸೋಣ, ಎಲ್ಲರೊಂದಿಗೆ ಖುಷಿ–ಖುಷಿಯಾಗಿರಲು ಪ್ರಯತ್ನಿಸೋಣ, ಸಹಕಾರಿ ರಂಗದ ಯಶಸ್ವಿಗೆ ಸರ್ವರೂ ಸಹಕಾರ ಅಗತ್ಯ" ಎಂಬ ಮನೋಭಾವನೆಯೊಂದಿಗೆ ಸಹಕಾರಿ ರಂಗದ ಪ್ರತಿಯೊಂದು ಕಾರ್ಯ–ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ವೈ. ಟಿ. ಪಾಟೀಲರ ಸರಳತೆಯ ಬದುಕು ತೆರೆದಿಟ್ಟ ಪುಸ್ತಕವಿದ್ದಂತೆ.

ಶಾಹಾಪುರ ಮತಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪೂರ ಹಾಗೂ ಸುರಪುರ ಮತಕ್ಷೇತ್ರದ ಶಾಸಕರಾದ ರಾಜಾ ವೇಣುಗೋಪಾಲ ನಾಯಕ ಈರ್ವರ ಒಡನಾಡಿಯಾಗಿರುವ ವೈ. ಟಿ. ಪಾಟೀಲ್ ಯಾವತ್ತೂ ಯಾರೊಂದಿಗೂ ದ್ವೇಷ ಸಾಧಿಸದೆ, ವಿವಾದಗಳಿಂದ ದೂರವಿದ್ದು ಸಹಕಾರವೇ ಉಸಿರಾಗಿಸಿಕೊಂಡು ಬೀದರನಿಂದ ಬೆಂಗಳೂರುವರೆಗೆ ಹೆಸರುವಾಸಿಯಾದ ಹಿರಿಯ ಮುಖಂಡರ ಸೇವೆಯನ್ನು ಗುರುತಿಸಿ ಈ ಬಾರಿಯಾದರೂ ಕರ್ನಾಟಕ ಸರ್ಕಾರವು "ಸಹಕಾರಿ ರತ್ನ" ಪ್ರಶಸ್ತಿಯನ್ನು ನೀಡಿ ಗೌರವಿಸಲಿ ಎಂಬ ಮಾತು ಎಲ್ಲೆಡೆ ಕೇಳಿಬರುತ್ತಿದೆ.

**ವೈ. ಟಿ. ಪಾಟೀಲರ ಪ್ರಮುಖ ಸೇವೆ:** ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಯಾಳಗಿ): ನಿರ್ದೇಶಕರಾಗಿ (2009–2024–ಸುಮಾರು 15 ವರ್ಷ), ಇಫ್ಕೋ (IFFCO, ನವದೆಹಲಿ): ನಿರ್ದೇಶಕರಾಗಿ (2013–2023–ಸುಮಾರು 10 ವರ್ಷ). ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ: ನಿರ್ದೇಶಕರಾಗಿ (2009□2014 – ಸುಮಾರು 5 ವರ್ಷ). ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ (ಬೆಂಗಳೂರು): ನಿರ್ದೇಶಕರಾಗಿ (2011–2022–ಸುಮಾರು 11 ವರ್ಷ), ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳು: ನಿರ್ದೇಶಕರಾಗಿ (5 ವರ್ಷ), ಕಾಮಧೇನು ಸೌಹಾರ್ದ ಸಹಕಾರಿ ಸಂಘ: ಸಂಸ್ಥಾಪಕ ನಿರ್ದೇಶಕರಾಗಿ (2005 ರಿಂದ ಪ್ರಸ್ತುತ), ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ: ನಿರ್ದೇಶಕರಾಗಿ (2007 ರಿಂದ ಪ್ರಸ್ತುತ), ಶ್ರೀ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ: ವೃತ್ತಿ ಪರಿಣಿತ ನಿರ್ದೇಶಕರಾಗಿ ಸೇವೆ.

## ತಂದೆಯ ಹಾದಿಯಲ್ಲೇ ಸಾಗುತ್ತಿರುವ ಮಾಜಿ ಸಚಿವ ರಾಜಶೇಖರ ಪಾಟೀಲ



**ಹುಮನಾಬಾದ್:** ಕ್ಷೇತ್ರದ ರಾಜಕೀಯದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ ಅವರು ಜನಸೇವೆಗೆ ಬದ್ಧರಾಗಿರುವ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ತಮ್ಮ ತಂದೆ ದಿವಂಗತ ಬಸವರಾಜ ಪಾಟೀಲ ಅವರ ಜನಪರ ಮೌಲ್ಯಗಳು, ಅಭಿವೃದ್ಧಿ ದೃಷ್ಟಿಕೋನ ಮತ್ತು ಸೇವಾ ಮನೋಭಾವವನ್ನು ಮುಂದುವರಿಸಿಕೊಂಡು ಸಾಗುತ್ತಿರುವ ನಾಯಕ ಎಂಬ ಅಭಿಪ್ರಾಯವನ್ನು ಅವರ ಬೆಂಬಲಿಗರು ವ್ಯಕ್ತಪಡಿಸುತ್ತಾರೆ. ದಿವಂಗತ ಬಸವರಾಜ ಪಾಟೀಲ ಅವರು ಕ್ಷೇತ್ರದ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿ ಜನರ ವಿಶ್ವಾಸ ಗಳಿಸಿದ್ದರು. ಅದೇ ಮಾರ್ಗದಲ್ಲಿ ರಾಜಶೇಖರ ಪಾಟೀಲ ಅವರು ರೈತರು, ಯುವಕರು, ಮಹಿಳೆಯರು ಮತ್ತು ಬಡವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಬೆಂಬಲಿಗರು ಹೇಳುತ್ತಾರೆ.

ರಾಜಕೀಯದಲ್ಲಿ ಅಧಿಕಾರಕ್ಕಿಂತ ಜನರ ವಿಶ್ವಾಸವೇ ದೊಡ್ಡ ಶಕ್ತಿ ಎಂಬ ನಂಬಿಕೆಯನ್ನು ಹೊಂದಿರುವ ರಾಜಶೇಖರ ಪಾಟೀಲ ಅವರು ಕ್ಷೇತ್ರದ ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅವರ ಸಮಸ್ಯೆಗಳಿಗೆ ಸ್ಪಂದಿಸಲು ಪ್ರಯತ್ನಿಸುತ್ತಿದ್ದಾರೆ. ತಂದೆಯ ಆದರ್ಶಗಳು, ಸರಳತೆ ಮತ್ತು ಜನಸೇವೆಯ ಪರಂಪರೆಯನ್ನು ಉಳಿಸಿಕೊಂಡು ಸಾಗುವ ನಾಯಕನಾಗಿ ಅವರು ಗುರುತಿಸಿಕೊಳ್ಳುತ್ತಿದ್ದಾರೆ ಎಂದು ಅವರ ಬೆಂಬಲಿಗರು ಅಭಿಪ್ರಾಯಪಡುತ್ತಾರೆ.

ತಂದೆಯ ಆದರ್ಶಗಳನ್ನು ಕಾರ್ಯರೂಪಕ್ಕೆ ತಂದು ಜನರ ನಂಬಿಕೆಯನ್ನು ಉಳಿಸಿಕೊಳ್ಳುವ ನಾಯಕತ್ವವೇ ನಿಜವಾದ ನಾಯಕತ್ವ. ಆ ದಾರಿಯಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ ಅವರ ರಾಜಕೀಯ ಪಯಣ ಮುಂದುವರಿಯಲಿ ಎಂಬುದು ಅವರ ಅಭಿಮಾನಿಗಳ ಆಶಯವಾಗಿದೆ.

## ಕ್ಷೇತ್ರದ ದೂರದೃಷ್ಟಿಯ ನಾಯಕರಾಗಿದ್ದ ದಿವಂಗತ ಬಸವರಾಜ ಪಾಟೀಲ



**ಹುಮನಾಬಾದ್:** ಕ್ಷೇತ್ರದ ರಾಜಕೀಯ ಇತಿಹಾಸದಲ್ಲಿ ಅಚ್ಚಳಿಯದ ಹೆಸರನ್ನು ಮೂಡಿಸಿದ ನಾಯಕರಲ್ಲಿ ದಿವಂಗತ ಬಸವರಾಜ ಪಾಟೀಲ ಪ್ರಮುಖರು. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಗುಣ, ಅಭಿವೃದ್ಧಿಯ ಬಗ್ಗೆ ದೂರದೃಷ್ಟಿ ಮತ್ತು ಕ್ಷೇತ್ರದ ಸಮಗ್ರ ಪ್ರಗತಿಗಾಗಿ ಶ್ರಮಿಸಿದ ನಾಯಕನಾಗಿ ಅವರು ಜನಮಾನಸದಲ್ಲಿ ಇಂದಿಗೂ ನೆನಪಾಗುತ್ತಾರೆ.

ಬಸವರಾಜ ಪಾಟೀಲ ಅವರು ಅಧಿಕಾರವನ್ನು ವೈಯಕ್ತಿಕ ಪ್ರತಿಷ್ಠೆಗಾಗಿ ಬಳಸದೆ, ಜನಸೇವೆಯ ಸಾಧನವಾಗಿ ಕಂಡವರು. ಗ್ರಾಮೀಣ ರಸ್ತೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ, ನೀರಾವರಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿ ಹಲವಾರು ಯೋಜನೆಗಳಿಗೆ ಚಾಲನೆ ನೀಡಿದ್ದರು. ಅವರ ಆಡಳಿತದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಹೊಸ ದಿಕ್ಕು ದೊರೆತಿದೆ ಎಂಬುದು ಅನೇಕ ಜನರ ಅಭಿಪ್ರಾಯ. ರೈತರು, ಕಾರ್ಮಿಕರು, ಯುವಕರು, ಮಹಿಳೆಯರು ಹಾಗೂ ಸಮಾಜದ ಎಲ್ಲ ವರ್ಗದವರೊಂದಿಗೆ ಆತ್ಮೀಯ ಬಾಂಧವ್ಯ ಬೆಳೆಸಿಕೊಂಡಿದ್ದ ಅವರು, ಜನರ ಕಷ್ಟಗಳಿಗೆ ಸದಾ ಸ್ಪಂದಿಸುತ್ತಿದ್ದರು. ಜನರ ವಿಶ್ವಾಸ ಗಳಿಸಿದ ಜನನಾಯಕನಾಗಿ ಅವರು ಗುರುತಿಸಿಕೊಂಡಿದ್ದರು.

ದೂರದೃಷ್ಟಿಯ ರಾಜಕಾರಣಿಯಾಗಿದ್ದ ಬಸವರಾಜ ಪಾಟೀಲ ಅವರು ತಾತ್ಕಾಲಿಕ ಲಾಭಕ್ಕಿಂತ ಕ್ಷೇತ್ರದ ಭವಿಷ್ಯದ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಿದರು. ಅವರ ಅಭಿವೃದ್ಧಿ ಪರ ಚಿಂತನೆ ಮತ್ತು ಜನಪರ ಆಡಳಿತ ಇಂದಿಗೂ ಅನೇಕರಿಗೆ ಮಾದರಿಯಾಗಿದೆ.

ದಿವಂಗತ ಬಸವರಾಜ ಪಾಟೀಲ ಅವರ ಆದರ್ಶಗಳು, ಜನಸೇವೆಯ ಮನೋಭಾವ ಹಾಗೂ ಅಭಿವೃದ್ಧಿಯ ಕನಸುಗಳು ಮುಂದಿನ ತಲೆಮಾರಿನ ನಾಯಕರಿಗೆ ಸ್ಫೂರ್ತಿಯಾಗಲಿ. ಹುಮನಾಬಾದ್ ಕ್ಷೇತ್ರದ ಅಭಿವೃದ್ಧಿಯ ಇತಿಹಾಸದಲ್ಲಿ ಅವರ ಕೊಡುಗೆ ಸದಾ ಸ್ಮರಣೀಯವಾಗಿದೆ.

## ದಿ. ಬಸವರಾಜ ಪಾಟೀಲ ಪುಣ್ಯಸ್ಮರಣೆ

**ಹುಮನಾಬಾದ್:** ಹಿರಿಯ ರಾಜಕಾರಣಿ ಹಾಗೂ ಮಾಜಿ ಸಚಿವರಾದ ದಿ. ಬಸವರಾಜ ಪಾಟೀಲ ಅವರ ಪುಣ್ಯಸ್ಮರಣೆ ಇಂದು ನಡೆಯಲಿದೆ. ದಿನಾಂಕ 9–8–2026 ರಂದು ರಾತ್ರಿ ಭಜನೆ ಕೀರ್ತನೆ ನಡೆಯಲಿದ್ದು ಮರುದಿನ ಅಂದರೆ ಅಗಸ್ಟ್ 10 ರಂದು ಬೆಳಗ್ಗೆ 9 ಕ್ಕೆ ಸಮಾಧಿಗೆ ತೆರಳಿ ಪೂಜೆ ಕಾರ್ಯಕ್ರಮ ನಡೆಸಿ ನಮತರ ವಿವಿಧ ಕಾರ್ಯಕ್ರಮ ನಡೆಯಲಿವೆ. ಕಾರ್ಯಕ್ರಮ ನಡೆಯುವ ಸ್ಥಳ, ಶ್ರೀ ವೀರಭದ್ರೇಶ್ವರ ದೇವಸ್ಥಾನ ಹತ್ತಿರ ದಿ.ಬಸವರಾಜ ಪಾಟೀಲ ಕಲ್ಯಾಣ ಮಂಟಪದಲ್ಲಿ ಬೆಳಗ್ಗೆ 11 ಗಂಟೆಗೆ, ನಡೆಲಿದೆ.

ಹುಮನಾಬಾದ್ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಹಾಗೂ ಜನಸೇವೆಗೆ ತಮ್ಮದೇ ಆದ ಕೊಡುಗೆ ನೀಡಿದ್ದ ದಿ. ಬಸವರಾಜ ಪಾಟೀಲ ಅವರನ್ನು ಅವರ ಪುಣ್ಯಸ್ಮರಣೆಯಂದು ಅಭಿಮಾನಿಗಳು, ಹಿತೈಷಿಗಳು ಹಾಗೂ ಕಾರ್ಯಕರ್ತರು ಸ್ಮರಿಸಲಿದ್ದಾರೆ.

ಸರಳತೆ, ಸಜ್ಜನಿಕೆ ಹಾಗೂ ಜನಪರ ಕಾಳಜಿಗೆ ಹೆಸರಾಗಿದ್ದ ಅವರ ಸೇವಾ ಕಾರ್ಯಗಳು ಇಂದಿಗೂ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಅವರ ಆದರ್ಶ ಹಾಗೂ ಜನಸೇವೆಯ ಮಾರ್ಗವನ್ನು ಮುಂದುವರಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಅಭಿಮಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಪುಣ್ಯಸ್ಮರಣೆಯ ಅಂಗವಾಗಿ ವಿವಿಧೆಡೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮಗಳು ನಡೆಯಲಿವೆ.

## ತಾತನ ಹಾದಿಯಲ್ಲಿ ಮೊಮ್ಮಕ್ಕಳು

**ಹುಮನಾಬಾದ್:** ಜನಸೇವೆ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ ತಾತನ ಆದರ್ಶ ಮತ್ತು ಸೇವಾ ಮಾರ್ಗವನ್ನು ಮುಂದುವರಿಸಿಕೊಂಡು ಮೊಮ್ಮಕ್ಕಳು ಮುನ್ನಡೆಯುತ್ತಿರುವುದು ಗಮನಾರ್ಹವಾಗಿದೆ.

ತಾತನ ಜನಪರ ಚಿಂತನೆ, ಸರಳತೆ ಹಾಗೂ ಜನರೊಂದಿಗೆ ಬೆರೆಯುವ ಗುಣಗಳನ್ನು ಮೈಗೂಡಿಸಿಕೊಂಡು, ಇಂದಿನ ಪೀಳಿಗೆಯ ಮೊಮ್ಮಕ್ಕಳು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಜನರ ಸಂಕಷ್ಟಗಳಿಗೆ ಸ್ಪಂದಿಸುವುದು, ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವುದು ಹಾಗೂ ಸಾರ್ವಜನಿಕರೊಂದಿಗೆ ನಿರಂತರ ಸಂಪರ್ಕದಲ್ಲಿರುವುದನ್ನು ತಮ್ಮ ಜವಾಬ್ದಾರಿಯೆಂದು ಪರಿಗಣಿಸಿದ್ದಾರೆ.

"ತಾತ ಹಾಕಿಕೊಟ್ಟ ಜನಸೇವೆಯ ಹಾದಿಯಲ್ಲೇ ಮುನ್ನಡೆಯುವುದು ನಮ್ಮ ಸಂಕಲ್ಪ" ಎಂಬ ಸಂದೇಶದೊಂದಿಗೆ ಮೊಮ್ಮಕ್ಕಳು ಸೇವಾ ಕಾರ್ಯಗಳಲ್ಲಿ ಸಕ್ರಿಯರಾಗಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

# ಹೂವಿನ ಮೇಳ: ಗ್ಲಾಸ್ ಹೌಸ್‌ನಲ್ಲರಳಿದ ಸಾಂಸ್ಕೃತಿಕ ವೈಭವ



**ಸಾಂಸ್ಕೃತಿಕ ವೈಭವ**
● ಪರಮೇಶ ರಾಂಪುರೆ
ಬೆಂಗಳೂರು



ಬೆಂಗಳೂರಿನ ಹೃದಯಭಾಗದಲ್ಲಿರುವ ಐತಿಹಾಸಿಕ ಲಾಲ್‌ಬಾಗ್ ಸಸ್ಯಶಾಸ್ತ್ರೀಯ ಉದ್ಯಾನವನವು ಪ್ರತಿಯೊಬ್ಬ ಕನ್ನಡಿಗನ ಹೆಮ್ಮೆ. ಪ್ರತಿವರ್ಷ ಗಣರಾಜ್ಯೋತ್ಸವ (ಜನವರಿ) ಹಾಗೂ ಸ್ವಾತಂತ್ರ್ಯೋತ್ಸವದ (ಆಗಸ್ಟ್) ಶುಭ ಸಂದರ್ಭದಲ್ಲಿ ಇಲ್ಲಿ ನಡೆಯುವ 'ಲಾಲ್‌ಬಾಗ್ ಹೂವಿನ ಮೇಳ' ಇಡೀ ನಗರಕ್ಕೆ ಹಬ್ಬದ ಕಳೆಯನ್ನು ತರುತ್ತದೆ.

ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆ ಮತ್ತು ಮೈಸೂರು ತೋಟಗಾರಿಕೆ ಸಂಘ ಜಂಟಿಯಾಗಿ ಆಯೋಜಿಸುವ ಈ ಸಸ್ಯೋತ್ಸವವು ಪ್ರವಾಸಿಗರನ್ನು ತನ್ಮಯಗೊಳಿಸುತ್ತದೆ.

**ಗ್ಲಾಸ್ ಹೌಸ್‌ನಲ್ಲಿ ಕಲಾತ್ಮಕ ವೈಭವ**

ಲಾಲ್‌ಬಾಗ್‌ನ ಪ್ರಮುಖ ಆಕರ್ಷಣೆಯಾದ ಬೃಹತ್ ಗ್ಲಾಸ್ ಹೌಸ್ (Glass House) ಒಳಗೆ ಕಾಲಿಡುತ್ತಿದ್ದಂತೆ ವಿವಿಧ ವರ್ಣಗಳ, ವಿದೇಶಿ ಹಾಗೂ ದೇಶಿ ಅಪರೂಪದ ಹೂವುಗಳ ಸೌಂದರ್ಯ ಕಣ್ಣಿಗೆ ಕಟ್ಟುತ್ತದೆ. ಪ್ರತಿಯೊಂದು ಹೂವಿನ ಮೇಳಕ್ಕೂ ಒಂದು ನಿರ್ದಿಷ್ಟ ವಿಶೇಷ ಥೀಮ್ (Theme) ಅನ್ನು ಆಯ್ಕೆ ಮಾಡಲಾಗುತ್ತದೆ. ಕರ್ನಾಟಕದ ಇತಿಹಾಸ, ಸಾಂಸ್ಕೃತಿಕ ಸ್ಮಾರಕಗಳು ಹಾಗೂ ಮಹನೀಯರ ಸ್ಮರಣಾರ್ಥವಾಗಿ ಬೃಹತ್ ಹೂವಿನ ಕಲಾಕೃತಿಗಳನ್ನು ಇಲ್ಲಿ ಕಲಾತ್ಮಕವಾಗಿ ನಿರ್ಮಿಸಲಾಗುತ್ತದೆ.

ಈ ಬಾರಿಯ ಪ್ರದರ್ಶನದಲ್ಲಿ ಕರ್ನಾಟಕದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಅತ್ಯಂತ ಭವ್ಯವಾಗಿ ಮರುಸೃಷ್ಟಿಸಲಾಗಿದೆ:

**ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ಹಾಗೂ ಚಾವುಂಡರಾಯ:** ಗಂಗರ ಆಳ್ವಿಕೆಯ ಇತಿಹಾಸ, ವಿದ್ಯಾಧರ ಚಾವುಂಡರಾಯ ಮತ್ತು ಶ್ರವಣಬೆಳಗೊಳದ ವಿಂಧ್ಯಗಿರಿಯ 58.8 ಅಡಿ ಎತ್ತರದ ಬಾಹುಬಲಿ ವಿಗ್ರಹದ ಇತಿಹಾಸವನ್ನು ಬಿಂಬಿಸುವ ಮಾಹಿತಿ ಫಲಕಗಳು ಹಾಗೂ ಕಲಾಕೃತಿಗಳು ಗಮನ ಸೆಳೆಯುತ್ತವೆ.

**ಐತಿಹಾಸಿಕ ದೇವಾಲಯಗಳ ಸೃಷ್ಟಿ:** ಹೊಯ್ಸಳ ಹಾಗೂ ವಿಜಯನಗರ ಶೈಲಿಯ ಸುಂದರ ಗೋಪುರಗಳು, ಪ್ರಾಚೀನ ದೇವಾಲಯಗಳ ಮಾದರಿಗಳನ್ನು ಸಾವಿರಾರು ವರ್ಣರಂಜಿತ ಹೂವುಗಳಿಂದ ಸಜ್ಜುಗೊಳಿಸಲಾಗಿದೆ.

**ಐತಿಹಾಸಿಕ ಶಾಸನಗಳು:** ಮಂಡ್ಯದ ಅತಕೂರು ಶಾಸನದ 'ಕಾಳಿ ನಾಯಿಯ ಸ್ಮಾರಕ ವೀರಗಲ್ಲು' (ಕ್ರಿ.ಶ. 949–950) ಸೇರಿದಂತೆ ನಮ್ಮ ನಾಡಿನ ಪರಂಪರೆಯನ್ನು ಸಾರುವ ಚಿತ್ರಣಗಳನ್ನು ತೆ–ೋಟಗಾರಿಕೆ ವಿನ್ಯಾಸದೊಂದಿಗೆ ಜೋಡಿಸಲಾಗಿದೆ.

**ಆನೆ ಹಾಗೂ ಅಲಂಕಾರಿಕ ಕಲಾಕೃತಿಗಳು:** ರಾಜಶಾಯಿ ವೈಭವವನ್ನು ನೆನಪಿಸುವ ಅಲಂಕೃತ ಆನೆಯ ಬೃಹತ್ ವಿಗ್ರಹಗಳು ಮತ್ತು ದ್ವಾರಗಳು ಗ್ಲಾಸ್ ಹೌಸ್‌ಗೆ ರಾಜಕೀಯ ಕಳೆಯನ್ನು ನೀಡಿವೆ.

**ಹೂವುಗಳ ರಂಗೋಲಿ ಮತ್ತು ಗಾರ್ಡನ್ ಆಕರ್ಷಣೆಗಳು**

ಗ್ಲಾಸ್ ಹೌಸ್‌ನ ಒಳಗಷ್ಟೇ ಅಲ್ಲದೆ, ಹೊರಾಂಗಣದಲ್ಲೂ ಸಾಲು ಸಾಲಾಗಿ ಜೋಡಿಸಲಾದ ಸುಂದರ ಹೂವಿನ ಕಮಾನುಗಳು, ಹೂವುಗಳಿಂದ ಮಾಡಿದ ಬೃಹತ್ ಗೋಪುರಗಳು ಮತ್ತು ನೆಲದ ಮೇಲೆ ಬಿಡಿಸಿದಂತೆ ಕಾಣುವ ವಿವಿಧ ಬಣ್ಣದ 'ಹೂವಿನ ರಂಗೋಲಿ'ಗಳು ವೀಕ್ಷಕರನ್ನು ಮನಸೋಲಿಸುತ್ತವೆ.

ಅಷ್ಟೇ ಅಲ್ಲದೆ, ಪ್ರದರ್ಶನದ ಆವರಣದಲ್ಲಿ ಮಾಧ್ಯಮ ಸಂವಾದಗಳು, ಕಾರ್ಯಕ್ರಮಗಳು ಹಾಗೂ 'ಬಿಗ್ ಬಾಸ್' ನಂತಹ ಜನಪ್ರಿಯ ಮನರಂಜನಾ ಪ್ರಚಾರ ಮಳಿಗೆಗಳು ಸಾರ್ವಜನಿಕರ ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ.

**ಪ್ರಕೃತಿ ಪ್ರೇಮಿಗಳಿಗೆ ಸ್ವರ್ಗ**

ವಿವಿಧ ನಮೂನೆಯ ಬೋನ್ಸಾಯ್ ಗಿಡಗಳು, ಗೃಹ ಅಲಂಕಾರಿಕ ಸಸ್ಯಗಳು, ತೋಟಗಾರಿಕೆ ಉಪಕರಣಗಳು ಹಾಗೂ ಬೀಜ–ಗೊಬ್ಬರಗಳ ಮಾರಾಟ ಮಳಿಗೆಗಳು ಇಲ್ಲಿ ಲಭ್ಯವಿರುತ್ತವೆ. ಹಸಿರು ಪ್ರೇಮಿಗಳು ತಮ್ಮ ಮನೆಗೆ ಬೇಕಾದ ಅಪರೂಪದ ಗಿಡಗಳನ್ನು ಖರೀದಿಸಲು ಇದೊಂದು ಉತ್ತಮ ವೇದಿಕೆ. ಒಟ್ಟಾರೆಯಾಗಿ, ಲಾಲ್‌ಬಾಗ್ ಹೂವಿನ ಮೇಳವು ಕೇವಲ ಹೂವುಗಳ ಪ್ರದರ್ಶನವಲ್ಲ; ಅದು ನಮ್ಮ ಸಂಸ್ಕೃತಿ, ಇತಿಹಾಸ ಮತ್ತು ನಿಸರ್ಗ ಸೌಂದರ್ಯಗಳ ಸಮ್ಮಿಲನ. ಪ್ರಕೃತಿಯ ಮಡಿಲಲ್ಲಿ ಒಂದಷ್ಟು ಸಮಯ ಕಳೆದು, ಕೆಮೆರಾ ಕಣ್ಣಲ್ಲಿ ನೆನಪುಗಳನ್ನು ಬಂಧಿಸಲು ಬಯಸುವ ಪ್ರತಿಯೊಬ್ಬರಿಗೂ ಈ ಮೇಳವು ಮರೆಯಲಾಗದ ಅನುಭವ ನೀಡುತ್ತದೆ.

## ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ಮಕ್ಕಳು..!

• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್**







ದಿ. ಬಸವರಾಜ ಪಾಟೀಲ ಅವರು ತಮ್ಮ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡಿದ್ದ ಜನಸೇವೆ, ಸರಳತೆ, ಸಜ್ಜನಿಕೆ ಮತ್ತು ಅಭಿವೃದ್ಧಿಯ ಚಿಂತನೆಯನ್ನು ಅವರ ಮಕ್ಕಳು ಮುಂದುವರಿಸಿಕೊಂಡು ಸಾಗುತ್ತಿರುವುದು ಗಮನಾರ್ಹವಾಗಿದೆ.

ತಂದೆಯ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಮಕ್ಕಳು ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ತಂದೆಯ ಜನಪರ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ಅಧಿಕಾರಕ್ಕಿಂತ ಜನಸೇವೆಗೆ ಆದ್ಯತೆ ನೀಡಬೇಕು ಎಂಬ ದಿ. ಬಸವರಾಜ ಪಾಟೀಲ ಅವರ ಚಿಂತನೆ ಇಂದಿಗೂ ಅವರ ಕುಟುಂಬದ ಕಾರ್ಯಚಟುವಟಿಕೆಗಳಲ್ಲಿ ಪ್ರತಿಫಲಿಸುತ್ತಿದೆ.

"ತಂದೆ ಹಾಕಿಕೊಟ್ಟ ಜನಸೇವೆಯ ಹಾದಿಯಲ್ಲಿ ಮಕ್ಕಳು ಮುನ್ನಡೆಯುತ್ತಿರುವುದು ಅವರ ಆದರ್ಶಗಳಿಗೆ ಸಲ್ಲಿಸುವ ನಿಜವಾದ ಗೌರವ" ಎಂದು ಅಭಿಮಾನಿಗಳು ಹಾಗೂ ಹಿತೈಷಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದಿ. ಬಸವರಾಜ ಪಾಟೀಲ ಅವರ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರ ಜನಸೇವೆಯನ್ನು ಸ್ಮರಿಸುವುದರ ಜೊತೆಗೆ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಅವರ ಮಕ್ಕಳ ಸೇವಾ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.

## ಕೆಮಿಕಲ್ ಕಾರ್ಖಾನೆ ಹಠಾವ್ಹೋ ಆಂದೋಲನಕ್ಕೆ ಕ್ಷಣಗಣನೆ: ಭುಗಿಲೆದ್ದ ಜನತೆ

• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್**

ಪರಿಸರ ಮಾಲಿನ್ಯ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಹಾನಿಯಾಗುತ್ತಿದೆ ಎಂಬ ಆರೋಪಗಳ ಹಿನ್ನೆಲೆ, ಕೆಮಿಕಲ್ ಕಾರ್ಖಾನೆಗಳನ್ನು ಸ್ಥಳಾಂತರಿಸುವಂತೆ ಆಗ್ರಹಿಸಿ ನಡೆಯಲಿರುವ "ಕೆಮಿಕಲ್ ಕಾರ್ಖಾನೆ ಹಠಾವ್ಹೋ" ಆಂದೋಲನಕ್ಕೆ ಕ್ಷಣಗಣನೆ ಆರಂಭವಾಗಿದೆ.

ಈ ಹೋರಾಟಕ್ಕೆ ವಿವಿಧ ರೈತ ಸಂಘಟನೆಗಳು, ಸಾಮಾಜಿಕ ಸಂಘಟನೆಗಳು, ಯುವಕರು ಹಾಗೂ ಸಾರ್ವಜನಿಕರು ಬೆಂಬಲ ವ್ಯಕ್ತಪಡಿಸುತ್ತಿದ್ದು, ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಪರಿಸರ ಸಂರಕ್ಷಣೆ, ಶುದ್ಧ ಕುಡಿಯುವ ನೀರು ಮತ್ತು ಜನರ ಆರೋಗ್ಯದ ಹಿತದೃಷ್ಟಿಯಿಂದ ತಮ್ಮ ಹೋರಾಟ ನಡೆಯಲಿದೆ ಎಂದು ಹೋರಾಟಗಾರರು ತಿಳಿಸಿದ್ದಾರೆ.

ಆಂದೋಲನವು ಶಾಂತಿಯುತವಾಗಿ ನಡೆಯಲಿದ್ದು, ಸಂಬಂಧಿಸಿದ ಅಧಿಕಾರಿಗಳು ಹಾಗೂ ಸರ್ಕಾರ ಜನರ ಅಹವಾಲುಗಳನ್ನು ಗಂಭೀರವಾಗಿ ಪರಿಗಣಿಸಿ, ಕಾರ್ಖಾನೆಗಳ ಕುರಿತು ಬಂದಿರುವ ಆರೋಪಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ.

ಆಂದೋಲನದ ಹಿನ್ನೆಲೆಯಲ್ಲಿ ಪ್ರದೇಶದಲ್ಲಿ ಜನರಲ್ಲಿ ಕುತೂಹಲ ಹಾಗೂ ಚಟುವಟಿಕೆ ಹೆಚ್ಚಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಸಾಧ್ಯತೆ ಇದೆ.

# ಆರೋಗ್ಯ ತಪಾಸಣಾ ಶಿಬಿರಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ

• **ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ**



ವಿಧಾನಸಭಾ ಕ್ಷೇತ್ರದ ಜನರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿರುವ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ರೆಡ್ಡಿ ನಡೆಸುತ್ತಿರುವ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ನಗರದ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಈಸ್ಟ್ ಪಾಯಿಂಟ್ ಆಸ್ಪತ್ರೆ ಸಹಯೋಗದಲ್ಲಿ ನಡೆದ ನಾಲ್ಕನೇ ವಾರದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿದ ಎಲ್ಲ ವೃದ್ಧರಿಗೆ ಉಚಿತವಾಗಿ ಕನ್ನಡಕ ಹಾಗೂ ವಾಕಿಂಗ್ ಸ್ಟಿಕ್‌ಗಳನ್ನು ವಿತರಿಸಲಾಯಿತು.

ಶಿಬಿರದಲ್ಲಿ ಮಾತನಾಡಿದ ಸಂದೀಪ್ ರೆಡ್ಡಿ, ಕ್ಷೇತ್ರದಲ್ಲಿ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆ ನಿರೀಕ್ಷೆಗಿಂತ ಹೆಚ್ಚಿರುವುದು ಈ ಶಿಬಿರಗಳ ಮೂಲಕ ತಿಳಿಯುತ್ತಿದೆ ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ತಪಾಸಣೆಗೆ ಆಗಮಿಸುತ್ತಿದ್ದಾರೆ. ಬಹುತೇಕರಿಗೆ ವೈದ್ಯರು ಸಲಹೆ ಹಾಗೂ ಔಷಧೋಪಚಾರ ನೀಡುತ್ತಿದ್ದು, ಶಸ್ತ್ರಚಿಕಿತ್ಸೆ ಅಗತ್ಯವಿರುವವರನ್ನು ಈಸ್ಟ್ ಪಾಯಿಂಟ್ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಕೊಡಿಸುವ ವ್ಯವಸ್ಥೆಯನ್ನು ಟ್ರಸ್ಟ್‌ನ ಸ್ವಯಂಸೇವಕರು ಮಾಡುತ್ತಿದ್ದಾರೆ ಎಂದರು. ಹದಿಹರೆಯದ ಮಕ್ಕಳ ಆರೋಗ್ಯವೂ ಅತ್ಯಂತ ಮಹತ್ವದ್ದಾಗಿದ್ದು, ಮುಂದಿನ ದಿನಗಳಲ್ಲಿ ಶಾಲೆ ಹಾಗೂ ಕಾಲೇಜುಗಳಲ್ಲಿ ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವ ಕುರಿತು ಚಿಂತನೆ ನಡೆಸಲಾಗಿದೆ ಎಂದು ಅವರು ತಿಳಿಸಿದರು. ಆಶಾಡ ಮಾಸದ ಕೊನೆಯ ಸೋಮವಾರ ನಡೆಯಲಿರುವ ಪವಿತ್ರ ನಂದಿಗಿರಿ ಗಿರಿ ಪ್ರದಕ್ಷಿಣೆಗೆ ಆಗಮಿಸುವ ಭಕ್ತರಿಗೆ ಭಗತ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಕಾಫಿ ಮತ್ತು ತಿಂಡಿ ವ್ಯವಸ್ಥೆ ಮಾಡಲಾಗಿದೆ. ಯಲಹಂಕ ಶಾಸಕ ವಿಶ್ವನಾಥ್ ಅವರೊಂದಿಗೆ ತಾವು ಮತ್ತು ಕುಟುಂಬ ಸದಸ್ಯರು ಗಿರಿ ಪ್ರದಕ್ಷಿಣೆಯಲ್ಲಿ ಭಾಗವಹಿಸಿ ನಂದೀಶ್ವರನ ಆಶೀರ್ವಾದ ಪಡೆಯಲಿದ್ದೇವೆ ಎಂದರು.

ಇದೇ ವೇಳೆ ಜಿಲ್ಲೆಯ ಬರ ಪರಿಸ್ಥಿತಿ ಪರಿಶೀಲನೆಗಾಗಿ ಭಾನುವಾರ ಚಿಕ್ಕಬಳ್ಳಾಪುರಕ್ಕೆ ಆಗಮಿಸಲಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಸ್ವಾಗತಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು. ಶಿಬಿರದಲ್ಲಿ ಈಸ್ಟ್ ಪಾಯಿಂಟ್ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ, ಅಣಕನೂರು ವೆಂಕಟೇಶಪ್ಪ, ಆರ್.ಎಚ್.ಎಲ್.ರಾಹುಲ್, ಸಂದರ್ಶ್, ಸುಹಾಸ್, ಸುನಿಲ್, ಶ್ರೀಕಾಂತ್, ರಾಮಣ್ಣ, ಮಂಜುನಾಥ್ ರೆಡ್ಡಿ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮುಧೋಳ ಗ್ರಾಮದಲ್ಲಿ ಶಿವಲಿಂಗ ಶಿವಾಚಾರ್ಯರ 102ನೇ ಪುಣ್ಯಸ್ಮರಣೆ



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ತಾಲೂಕಿನ ಮುಧೋಳ (ಬಿ) ಗ್ರಾಮದ ಶ್ರೀ ಚರಮೂರ್ತಿ ಮಠದಲ್ಲಿ ಶ್ರೀಮದ್ ನಿರಂಜನ ಪ್ರಣವಸ್ವರೂಪಿ ಶ್ರೀ ಶಿವಲಿಂಗ ಶಿವಾಚಾರ್ಯರ 17ನೇ ವರ್ಷದ ಜಯಂತ್ಯುತ್ಸವ ಹಾಗೂ 102ನೇ ಪುಣ್ಯಸ್ಮರಣೋತ್ಸವ ಮುಕ್ತಾಯದ ಸನ್ನಿಹದಲ್ಲಿ ಗ್ರಾಮದಲ್ಲಿ ಶನಿವಾರ ಅತ್ಯಂತ ವಿಜೃಂಭಣೆಯಿಂದ ಧಾರ್ಮಿಕ ಕಾರ್ಯಕ್ರಮ ಹಾಗೂ ವೈಭವದ ಶೋಭಾ ಯಾತ್ರೆ ಜರುಗಿತು.

ಪರಮಪೂಜ್ಯರ ದಿವ್ಯ ಸಾನ್ನಿಧ್ಯ ಮತ್ತು ಸಮ್ಮುಖದಲ್ಲಿ ಹಡಗಾಪುರ ಹಾಗೂ ಮುಧೋಳ ಗ್ರಾಮಸ್ಥರ ನೇತೃತ್ವದಲ್ಲಿ ಜುಲೈ 18 ರಿಂದ ಪ್ರಾರಂಭಗೊಂಡಿದ್ದ ಏಕಾದಶ ರುದ್ರಾಭಿಷೇಕ ಮತ್ತು ಪ್ರವಚನ ಕಾರ್ಯಕ್ರಮಗಳ ಅಂಗವಾಗಿ ಇಂದು ಗ್ರಾಮದಲ್ಲಿ ಭವ್ಯ ರಥೋತ್ಸವ ಮತ್ತು ಶೋಭಾ ಯಾತ್ರೆ ನಡೆಯಿತು.

**ವೈಭವದ ಶೋಭಾ ಯಾತ್ರೆ ಮತ್ತು ಕಳಸ ಮೆರವಣಿಗೆ**

ಮೆರವಣಿಗೆಯಲ್ಲಿ ಶ್ವೇತ ವಸ್ತ್ರಧಾರಿಣಿಯರಾದ ಸುಮಂಗಲೆಯರು ಸಮ್ಮುಖ ವಹಿಸಿ, ಕಳಸ ಹಾಗೂ ಆರತಿ ತಟ್ಟೆಗಳನ್ನು ಹೊತ್ತು ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿದರು. ಅಲಂಕೃತ ವೈಭವದ ರಥ/ರಥದ ಮಾದರಿಯ ವಾಹನದಲ್ಲಿ ಶ್ರೀ ಗುರುಗಳನ್ನು ಹಾಗೂ ಪೂಜ್ಯರ ಪಭಾವಳಿಯನ್ನು ಪ್ರತಿಷ್ಠಾಪಿಸಿ, ಗ್ರಾಮದ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಶೋಭಾ ಯಾತ್ರೆ ಸಂಚರಿಸುವಾಗ ಭಕ್ತಾದಿಗಳು ಪೂಜ್ಯರಿಗೆ ಹೂಮಾಲೆ ಹಾಕಿ, ಶಾಲು ಹೊದಿಸಿ ಗೌರವ ಸಮರ್ಪಣೆ ಮಾಡಿದರು. ಮೆರವಣಿಗೆಯುದ್ದಕ್ಕೂ 'ಜೈ ಗುರುದೇವ' ಹಾಗೂ ಧಾರ್ಮಿಕ ಜಯಘೋಷಗಳು ಮೊಳಗಿದವು.

## ನಿತ್ಯ ಊಟ ವಿತರಣಾ ಕಾರ್ಯಕ್ರಮ



**ಮಂಚೇನಹಳ್ಳಿ:** ಬಸ್ ನಿಲ್ದಾಣದಲ್ಲಿರುವ ಶ್ರೀ ಬಲಮುರಿ ವಿನಾಯಕ ಆವರಣದ ಮುಂಭಾಗದಲ್ಲಿ ಚಾಲನೆ ನೀಡಲಾಯಿತು.

ಈ ಅನ್ನದಾನ ಕಾರ್ಯಕ್ರಮದ ಬಗ್ಗೆ ಮಾತನಾಡಿದ ಡಾ. ಮಧುಕರ್. ಮಾನಸ ಮೆಡಿಕಲ್ ಟ್ರಸ್ಟ್ ಸ್ಥಾಪನೆಯಾಗಿ 30 ವರ್ಷ ಕಳೆದಿದೆ. ಈ 30 ವರ್ಷದಲ್ಲಿ ಈ ಹಿಂದೆ ತಮ್ಮ ತಂದೆಯವರಾದ ಹೊಸೂರು ಸುಬ್ಬು ಡಾಕ್ಟರ್ ಎಂದು ಹೆಸರುವಾಸಿಯಾಗಿದ ನಮ್ಮ ತಂದೆಯವರು ಮೊಟ್ಟಮೊದಲ ಬಾರಿಗೆ ಗೌರಿಬಿದನೂರಿನಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಲು ಶುರು ಮಾಡಿದರು.

ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಕಣ್ಣಿನ ಶಸ್ತ್ರಚಿಕಿತ್ಸೆ ಟ್ರಸ್ಟ್ ವತಿಯಿಂದ ಮಾಡಿಸಿಕೊಂಡಿದ್ದಾರೆ. ತದನಂತರ 15 ವರ್ಷದ ಹಿಂದೆ ಈ ಟ್ರಸ್ಟ್ ಜವಾಬ್ದಾರಿಯನ್ನು ನಾನು ತೆಗೆದುಕೊಂಡು ವೃದ್ಧ ಆಶ್ರಮ ನಡೆಸುತ್ತಿದ್ದು ವೃದ್ಧರ ಆಶ್ರಮ ನಡೆಸುವಾಗ ಅಕ್ಕಿ ಹೇರಳವಾಗಿ ಬರುತ್ತಿತ್ತು. ಹೇಗೆ ಖರ್ಚು ಮಾಡೋದು ಎಂದು ಯೋಚಿಸಿ ಮಧ್ಯಾಹ್ನದ ಊಟ ನೀಡಲು ಸರ್ಕಾರ ಆಸ್ಪತ್ರೆಗಳಲ್ಲಿ ಶುರು ಮಾಡಿದೆವು ಎಂದಿದ್ದಾರೆ.




Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222

PRGI NO. (RNINO:KARKAN/2011/48371)